## ಅಧ್ಯಾಯ ೧೨
# ಪ್ರೇಕ್ಷಣೀಯ ಸ್ಥಳಗಳು

ಜಿಲ್ಲೆಯ ಪೂರ್ವಭಾಗದಲ್ಲಿರುವ ತಿರುಮಕೂಡಲು ನರಸೀಪುರ ತಾಲೂಕು, ಕಾವೇರಿ–ಕಪಿಲ ನದಿಗಳಿಂದಾಗಿ ಬಹು ಹಿಂದಿನಿಂದಲೂ ಚಾರಿತ್ರಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಮಹತ್ವವನ್ನು ಹೊಂದಿದೆ. ತಾಲೂಕಿನಲ್ಲಿ ಹರಿಯುವ ಕಾವೇರಿಯ ದಡದಲ್ಲಿ ಶಿಲಾಯುಗದ ಮಾನವರು ವಾಸಿಸುತ್ತಿದ್ದುದಕ್ಕೆ ಬೆನಕನಹಳ್ಳಿ, ಹೆಮ್ಮಿಗೆ ಮುಂತಾದೆಡೆಯಲ್ಲಿ ದೊರೆತಿರುವ ಪುರಾತತ್ವ ಅವಶೇಷಗಳನ್ನು ಉದಾಹರಿಸಬಹುದಾಗಿದೆ. ಗಂಗರ ರಾಜಧಾನಿ ಪಟ್ಟಣವಾಗಿ ಮೆರೆದ ತಲಕಾಡು ಇತಿಹಾಸದುದ್ದಕ್ಕೂ ಆಡಳಿತಕೇಂದ್ರವಾಗಿ, ಧಾರ್ಮಿಕನೆಲೆಯಾಗಿ ಮಹತ್ವದ ಪಾತ್ರ ವಹಿಸಿದ್ದು, ಪ್ರತೀ ವರ್ಷ ಇಲ್ಲಿ ನಡೆಯುವ ಬಂಡರಸಮ್ಮನ ಜಾತ್ರೆ, ಸಾಮಾನ್ಯವಾಗಿ ೧೨ ವರ್ಷಗಳಿಗೊಮ್ಮೆ ಜರುಗುವ ಪಂಚಲಿಂಗ ದರ್ಶನಗಳಿಂದಾಗಿ ಇಂದಿಗೂ ಧಾರ್ಮಿಕರನ್ನು ಸೆಳೆಯುತ್ತಿದೆ. ತಾಲೂಕು ಕೇಂದ್ರ ತಿರುಮಕೂಡಲು ನರಸೀಪುರವು ಕಪಿಲ–ಕಾವೇರಿ ನದಿಗಳ ಬಲದಂಡೆಯ ಮೇಲಿರುವ ಪಟ್ಟಣವಾಗಿದ್ದು, ಗುಂಜಾ ನರಸಿಂಹಸ್ವಾಮಿಯಿಂದಾಗಿ ಪ್ರಸಿದ್ಧವಾಗಿದ್ದರೆ, ಕಾವೇರಿ–ಕಪಿಲ–ಸ್ಫಟಿಕ ಸಂಗಮಸ್ಥಳದಲ್ಲಿರುವ ತಿರುಮ(ಹಾ) ಕೂಡಲು, ಅಗಸ್ತ್ಯೇಶ್ವರ ದೇವಾಲಯ, ವ್ಯಾಸರಾಜ ಶಾಖಾಮಠ ಹಾಗೂ ಅಲ್ಲಿ ನಡೆಯುವ ಕುಂಭಮೇಳಗಳಿಂದಾಗಿ ಧಾರ್ಮಿಕ ನೆಲೆಯಾಗಿದೆ. ಹೊಯ್ಸಳರ ಕಾಲದ ದೇವಾಲಯಗಳಿರುವ ಸೋಮನಾಥಪುರವು ವಿಶ್ವಖ್ಯಾತಿ ಪಡೆದಿದೆ. ಸೋಸಲೆಯ ವ್ಯಾಸರಾಜರ ಮಠ ಹಾಗೂ ಅಲ್ಲಿನ ಹೊನ್ನಾದೇವಿ ಜಾತ್ರೆ; ಚೋಳರ ಕಾಲದಲ್ಲಿ ಪ್ರಮುಖ ಅಗ್ರಹಾರವಾಗಿದ್ದು, ವ್ಯಾಸತೀರ್ಥರ ಜನ್ಮಸ್ಥಳವೂ ಆಗಿದ್ದ ಬನ್ನೂರಿನ ರಾಮದೇವರು ಹಾಗೂ ಹೆಮಾದ್ರಮ್ಮನ ಜಾತ್ರೆಗಳು ಬಹಳ ಹೆಸರುವಾಸಿಯಾಗಿವೆ. ಮುಡುಕುತೊರೆ ಬೆಟ್ಟದ ಶ್ರೀ ಶೈಲಮಲ್ಲಿಕಾರ್ಜುನ ದೇವಾಲಯ, ಅಲ್ಲಿ ನಡೆಯುವ ವಾರ್ಷಿಕ ರಥೋತ್ಸವ ಹಾಗೂ ದನದ ಜಾತ್ರೆಗಳಿಂದಾಗಿ ಅದೂ ಪ್ರಸಿದ್ಧವಾಗಿದೆ. ತಲಕಾಡು ಬಳಿ ಹರಿಯುವ ಕಾವೇರಿಯ ಆಚೆದಂಡೆಯಲ್ಲಿರುವ ತಡಿಮಾಲಂಗಿಯು ಚೋಳರ ಕಾಲದ ದೇವಾಲಯಗಳಿಂದಾಗಿ ಹೆಸರು ಮಾಡಿದ್ದರೆ, ಅದರ ನೆರೆಯ 'ಕಲಿಯೂರು', ೧೦೦೬ರಲ್ಲಿ ಜರುಗಿದ ಪ್ರಸಿದ್ಧ ಕಲಿಯೂರು ಕಾಳಗವನ್ನು ಕಂಡ ನೆಲೆಯಾಗಿದ್ದು, ಅದನ್ನು ಸಾರುವ ಶಿಲಾಶಾಸನವಿಂದು ಊರಲ್ಲಿ ಅನಾಥವಾಗಿ



ಬಿದ್ದಿದೆ. ಮೂಗೂರಿನ ದೇಶೇಶ್ವರ ಮತ್ತು ತ್ರಿಪುರಸುಂದರಮ್ಮಣಿ ದೇವಾಲಯಗಳು ಸುಂದರವಾಗಿದ್ದು, ಅಲ್ಲಿ ನಡೆಯುವ ವಾರ್ಷಿಕ ಜಾತ್ರೆಗಳೂ ಅಷ್ಟೇ ಪ್ರಸಿದ್ಧವಾಗಿವೆ. ಅಲ್ಲದೇ ತಾಲೂಕಿನ ಕೊಳತೂರು (ಸೋಮೇಶ್ವರ), ಗರ್ಗೇಶ್ವರಿ (ಗರ್ಗೇಶ್ವರ), ಮರಡೀಪುರ (ಮಲ್ಲಿಕಾರ್ಜುನ), ಕುರುಬೂರು (ಹೆಗ್ಗೇಶ್ವರ), ಚಿದರಳ್ಳಿ (ಸೋಮೇಶ್ವರ) ಅಕ್ಕೂರು (ಚೋಳಪಾಂಡೇಶ್ವರ), ಆಲ್ಗೋಡು, (ಚನ್ನಕೇಶವ), ತುಂಬಲ (ಕಂಬದ ನರಸಿಂಹ), ಹಿರಿಯೂರು (ಜಲಂದೇಶ್ವರ), ಜೋಡಿಬಸವನಪುರ (ಮಹಾಬಲೇಶ್ವರ) ಮುಂತಾದ ಊರುಗಳಲ್ಲಿರುವ ಪ್ರಾಚೀನ ದೇವಾಲಯಗಳು; ನಿಲಸೋಗೆ, ದೊಡ್ಡಹುಂಡಿ, ಕಲಿಯೂರು, ತಡಿಮಾಲಂಗಿ, ತಲಕಾಡು ಮುಂತಾದೆಡೆಗಳಲ್ಲಿರುವ ಶಾಸನ–ವೀರಗಲ್ಲುಗಳು ವಿಶಿಷ್ಟವಾಗಿದ್ದು, ಉಲ್ಲೇಖಾರ್ಹವಾಗಿವೆ. ಬೆಟ್ಟಳ್ಳಿ ಬಳಿಯ ವಡ್ಗಲ್ ರಂಗನಾಥನ ಬೆಟ್ಟ, ಉಕ್ಕಲಗೆರೆ ಬಳಿಯ ಮಲರಾಯನಬೆಟ್ಟ, ತುಂಬಲದ ಬಳಿಯ ಕಂಬದರಾಯನ ಬೆಟ್ಟ, ಕಲಿಯೂರಿನ ಗಡಿಗ್ರಾಮ ಕುಂತೂರಿ (ಕೊಳ್ಳೇಗಾಲ ತಾ.)ನ ಕುಂತೂರು ಬೆಟ್ಟ, ಆದಿಬೆಟ್ಟಹಳ್ಳಿ ಗಡಿಯಲ್ಲಿರುವ ಬಜ್ಜಿ ಬೆಟ್ಟ ಮುಂತಾದವು ಚಾರಣಕ್ಕೆ ಹೇಳಿ ಮಾಡಿಸಿದಂತಿವೆ. ಮುಡುಕುತೊರೆಯ ಬಳಿ ಕಾವೇರಿಯ ಆಚೆದಡದಲ್ಲಿರುವ ಖಾಸಗಿ ಪ್ರವಾಸಿಧಾಮ ಹಾಗೂ ಸಮೀಪದ ಹೆಮ್ಮಿಗೆ ಬಳಿಯ ಮಾಧವಮಂತ್ರಿ ಅಣೆ ಆಕರ್ಷಕವಾಗಿವೆ. ಹೀಗೆ ವೈವಿಧ್ಯತೆಯಿಂದ ಕೂಡಿರುವ ತಾಲೂಕಿನ ಪ್ರೇಕ್ಷಣೀಯ ಸ್ಥಳಗಳನ್ನು ಇಲ್ಲಿ ಪರಿಚಯಿಸಲಾಗಿದ್ದು, ಕಂಸದಲ್ಲಿ ಆಯಾ ಗ್ರಾಮದ ಜನಸಂಖ್ಯೆಯನ್ನು ೨೦೦೧ರ ಜನಗಣತಿಯಂತೆ ನೀಡಲಾಗಿದೆ.

**ಆಲ್ಗೋಡು (೧೧೭೫):** ತಾಲೂಕು ಕೇಂದ್ರ ನರಸೀಪುರದಿಂದ ಎರಡು ಕಿ.ಮೀ. ದಕ್ಷಿಣಕ್ಕೆ ಚಾಮರಾಜನಗರ ರಸ್ತೆಯಲ್ಲಿದ್ದು ಪ್ರಸ್ತುತ ನರಸೀಪುರ ಪಟ್ಟಣದ ಭಾಗವೇ ಆಗಿಹೋಗುವುದರಲ್ಲಿದೆ. ಇಲ್ಲಿಂದ ಈವರೆಗೆ ೧೫ ಶಾಸನಗಳು ಪತ್ತೆಯಾಗಿವೆ. ನೆರೆಯ ನರಸೀಪುರದಲ್ಲಿ ಆಲುಗೋಡಿನ ಉಲ್ಲೇಖವಿರುವ ಮೂರು ಶಾಸನಗಳು ಪತ್ತೆಯಾಗಿವೆ. ಅವುಗಳಲ್ಲಿ ಗಂಗ ಶ್ರೀಪುರುಷನ ಶಾಸನವೇ ಪ್ರಾಚೀನದ್ದಾಗಿದ್ದು, ಭೂದಾನದ ಉಲ್ಲೇಖವಿದೆಯಾದರೂ ವಿವರ ಹಾಳಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಆಲುಗೋಡು' ಎಂದೇ ಉಲ್ಲೇಖಿತಗೊಂಡಿರುವ ಇದಕ್ಕೆ 'ಕುಲೋತ್ತುಂಗಪುರ' ಎಂಬ ಅಭಿದಾನವೂ ಇದ್ದ ಅಂಶ ತಿ.ನರಸೀಪುರದ ೧೧೮೮ರ ಶಾಸನದಿಂದ ಗೊತ್ತಾಗುತ್ತದೆ. ಅಲ್ಲದೆ ನರಸೀಪುರದ ೧೨೯೦ರ ಇನ್ನೊಂದು ಶಾಸನದಲ್ಲಿ ಇದನ್ನು 'ಸರ್ವನಮಸ್ಯದಗ್ರಹಾರಂ ದಕ್ಷಿಣ ವಾರಣಾಸಿ ಸರ್ವಜ್ಞ ಪ್ರಸನ್ನ ಚನ್ನಕೇಶವಪುರವಾದ ಆಲುಗೋಡು ಗ್ರಾಮ' ಎಂದೇ ಕರೆಯಲಾಗಿದೆ. ಈ ಶಾಸನಗಳಿಂದ ಹಿಂದೆ ಇದು ಅಗ್ರಹಾರವಾಗಿದ್ದ ಅಂಶ ವೇದ್ಯವಾಗುತ್ತದೆ. ಅಲ್ಲದೆ ಇದೇ ಆಲುಗೋಡು ಗ್ರಾಮದ ವ್ಯಾಪ್ತಿಯಲ್ಲಿ ಅನಂತರದಲ್ಲಿ ಆದಿಗುಂಜಾನರಸಿಂಹಸ್ವಾಮಿ ಗುಡಿ ನಿರ್ಮಾಣಗೊಂಡಾಗ ನರಸಿಂಹಪುರವು ಹುಟ್ಟಿಕೊಂಡಿರುವಂತೆ ಭಾಸವಾಗುತ್ತದೆ. ಈ ಗ್ರಾಮವು ಹೊಳೆದಂಡೆಯಲ್ಲಿದ್ದು, ನದಿ ಪ್ರವಾಹವು ತರುತ್ತಿದ್ದ ಹಾಲಿನಂತಹ ಗೋಡು ಮಣ್ಣಿನಿಂದಾಗಿ ಇದಕ್ಕೆ 'ಆಲುಗೋಡು' ಎಂಬ ಹೆಸರು ಬಂದಿದೆಯೆಂದು ತರ್ಕಿಸಬಹುದಾಗಿದೆ.

ಆಲುಗೋಡಿನ ಕೆರೆಯ ಬಳಿ ಇರುವ ಸುಮಾರು ೧೦ನೆಯ ಶತಮಾನದ ಶಾಸನದಲ್ಲಿ ಮಹಾಬಲಯ್ಯನ ಮಗ ಚಾವುಂಡನ ಉಲ್ಲೇಖವಿದ್ದು, ಅಲ್ಲೇ ಇರುವ ಇನ್ನೊಂದು ಶಾಸನದಿಂದ, ಸತ್ಯವಾಕ್ಯ ಪೆರ್ಮಾನಡಿಯು ಆಳುತ್ತಿದ್ದಾಗ ಗೋವಿಂದರಸನ ಪೆರ್ಗಡೆ ಚಾಮುಂಡಯ್ಯನು ಊರ ಕೆರೆಗೆ ತೂಬನ್ನಿಕ್ಕಿಸಿದ ಅಂಶವನ್ನು ದಾಖಲಿಸುತ್ತದೆ. ಇದರಿಂದ ಆಲುಗೋಡಿನ ಪ್ರಾಚೀನತೆಯನ್ನು ಸುಮಾರು ೯–೧೦ನೆಯ ಶತಮಾನಕ್ಕೆ ಗುರುತಿಸಬಹುದಾಗಿದೆ. ಆಲ್ಗೋಡು ಗ್ರಾಮದ ಬಲಿಮಂಟಪದ ಕಂಬದ ಮೇಲಿರುವ ೧೨೭೮ರ ಶಾಸನ, ಆಲುಗೋಡ ಅಕ್ಕಸಾಲೆ ಕೇತಾಚಾರಿಯ ಭೋಗಾಚಾರಿಯು ದೇವಾಲಯ ನಿರ್ಮಿಸಿದ್ದನ್ನು ದಾಖಲಿಸಿದೆ. ನರಸೀಪುರದ ಸ್ನಾನಘಟ್ಟದ ಮೆಟ್ಟಿಲಿನ ಭಾಗವಾಗಿರುವ ೧೨೯೦ರ ಶಾಸನವು ಮುಮ್ಮಡಿ ನರಸಿಂಹನ ಆಳ್ವಿಕೆಯನ್ನು ಉಲ್ಲೇಖಿಸುತ್ತಿದ್ದು, ಮಹಾಪ್ರಧಾನ ಪೆರುಮಾಳದೇವದಂಡನಾಯಕನು ಅಗ್ರಹಾರ ಆಲುಗೋಡಿನಲ್ಲಿದ್ದ ಕೇಶವ ದೇವರು ಹಾಗೂ ಊರ ಈಶಾನ್ಯದ ಮೂಲಸ್ಥಾನದ ಶ್ರೀರಂಗನಾಥ ದೇವರ ಗುಡಿಗಳಿಗೆ ರಂಗಮಂಟಪವನ್ನೂ ಹಾಗೂ ಆಲುಗೋಡು ಗ್ರಾಮಕ್ಕೆ ಸಭಾಮಂಟಪವನ್ನೂ ನಿರ್ಮಿಸಿದ್ದ ಅಂಶವನ್ನು ದಾಖಲಿಸುತ್ತದೆ.

ಊರಲ್ಲಿಂದು ಪ್ರಾಚೀನ ಕಾಲದ ಚನ್ನಕೇಶವ ದೇವಾಲಯವಿದೆ. ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿರುವ ಈ ದೇವಾಲಯವೇ ಇಲ್ಲಿಯ ೧೨೯೦ರ ಶಾಸನದಲ್ಲಿ ಉಕ್ತವಾಗಿರುವ ಕೇಶವಗುಡಿಯಾಗಿದೆ. ಗರ್ಭಗೃಹದಲ್ಲಿ ಆಳೆತ್ತರದ ಕೇಶವನ ಸುಂದರ ಶಿಲ್ಪವಿದೆ. ಆದರೆ ಈ ಗುಡಿಯಿಂದು ಶಿಥಿಲಾವಸ್ಥೆಯಲ್ಲಿದೆ. ಊರಾಚೆ ಇರುವ ಸಿದ್ಧೇಶ್ವರ ಗುಡಿ ಬಳಿ ಇರುವ ಶಾಸನ, ಗಂಗ ಶ್ರೀಪುರುಷನ ಕಾಲದ್ದಾಗಿದ್ದು, ಅಲ್ಲೇ ಇರುವ ಇನ್ನೊಂದು ಶಾಸನದ ಶಿರೋಭಾಗದಲ್ಲಿ ಪದ್ಮಾಸೀನ ಯತಿಯ ಕೆತ್ತನೆಯಿದ್ದು, ಕೆಳಗೆ ಶಾಸನವಿದೆ. ಈ ಗುಡಿಯ ಅಧಿಷ್ಠಾನದ ಮೇಲೆ ಸುಮಾರು ೧೦–೧೧ನೆಯ ಶತಮಾನದ ಶಾಸನವಿದೆ. ಇಂದು ಸಂಪೂರ್ಣ ಜೀರ್ಣೋದ್ಧಾರಗೊಂಡಿರುವ ಈ ಗುಡಿಯ ಪರಿಸರದಲ್ಲಿ ಭೈರವಶಿಲ್ಪ ಹಾಗೂ ಮೂರ್‍ನಾಲ್ಕು ವೀರಗಲ್ಲುಗಳಿವೆ. ಆಲುಗೋಡು–ನರಸೀಪುರ ರಸ್ತೆಯಲ್ಲಿ ಪಟಾಲದಮ್ಮನ ಗುಡಿ ಬಳಿ ವೀರಗಲ್ಲು ಹಾಗೂ ಅನತಿ ದೂರದಲ್ಲಿ ಮಾಸ್ತಿಕಲ್ಲುಗಳಿವೆ. ಉಳಿದಂತೆ ಊರಲ್ಲಿ ಪಟಾಲದಮ್ಮ, ಮಾರಮ್ಮ, ದಂಡಿನ ಮಾರಮ್ಮ, ಉಪ್ಪರಿಗೆ ಬಸವೇಶ್ವರ, ಕಾಳಮ್ಮ, ಲಕ್ಷ್ಮಮ್ಮನ ಗುಡಿ, ಮಂಟೇಸ್ವಾಮಿ ಗದ್ದುಗೆ ಮುಂತಾದವುಗಳಿವೆ.

**ತಲಕಾಡು (೮೮೪೨):** ತಾಲೂಕು ಕೇಂದ್ರ ನರಸೀಪುರದಿಂದ ಆಗ್ನೇಯಕ್ಕೆ ೧೪ ಕಿ.ಮೀ. ಅಂತರದಲ್ಲಿ ಕಾವೇರಿಯ ಎಡದಂಡೆಯ ಮೇಲಿರುವ ತಲಕಾಡಿಗೆ, ಕಾವೇರಿ ನದಿಯೂ ಕೊರಳಹಾರದಂತೆ ಶೋಭಿಸುತ್ತಿದೆ. ಇದು ಗಂಗರ ರಾಜಧಾನಿ ಪಟ್ಟಣವಾಗಿ ಮೆರೆದಿದ್ದು, ಶಾಸನಗಳಲ್ಲಿ ಪೆನ್ನಾಗರ, ತಲೈಕಾಟ್, ತಲೈಕಾಡು, ತಲವನಪುರ ಎಂದೆಲ್ಲ ಉಲ್ಲೇಖಿತಗೊಂಡಿದ್ದು, ಚೋಳರ ಆಡಳಿತದಲ್ಲಿ 'ರಾಜರಾಜಪುರ' (೧೦೦೪–೧೧೧೬) ಎಂಬ ಅಭಿದಾನವನ್ನೂ ಪಡೆದಿತ್ತು. ತಲಕಾಡು ಪರಿಸರದಲ್ಲಿ ಈವರೆಗೆ ಲಭಿಸಿರುವ, ವಿವಿಧ ಕಾಲಕ್ಕೆ ಸೇರಿದ ಸುಮಾರು ೭೦ಕ್ಕೂ ಹೆಚ್ಚು ಶಾಸನಗಳಿಂದ ತಲಕಾಡಿನ



ಚಾರಿತ್ರಿಕ ಮಹತ್ವವನ್ನೂ ಸಾಂಸ್ಕೃತಿಕ ಹಿರಿಮೆಯನ್ನೂ ಅರಿಯಬಹುದಾಗಿದೆ. 'ತಲ' ಮತ್ತು 'ಕಾಡ' ಎಂಬ ಕಿರಾತ ಸೋದರರಿಂದಾಗಿ ಈ ಪಟ್ಟಣಕ್ಕೆ 'ತಲಕಾಡು' ಎಂಬ ಹೆಸರು ಬಂತೆಂದು ಸಾಂಪ್ರದಾಯಿಕವಾಗಿ ಹೇಳಲಾಗುತ್ತದೆ. ಆದರೆ ತಾಳೆವನದ ಬದಿಯಲ್ಲಿ ಈ ಊರು ಹುಟ್ಟಿಕೊಂಡುದರಿಂದ ಇದಕ್ಕೆ 'ತಲೈಕಾಟ್', 'ತಲಕಾಡು' ಎಂಬ ಹೆಸರು ಬಂತೆಂಬ ನಾಮನಿಷ್ಪತ್ತಿಯನ್ನು ಸ್ವೀಕರಿಸುವುದೇ ಉಚಿತವೆಂದು ತೋರುತ್ತದೆ. ಇದಕ್ಕೆ 'ಗಜಾರಣ್ಯಕ್ಷೇತ್ರ' ಎಂಬ ಹೆಸರೂ ಇದ್ದು, ಗಜಗಳು ಯಥೇಚ್ಛವಾಗಿದ್ದವೆಂಬ ಐತಿಹ್ಯವನ್ನೂ ಸ್ಥಳೀಯವಾಗಿ ಹೇಳಲಾಗುತ್ತದೆ. ಅಲ್ಲದೇ ಶಾಪದಿಂದಾಗಿ ಆನೆಯ ಜನ್ಮವನ್ನು ಪಡೆದಿದ್ದ ಯತಿ ಸೋಮದತ್ತ ಮತ್ತವನ ಶಿಷ್ಯರು ಗಜರೂಪದಲ್ಲಿ ಶಿವನನ್ನು ಆರಾಧಿಸುತ್ತಿದ್ದು, ಮೋಕ್ಷ ಪಡೆದುದರಿಂದ ಗಜಾರಣ್ಯಕ್ಷೇತ್ರ ಎಂಬ ಹೆಸರು ಇದಕ್ಕೆ ಬಂತೆಂದೂ ಹೇಳಲಾಗುತ್ತದೆ. ಮಿಗಿಲಾಗಿ ಶ್ರೀರಾಮನು ಭೇಟಿ ನೀಡಿ ಇಲ್ಲಿನ ಶಿವಲಿಂಗವನ್ನು ಪೂಜಿಸಿ ಲಂಕೆಗೆ ತೆರಳಿದನೆಂದೂ ಅಭಿಪ್ರಾಯವಿದೆ. ಗಂಗ, ಚೋಳ, ಹೊಯ್ಸಳರ ಆಳ್ವಿಕೆಯಲ್ಲಿ ಮಹತ್ವ ಪಡೆದಿದ್ದ ಈ ಪಟ್ಟಣದಲ್ಲಿ ಏಳು ಪುರ (ಕೇರಿ)ಗಳೂ, ಐದು ಮಠಗಳೂ ಇದ್ದವೆಂದು ಶಾಸನಗಳು ಪ್ರತಿಪಾದಿಸುತ್ತವೆ. ತಿರುಮಕೂಡಲು ನರಸೀಪುರವು ತಾಲೂಕು ಕೇಂದ್ರವಾಗುವುದಕ್ಕೆ (೧೮೬೮) ಮೊದಲು, ಇದೇ ತಾಲೂಕು ಕೇಂದ್ರವಾಗಿದ್ದು, ತಾಲೂಕಿನ ಹೆಸರೂ ಕೂಡ ೧೮೮೨ರವರೆಗೆ ತಲಕಾಡು ಎಂದೇ ಇತ್ತು. ಆನಂತರದಲ್ಲಿ ಕೇವಲ ಹೋಬಳಿ ಕೇಂದ್ರವಾಗಿ ಮುಂದುವರಿದಿದೆ. ಇಂದು ಕೇವಲ ಗ್ರಾಮಪಂಚಾಯಿತಿ ಕೇಂದ್ರವಾಗಿರುವ ತಲಕಾಡು ಹಿಂದೆ ಪುರಸಭೆಯನ್ನೂ ಹೊಂದಿತ್ತು.

ಪ್ರಾಚೀನ ತಲಕಾಡು ಪಟ್ಟಣವೂ ಸೇರಿದಂತೆ ಸುಮಾರು ಎರಡೂವರೆ ಚ.ಕಿ.ಮೀ. ಪ್ರದೇಶವನ್ನು ವ್ಯಾಪಿಸಿರುವ ಮರಳುರಾಶಿ ಕೆಲವೆಡೆ ೨೦ ಮೀ. ಎತ್ತರವಿದೆ. ಆದರೆ ಶಾಸನಾಧಾರ ಹಾಗೂ ಉತ್ಖನನಾಧಾರಗಳ ಮೂಲಕ ಈ ಮರಳುರಾಶಿ ಸುಮಾರು ೧೪ನೆಯ ಶತಮಾನದ ಮಧ್ಯಭಾಗದಲ್ಲಿ ರೂಪುಗೊಳ್ಳಲಾರಂಭಿಸಿ ೧೭ನೆಯ ಶತಮಾನದ ಆರಂಭದ ದಶಕಕ್ಕಾಗಲೇ ತಲಕಾಡು ಮರಳುರಾಶಿಯಿಂದ ಮುಚ್ಚಿಹೋಗಿರುವ ಅಂಶ ಸ್ಪಷ್ಟವಾಗುತ್ತದೆ. ಆದರೆ ಮುಂದೆ ೨೦ನೆಯ ಶತಮಾನದ ಆರಂಭದಲ್ಲಿ (೧೯೨೫) ಮರಳು ರಾಶಿಯನ್ನು ಅಗೆದು, ಪ್ರಾಚೀನ ದೇವಾಲಯಗಳನ್ನು ಸಾರ್ವಜನಿಕ ವೀಕ್ಷಣೆಗೆ ತೆರವು ಮಾಡಲಾಯಿತು. ಅಲ್ಲದೇ, ಮರಳುರಾಶಿಯ ಕುಸಿತವನ್ನು ನಿಯಂತ್ರಿಸಲು ಗೇರುಮರಗಳನ್ನು ನೆಟ್ಟು ಅಭಿವೃದ್ಧಿಪಡಿಸಲಾಯಿತು.

ತಲಕಾಡು ಸುಮಾರು ಆರನೆಯ ಶತಮಾನದಿಂದ ಗಂಗರ ರಾಜಧಾನಿಯಾಗಿದ್ದರೂ, ತಲಕಾಡಿನಲ್ಲಿ ದೊರೆಯುವ ಗಂಗಶಾಸನಗಳಲ್ಲಿ ತಲಕಾಡನ್ನು ರಾಜಧಾನಿ ಪಟ್ಟಣವೆಂದು ಕರೆಯದೇ ಇರುವುದು ಉಲ್ಲೇಖಾರ್ಹ. ತಲಕಾಡಿನ ಶಾಸನಗಳಲ್ಲಿ ಗಂಗ ಶ್ರೀಪುರುಷನ ೭೨೬ರ ಶಾಸನವೇ ಅತ್ಯಂತ ಪ್ರಾಚೀನದ್ದಾಗಿದ್ದು, ಅದರಲ್ಲಿ ತಲಕಾಡಿನ (ಪೆನ್ನಾಗರ) ೨೫ ಪುರಪ್ರಮುಖರು, ಸಿಂಧರಸ, ದೇವಶಕ್ತಿ ಅರಸ ಹಾಗೂ ಪರಮಗೂಳನ ಮಗನಾದ ಅರಿಕೇಸರಿಯರ ಉಲ್ಲೇಖವಷ್ಟೇ ಇದ್ದು, ಉಳಿದ ವಿವರ ಹಾಳಾಗಿದೆ. ಇಲ್ಲಿನ ಗುಡಿ ಬಳಿಯಿರುವ ನೀತಿಮಾರ್ಗ ಪೆರ್ಮಾಡಿಯ

ಕಾಲಕ್ಕೆ ಸೇರಿದ ೯೩೫ರ ಶಾಸನದಲ್ಲಿ ತಲಕಾಡು ಮಹಾನಗರವನ್ನು ೨೫ ಪಟ್ಟಣ ವಸಂತರ ಮುಖಂಡನಾದ ಮಂಚಯ್ಯನು ಆಳುತ್ತಿದ್ದಾಗ ಕೆರೆಯ ದುರಸ್ತಿಗೆಂದು ಬಿತ್ತುವಾಟವಾಗಿ ಭೂದಾನ ನೀಡಿದ ಉಲ್ಲೇಖವಿದೆ. ಇದರಿಂದ ಇದು ಹಿಂದೆ ೨೫ ಪುರಪ್ರಮುಖರನ್ನು ಒಳಗೊಂಡ ಸಭೆಯ ಆಡಳಿತಕ್ಕೊಳಪಟ್ಟಿದ್ದ ಅಂಶ ಸ್ಪಷ್ಟವಾಗುತ್ತವೆ. ವೈದ್ಯನಾಥೇಶ್ವರ ಗುಡಿಯ ಪ್ರಾಕಾರದೊಳಗಿನ ಕಾಲಭೈರವಗುಡಿ ಬಳಿಯಿರುವ ೯೮೭ರ ಶಾಸನ, ಸೇಕಟ್ಟನು ಗತಿಸಿದ ಅಂಶವನ್ನು ದಾಖಲಿಸುತ್ತದೆ. ಗಂಗರ ಕಾಲದಲ್ಲಿ ಜೈನಬಸದಿ, ವೈದ್ಯನಾಥೇಶ್ವರ, ಪಾತಾಳೇಶ್ವರ, ಮರಳೇಶ್ವರ ಗುಡಿಗಳು ತಲಕಾಡಿನಲ್ಲಿ ನಿರ್ಮಾಣಗೊಂಡವು. ಸುಮಾರು ೧೦೦೪–೦೬ರಲ್ಲಿ ತಲಕಾಡನ್ನು ವಶಪಡಿಸಿಕೊಂಡ ಚೋಳ ಒಂದನೆಯ ರಾಜರಾಜನು ಅದಕ್ಕೆ 'ರಾಜರಾಜಪುರ' ಎಂಬ ಅಭಿದಾನವನ್ನು ನೀಡಿ, ಪ್ರಾಂತೀಯ ಕೇಂದ್ರವನ್ನಾಗಿ ಮಾಡಿಕೊಂಡನು. ಅಲ್ಲಿಂದಾಚೆಗೆ ಸುಮಾರು ಒಂದು ಶತಮಾನ ಕಾಲ ಚೋಳರ ಆಡಳಿತಕ್ಕೆ ಒಳಪಟ್ಟಿದ್ದು ಚೋಳರ ಕಾಲದಲ್ಲಿ ರಾಜರಾಜೇಶ್ವರ, ವಿಣ್ಣಾಗಾರ ಆಳ್ವಾರ್ ಗುಡಿ ಮುಂತಾದವು ತಲಕಾಡಿನಲ್ಲಿ ನಿರ್ಮಾಣಗೊಂಡ ಅಂಶವನ್ನೂ. ತಲಕಾಡಿನ ವೈದ್ಯನಾಥೇಶ್ವರ, ವೈಕುಂಠ ನಾರಾಯಣ ಹಾಗೂ ಪಾತಾಳೇಶ್ವರ ಗುಡಿ ಪರಿಸರದಲ್ಲಿರುವ ಚೋಳ ಶಾಸನಗಳು ಸಮರ್ಥಿಸುತ್ತವೆ. ಆದರೆ ಅವನ್ನು ಇಂದು ತಲಕಾಡಿನಲ್ಲಿ ಗುರುತಿಸಲಾಗುತ್ತಿಲ್ಲ. ಮುಂದೆ ಚೋಳದಂಡನಾಯಕ ಆದಿಯಮ್ಮನನ್ನು ಹೊರದಬ್ಬಿ, 'ತಲಕಾಡುಗೊಂಡ' ಎಂಬ ಬಿರುದನ್ನು ಧರಿಸಿದ ಹೊಯ್ಸಳ ವಿಷ್ಣುವರ್ಧನನು ತಲಕಾಡಿನಲ್ಲಿ ಕೀರ್ತಿನಾರಾಯಣ ಪೆರುಮಾಳ್ ದೇವರನ್ನು ೧೧೧೭ರ ಡಿಸೆಂಬರ್ ಏಳರಂದು ಪ್ರತಿಷ್ಠಾಪಿಸಿದಾಗ, ದೇವರ ಪೂಜಾವಿಧಿ ತಿರುವಿಡಿಯಾಟಗಳಿಗೆಂದು ಕುಕ್ಕೂರು, ಕಿರುವಿಣ್ಣಾಗಾರ (ವಿಜಯಪುರ) ಹಾಗೂ ಒಡಪಟ್ಟಿ ಗ್ರಾಮಗಳನ್ನು ಸರ್ವಮಾನ್ಯವಾಗಿ ಮಲಪ್ಪಗೌಡನು ದಾನನೀಡಿದ ಅಂಶವನ್ನು ತಲಕಾಡಿನ ಕೀರ್ತಿನಾರಾಯಣಗುಡಿಯ ತಳಪಾದಿಕಲ್ಲ ಮೇಲಿರುವ ೧೧೧೭ರ ಶಾಸನ ಖಚಿತಪಡಿಸುತ್ತದೆ. ಆನಂತರ ಹೊಯ್ಸಳರ ಆಡಳಿತಾವಧಿಯಲ್ಲಿ ಪ್ರಮುಖ ಪಟ್ಟಣವಾಗಿ ಬೆಳೆದ ಅಂಶ ಹೊಯ್ಸಳರ ಕಾಲಕ್ಕೆ ಸೇರಿದ ಹತ್ತಾರು ಶಾಸನಗಳಿಂದ ಸ್ಪಷ್ಟವಾಗುತ್ತದೆ. ವಿಜಯನಗರ ಕಾಲದಲ್ಲಿ ತಲಕಾಡಿನಿಂದಾಳುತ್ತಿದ್ದ ಮಾಧವ ಮಂತ್ರಿಯು ತಲಕಾಡಿಗೆ ನಾಲ್ಕು ಕಿ.ಮೀ. ದೂರದ ಹೆಮ್ಮಿಗೆ ಬಳಿ ಕಾವೇರಿ ನದಿಗೆ ಅಣೆಯೊಂದನ್ನು ನಿರ್ಮಿಸುವ ಮೂಲಕ ತಲಕಾಡು ಪಟ್ಟಣದ ಅಭಿವೃದ್ಧಿಗೆ ಕಾರಣನಾದನೆಂದು ಹೇಳಲಾಗುತ್ತದೆ. ಈ ಆಣೆ ನಿರ್ಮಾಣದಿಂದಾಗಿ ಮೇಲ್ದಂಡೆಯ ಮರಳು, ಗಾಳಿಯಲ್ಲಿ ತೇಲಿಬಂದು ತಲಕಾಡು ಪರಿಸರದಲ್ಲಿ ಸಂಗ್ರಹವಾಗುತ್ತಿತ್ತೆಂದು ಊಹಿಸಲಾಗಿದೆ. ಕೃಷ್ಣದೇವರಾಯನ ಕಾಲದ ೧೫೧೬ರ ಶಾಸನದಿಂದ, ತಲಕಾಡಿನ ಸಂತೆಹನುಮಂತದೇವರಿಗೆ ೩೦ ಕೊಳಗ ಕೊಂಗನ ಕಾಲುವೆ ಗದ್ದೆಯನ್ನು ೪೨ ವರಹಕ್ಕೆ ಖರೀದಿಸಿ ದಾನ ಬಿಟ್ಟ ಅಂಶ ಗೊತ್ತಾಗುತ್ತದೆ. ಆದರೆ ತಲಕಾಡು ಕ್ರಮೇಣ ಸುಮಾರು ೧೬೧೭ರ ವೇಳೆಗೆ ಮರಳಿನಿಂದ ಮುಚ್ಚಿಹೋದಂತೆ ತೋರುತ್ತದೆ.



ಶ್ರೀರಂಗಪಟ್ಟಣವನ್ನು ಆಳುತ್ತಿದ್ದ ರಾಜ್ಯಪಾಲ ತಿರುಮಲನು, ಮೈಸೂರು ಅರಸ ರಾಜೊಡೆಯನ ಕೈಯಲ್ಲಿ ೧೬೧೦ರಲ್ಲಿ ಪದಚ್ಯುತಗೊಂಡು ಗತಿಸಿದ ಮೇಲೆ ತಲಕಾಡಿಗೆ ತಲೆಮರೆಸಿಕೊಂಡು ಬಂದ ಅವನ ಮಡದಿ ಅಲಮೇಲಮ್ಮನು ರಾಜ ಒಡೆಯನಿಂದ ಒಡವೆಗಾಗಿ ಪೀಡಿಸಲ್ಪಟ್ಟು, ರಾಜ ಒಡೆಯನಿಗೆ 'ತಲಕಾಡು ಮರಳಾಗಿ, ಮಾಲಂಗಿ ಮಡುವಾಗಿ, ಮೈಸೂರು ಅರಸರಿಗೆ ಮಕ್ಕಳಾಗದಿರಲಿ' ಎಂದು ಶಪಿಸಿ, ಮಾಲಂಗಿಯ ಬಳಿ ಕಾವೇರಿಯಲ್ಲಿ ಧುಮುಕಿ ಗತಿಸಿದಳೆಂಬ ಐತಿಹ್ಯವೂ ಇದನ್ನೇ ಪುಷ್ಟೀಕರಿಸುತ್ತದೆ. ಇದರಿಂದ ಪಶ್ಚಾತ್ತಾಪಕ್ಕೆ ಒಳಗಾದ ರಾಜ ಒಡೆಯನು ಅಲಮೇಲಮ್ಮನ ಚಿನ್ನದ ಪ್ರತಿಮೆಯನ್ನು ಮಾಡಿಸಿ ನಿತ್ಯ ಪೂಜೆಗೆ ವ್ಯವಸ್ಥೆ ಮಾಡಿ ಮಹಾನವಮಿಯಂದು ಅರಮನೆಯಲ್ಲಿ ವಿಶೇಷ ಪೂಜೆ ನಡೆಸಲಾರಂಭಿಸಿದನು. ಅದು ಇಂದಿಗೂ ಆಚರಣೆಯಲ್ಲಿದೆ. ತಲಕಾಡಿನ ಕರಿಬಸವನಗುಡಿ ಬಳಿಯಿರುವ ೧೬೧೨ರ ಶಾಸನ, ತಲಕಾಡಿನಲ್ಲಿದ್ದ ಮಹಾಮಹತ್ತಿನ ಮಠದ ಕಿರಿಯ ಮಲ್ಲಿಕಾರ್ಜುನ ದೇವರ ಸನ್ನಿಧಿಗೆ ನಂಜನಗೂಡಿನ ಜಾತ್ರೆಯಿಂದ ಹಿಂತಿರುಗುವ ೧೦೦೦ ದೇವರುಗಳ ಹಗಲು–ರಾತ್ರಿ ಉಪಹಾರಕ್ಕೆಂದು ಉಂಬಳಿ ಬಿಟ್ಟ ಅಂಶವನ್ನು ದಾಖಲಿಸಿದರೆ, ೧೬೩೩ರ ಶಾಸನದಿಂದ ತಲಕಾಡಿನಲ್ಲಿ ಪಂಚಲಿಂಗಗಳನ್ನು ಪ್ರತಿಷ್ಠಾಪಿಸಿದ ಬಸವಲಿಂಗಣ್ಣನು ಅವುಗಳ ಪೂಜಾವಿಧಿಗೆಂದು ತಲಕಾಡ ಮಾಧರಸ ಒಡೆಯರ ಕಟ್ಟೆಕಾಲುವೆ ಕೆಳಗೆ ಪೂರಿಗಾಲಿಯಲ್ಲಿ ೧೦ ಗದ್ಯಾಣ ಮೌಲ್ಯದ ಬೆದ್ದಲು ಭೂಮಿಯನ್ನು ದಾನಬಿಟ್ಟ ಅಂಶ ಗೊತ್ತಾಗುತ್ತದೆ. ಇಲ್ಲಿಯ ಗೌರಿಶಂಕರ ಗುಡಿ ಬಳಿಯಿರುವ ೧೬೭೯ರ ಶಾಸನದಿಂದ, ಚಿಕ್ಕದೇವ ರಾಜ ಒಡೆಯರು ಮಲ್ಲೇಶಗುಡಿ ನಿರ್ಮಿಸಿ ದಾನ ಬಿಟ್ಟ ಅಂಶ ಗೊತ್ತಾಗುತ್ತದೆ. ಇಲ್ಲಿನ ಶಾಸನಗಳಿಂದ ಹಿಂದೆ ತಲಕಾಡು, ಶಾಕ್ತ, ಶೈವ, ಜೈನ, ವೈಷ್ಣವ ಹಾಗೂ ಶ್ರೀವೈಷ್ಣವ ಧರ್ಮೀಯರಿಗೆ ಸೇರಿದ ಸುಮಾರು ೩೦ ದೇವಾಲಯಗಳನ್ನು ಹೊಂದಿದ್ದ ಅಂಶ ವೇದ್ಯವಾಗುತ್ತದೆ.

ಹೀಗೆ ವೈವಿಧ್ಯಮಯ ಚಾರಿತ್ರಿಕ ಮಹತ್ವವನ್ನು ಹೊಂದಿರುವ ಹಳೆಯ ತಲಕಾಡು, ಮರಳು ರಾಶಿಯ ನಡುವೆ ಇರುವ ವೈದ್ಯನಾಥೇಶ್ವರ ದೇವಾಲಯ ಸಂಕೀರ್ಣ ಪಾತಾಳೇಶ್ವರ, ಮರುಳೇಶ್ವರ, ಕೀರ್ತಿನಾರಾಯಣ, ಚೌಡೇಶ್ವರಿ, ವೀರಭದ್ರ, ವೈಕುಂಠನಾರಾಯಣ ಮುಂತಾದ ಪ್ರಾಚೀನ ದೇವಾಲಯಗಳಿಂದಾಗಿ ಪ್ರಸಿದ್ಧವಾಗಿದೆ. ಇಲ್ಲಿಯ ವೈದ್ಯನಾಥೇಶ್ವರ ಗುಡಿಯ ಭಿತ್ತಿಯ ಮೇಲೆ ಸುಮಾರು ೧೧ನೆಯ ಶತಮಾನದ ದಾನಶಾಸನವಿದೆಯಾದರೂ, ದೇವರ ಹೆಸರಿದ್ದ ಭಾಗ ಹಾಳಾಗಿದೆ. ಆದರೆ ಮರಳೇಶ್ವರ ಗುಡಿಯ ಬಳಿ ಇರುವ ಶಾಸನವೊಂದರಲ್ಲಿ ವೈದ್ಯನಾಥ ಕೋಯಿಲಿನ ಸಿದ್ದಾಯವನ್ನೂ ದತ್ತಿಬಿಟ್ಟ ಉಲ್ಲೇಖವಿದೆ. ಈ ದೇವರನ್ನು ಪಂಚಲಿಂಗೇಶ್ವರ ಗುಡಿಯ ೧೬೩೩ರ ಶಾಸನದಲ್ಲಿ ಗಜಾರಣ್ಯ ಕ್ಷೇತ್ರದ ವೈದೇಶ್ವರನೆಂದೇ ಕರೆಯಲಾಗಿದೆ. ಈ ಕಾರಣಗಳಿಂದಾಗಿ ವೈದೇಶ್ವರ ದೇವಾಲಯವನ್ನು ವಿಜಯನಗರ ಕಾಲದಲ್ಲಿ ನಿರ್ಮಿಸಿರಬಹುದೆಂಬ (ಸುಮಾರು ೧೪ನೇ ಶತಮಾನ) ಅಭಿಪ್ರಾಯವೂ ಇದ್ದು, ಗುಡಿಯ ಈಶಾನ್ಯ ಭಾಗದ ಭಿತ್ತಿಯ ಮೇಲಿರುವ ೧೬ನೆಯ ಶತಮಾನಕ್ಕೆ ಸೇರಿದ ನಾಲ್ಕು ಸಾಲಿನ ನಾಗರಿ ಶಾಸನದಲ್ಲಿ

ಬರುವ ಮಾಧವನನ್ನು ೧೪ನೆಯ ಶತಮಾನಕ್ಕೆ ಸೇರಿದ ಮಾಧವಮಂತ್ರಿಯೆಂದೂ ಭಾವಿಸಲಾಗುತ್ತದೆ. ಇವನ ಕಾಲದಲ್ಲಿ ವೈದೇಶ್ವರದೇವಾಲಯವು ಸಾಕಷ್ಟು ಮಾರ್ಪಾಟು ಸೇರ್ಪಡೆಗಳನ್ನೂ ಕಂಡಿದೆ. ಆದರೆ ಈ ದೇವಾಲಯದ ಪ್ರಾಕಾರದಲ್ಲಿ ದೊರೆತಿರುವ ಚೋಳ ಶಾಸನಗಳಲ್ಲಿ ರಾಜರಾಜೇಶ್ವರ ದೇವಾಲಯದ ಉಲ್ಲೇಖವಿರುವುದು ಗಮನಾರ್ಹವಾಗಿದೆ.

ದ್ರಾವಿಡ–ಹೊಯ್ಸಳ ಮಿಶ್ರ ಶೈಲಿಯ ವೈದ್ಯನಾಥೇಶ್ವರ ದೇವಾಲಯವು ವಿಶಾಲವಾದ ಪ್ರಾಕಾರದ ನಡುವೆ ಎತ್ತರದ ಜಗತಿಯ ಮೇಲಿದ್ದು ವಿಶಾಲವಾದ ಗರ್ಭಗೃಹ, ಎರಡು ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ಆಕರ್ಷಕ ಬಾಗಿಲವಾಡವನ್ನುಳ್ಳ ಇದರ ಗರ್ಭಗೃಹದಲ್ಲಿರುವ ವೈದೇಶ್ವರ ಲಿಂಗವು ತಲಕಾಡಿನ ಪಂಚಲಿಂಗಗಳಲ್ಲಿ ಪ್ರಧಾನವಾಗಿದೆ. ಗರ್ಭಗೃಹಕ್ಕೆ ವೇಸರ ಶೈಲಿಯ ಶಿಖರವಿದ್ದು, ಭಿತ್ತಿಯನ್ನು ಶೈವಪುರಾಣದ ಕಥನ ಶಿಲ್ಪಗಳಿಂದ ಅಲಂಕರಿಸಲಾಗಿದೆ. ನವರಂಗದಲ್ಲಿರುವ ಎರಡು ದೇವಕೋಷ್ಟಗಳಲ್ಲಿ, ಚಂದ್ರಶೇಖರ ಹಾಗೂ ತಾಂಡವೇಶ್ವರರ ಉತ್ಸವ ಮೂರ್ತಿಗಳಿದ್ದರೆ, ಸರಸ್ವತಿ, ಸೂರ್ಯ, ಶ್ರೀನಿವಾಸ, ಕಲ್ಕಿ ಮುಂತಾದ ಕಿರು ಶಿಲ್ಪಗಳೂ ನವರಂಗದಲ್ಲಿವೆ. ಇಲ್ಲಿರುವ ನಟರಾಜನ ಕಂಚಿನ ಶಿಲ್ಪವು ಕಳಲೆ ನಂಜರಾಜಯ್ಯನ ಸೇವೆಯಾಗಿದೆ. ನವರಂಗದ ಕಣಶಿಲೆಯ ಕಂಬಗಳು ಹೊಯ್ಸಳ ಶೈಲಿಯ ಉತ್ತಮ ಅನುಕರಣೆಗಳಾಗಿದ್ದು, ನಡುವಣ ಛತ್ತಲ್ಲಿರುವ ಭುವನೇಶ್ವರಿಯು ಅಷ್ಟದಿಕ್ಪಾಲಕರನ್ನು ಹೊಂದಿದ್ದು, ಸರಳವಾಗಿದೆ. ನವರಂಗದ ಬಾಗಿಲನ್ನು ಹೊಯ್ಸಳ ಮಾದರಿಯ ಆಕರ್ಷಕ ಕೆತ್ತನೆಯಿಂದ ಅಲಂಕರಿಸಲಾಗಿದ್ದು, ಇಕ್ಕೆಲದಲ್ಲಿ ಎರಡು ಮೀಟರ್ ಎತ್ತರದ ಆಕರ್ಷಕ ದ್ವಾರಪಾಲಕ ಶಿಲ್ಪಗಳಿವೆ. ವೈದೇಶ್ವರ ಗುಡಿಯ ಎಡಭಾಗದಲ್ಲಿರುವ ದೇವಿಗುಡಿಯು ವಿಜಯನಗರ ಕಾಲದ್ದಾಗಿದ್ದು, ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ಗರ್ಭಗುಡಿಯಲ್ಲಿ ಮನೋನ್ಮಣಿ (ಪಾರ್ವತಿ) ಶಿಲ್ಪವಿದ್ದು, ನವರಂಗದಲ್ಲಿ ಆಕರ್ಷಕ ಉಬ್ಬುಶಿಲ್ಪಗಳಿವೆ. ಈ ಗುಡಿಯ ಪ್ರಾಕಾರದಲ್ಲಿ ಕಾಶಿವಿಶ್ವನಾಥ, ಶಕ್ತಿಗಣಪತಿ, ಚಂಡಿಕೇಶ್ವರ, ದ್ವಾರಗಣಪ, ಬಂಡರಸಮ್ಮ, ಉರಿಕ್ಯಾತಮ್ಮ ಮುಂತಾದ ಕಿರುಗುಡಿಗಳಿವೆ. ಶಕ್ತಿಗಣಪತಿ ಗುಡಿಯೊಳಗಿರುವ ಸಿಂಹಾರೂಢ ಮಹಿಷಮರ್ಧಿನಿಯ ಶಿಲ್ಪವು ಗಂಗಲಕ್ಷಣವನ್ನು ಹೊಂದಿದೆ. ವೈದೇಶ್ವರ ಗುಡಿಯ ಹಿಂಬದಿಯ ಐದು ಕಿರುಗುಡಿಗಳಲ್ಲಿರುವ ಪಂಚಲಿಂಗಗಳನ್ನು ಬಸವಲಿಂಗಣ್ಣನು ೧೬೨೨ರಲ್ಲಿ ಪ್ರತಿಷ್ಠಾಪಿಸಿದ್ದಾನೆ. ಪ್ರಾಕಾರದ ಆಕರ್ಷಕ ಮಹಾದ್ವಾರವು ಗೋಪುರರಹಿತವಾಗಿದೆ. ಇದರ ಬಲ ಭಾಗದಲ್ಲಿ ಭೈರವನ ಗುಡಿ ಇದ್ದು, ಬದಿಯಲ್ಲೇ ವೀರಭದ್ರನ ಗುಡಿಯೂ ಇದೆ. ಅಲ್ಲೇ ಇರುವ ಸುಮಾರು ೧೫ನೇ ಶತಮಾನದ ಕನ್ನಡ ಶಾಸನದಲ್ಲಿ ತಲಕಾಡಿನ ವೀರಭದ್ರದೇವರ ನಂದಾದೀಪ ಸೇವೆಗೆಂದು ದಾನಬಿಟ್ಟ ವಿವರವಿದೆ.

ತಲಕಾಡಿನಲ್ಲಿ ಹಿಂದೆ ಜೈನಬಸದಿಗಳಿದ್ದವೆಂಬುದಕ್ಕೆ ಸಮೀಪದ ಹೊಲವೊಂದರಲ್ಲಿದ್ದ ಸುಮಾರು ೧೦ನೆಯ ಶತಮಾನದ ಶಾಸನವುಳ್ಳ ಜಿನಬಿಂಬವನ್ನಿಂದು ಸಂರಕ್ಷಿಸಿಡಲಾಗಿದೆ. ವೈಕುಂಠನಾರಾಯಣ ಗುಡಿ ಬಳಿಯಿರುವ ಜೈನಶಾಸನವು ಸುಮಾರು



೧೪ನೆಯ ಶತಮಾನಕ್ಕೆ ಸೇರಿದ್ದು, ದ್ರಾವಿಡ ಸಂಘದ ಕಮಲದೇವರ ಶಿಷ್ಯರ ಉಲ್ಲೇಖವಿದೆ. ಅಲ್ಲದೇ ಇತ್ತೀಚಿನ ವರ್ಷಗಳಲ್ಲಿ ತಲಕಾಡನ್ನು ವೈಜ್ಞಾನಿಕ ಉತ್ಖನನಕ್ಕೆ ಒಳಪಡಿಸುವ ಮೂಲಕ ಗಂಗರ ಕಾಲದ ಜೈನಬಸದಿಯ (ಗರ್ಭಗೃಹ, ಅಂತರಾಳ) ತಳಪಾಯ ಹಾಗೂ ತೀರ್ಥಂಕರ ಪೀಠಗಳನ್ನು ಪತ್ತೆಹಚ್ಚುವಲ್ಲಿ ರಾಜ್ಯಪುರಾತತ್ವ ಇಲಾಖೆ ಹಾಗೂ ಮೈಸೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಪುರಾತತ್ವ ವಿಭಾಗಗಳು ಯಶಸ್ವಿಯಾಗಿದೆ. ಮಿಗಿಲಾಗಿ ಇಲ್ಲಿ ದೊರೆತಿರುವ ಅವಶೇಷಗಳಿಂದ ರೋಮನ್ ಸಂಪರ್ಕವನ್ನು ಕ್ರಿ.ಪೂ.ದಷ್ಟು ಹಿಂದಕ್ಕೆ ಗುರುತಿಸಲಾಗಿದೆ.

ಪಾತಾಳೇಶ್ವರ ದೇವಾಲಯವು ಕೀರ್ತಿನಾರಾಯಣ ದೇವಾಲಯದಿಂದ ೧೦೦ ಗಜ ದಕ್ಷಿಣಕ್ಕೆ ತಗ್ಗಿನಲ್ಲಿ ಪೂರ್ವಾಭಿಮುಖವಾಗಿ ನಿಂತಿದೆ. ಸಣ್ಣ ಪ್ರಮಾಣದ ಈ ದೇವಾಲಯದಲ್ಲಿರುವ ಪಾತಾಳೇಶ್ವರ ಲಿಂಗವು ಪಂಚಲಿಂಗಗಳಲ್ಲಿ ಒಂದಾಗಿದೆ. ಈ ಗುಡಿಯು ಸುಮಾರು ೧೦ನೆಯ ಶತಮಾನದ ಗಂಗ ರಚನೆಯಾಗಿದ್ದು, ನಂತರದಲ್ಲಿ ಗರ್ಭಗೃಹಕ್ಕೆ ಇಟ್ಟಿಗೆ ಶಿಖರವನ್ನು ಸೇರಿಸಲಾಗಿದೆ. ಈ ದೇವಾಲಯದ ಭಿತ್ತಿಯ ಮೇಲೆ ತಮಿಳಿನ ಮೂರು ಹಾಗೂ ಕನ್ನಡದ ಒಂದು ಶಾಸನಗಳಿವೆ. ನವರಂಗದ ಕಂಬಗಳು ಕಿರಿದಾಗಿದ್ದು, ಚೌಕಾಕಾರದ ಪೀಠದ ಮೇಲೆ ವೃತ್ತಾಕಾರದ ಖಾಂಡವನ್ನು ಹೊಂದಿದೆ. ಸ್ಥಾನಕ ಬ್ರಹ್ಮ ಮುಂತಾದ ಶಿಲ್ಪಗಳಿವೆ. ಗರ್ಭಗೃಹದಲ್ಲಿರುವ ಕಿರು ಶಿವಲಿಂಗವು ಬೆಳಿಗ್ಗೆ ಕೆಂಪು ಬಣ್ಣಕ್ಕೂ ಮಧ್ಯಾಹ್ನ ಕಪ್ಪು ಬಣ್ಣಕ್ಕೂ ಹಾಗೂ ಸಂಜೆ ಬಿಳಿವರ್ಣಕ್ಕೂ ಬದಲಾಗುವುದೆಂದು ಸ್ಥಳೀಯವಾಗಿ ಹೇಳಲಾಗುತ್ತದೆ.

ಮರುಳೇಶ್ವರ ಗುಡಿಯು ಕೀರ್ತಿನಾರಾಯಣ ದೇವಾಲಯದಿಂದ ೧೦೦ ಗಜ ವಾಯವ್ಯಕ್ಕೆ ಇದ್ದು, ಗಂಗರ ಪಾತಾಳೇಶ್ವರ ಗುಡಿಯನ್ನೇ ಹೋಲುತ್ತದೆ. ನವರಂಗದಲ್ಲಿರುವ ದುಂಡಾಕಾರದ ಕಂಬ ಹಾಗೂ ಅಲಂಕಾರಿಕ ಅದಿಷ್ಠಾನಗಳು ಉಲ್ಲೇಖಾರ್ಹವಾಗಿದ್ದು, ತಳಪಾದಿಕಲ್ಲ ಮೇಲಿರುವ ತಮಿಳು ಶಾಸನಗಳಿಂದ ಇದು ನಂತರದಲ್ಲಿ ಪುನರ್ ಜೀರ್ಣೋದ್ಧಾರಗೊಂಡಿರುವ ಅಂಶ ಸ್ಪಷ್ಟವಾಗುತ್ತದೆ. ನವರಂಗದಲ್ಲಿರುವ ವಿಷ್ಣು, ಸೂರ್ಯ, ಸುಬ್ರಹ್ಮಣ್ಯ, ಮಹಿಷಮರ್ಧಿನಿ, ಗಣಪತಿ ಮುಂತಾದ ಶಿಲ್ಪಗಳಲ್ಲಿ ಕೆಲವು ಗಂಗಶಿಲ್ಪಲಕ್ಷಣವನ್ನು ಹೊಂದಿವೆ.

ಹೊಯ್ಸಳ ವಿಷ್ಣುವರ್ಧನನು ದಂಡನಾಯಕ ಗಂಗರಾಜನೊಂದಿಗೆ ಚೋಳರ ಮೇಲೆ ೧೧೧೬ರಲ್ಲಿ ಪಡೆದ ಗೆಲುವಿನ ಸ್ಮಾರಕವಾಗಿ ೧೧೧೭ರಲ್ಲಿ ನಿರ್ಮಾಣಗೊಂಡ, ಕೀರ್ತಿನಾರಾಯಣ ಪೆರುಮಾಳ್ ದೇವಾಲಯವು ತಲಕಾಡಿನ ಪ್ರಧಾನ ಆಕರ್ಷಣೆಗಳಲ್ಲೊಂದಾಗಿದೆ. ಮೂಲ ದೇವಾಲಯವು ನಕ್ಷತ್ರಾಕಾರ ತಳವಿನ್ಯಾಸದ ಗರ್ಭಗೃಹ, ತೆರೆದ ಅಂತರಾಳ ಹಾಗೂ ಮೂರು ದಿಕ್ಕುಗಳಲ್ಲೂ ಪ್ರವೇಶದ್ವಾರವಿರುವ ನವರಂಗವನ್ನು ಹೊಂದಿದೆ. ಪಂಚಶಾಖೆಯನ್ನು ಹೊಂದಿರುವ ಗರ್ಭಗೃಹದ ಬಾಗಿಲವಾಡದ ಅಲಂಕಾರಿಕ ಕೆತ್ತನೆಯು, ಬೇಲೂರು ದೇವಾಲಯದ ಬಾಗಿಲುವಾಡವನ್ನು ನೆನಪಿಸುತ್ತಿದ್ದು, ಒಳಗೆ ಕಮಲಪೀಠದ ಮೇಲೆ ಸಮಭಂಗಿಯಲ್ಲಿ ನಿಂತಿರುವ ಸುಮಾರು

ಎರಡು ಮೀ. ಎತ್ತರದ ಶಂಖ-ಚಕ್ರ-ಗದಾ-ಪದ್ಮಧಾರಿ ನಾರಾಯಣನ ಆಕರ್ಷಕ ಶಿಲ್ಪವಿದೆ. ಈ ಶಿಲ್ಪದ ಪ್ರಭಾವಳಿಯು ಅಲಂಕಾರಿಕಾ ಲತಾಕೆತ್ತನೆಗಳೊಂದಿಗೆ ವಿಷ್ಣುವಿನ ದಶಾವತಾರದ ಕಿರುಶಿಲ್ಪಗಳನ್ನೂ ಹೊಂದಿದೆ. ಅಂತರಾಳದ ಬಾಗಿಲವಾಡವು ಸುಮಾರು ೧೭ನೆಯ ಶತಮಾನದ ಸೇರ್ಪಡೆಯಾಗಿದ್ದು ಲಲಾಟದಲ್ಲಿ ಅನಂತಶಯನನನ್ನು ಕೆತ್ತಲಾಗಿದೆ. ಚರಕಿಯಂತ್ರ ನಿರ್ಮಿತ ಸುಂದರ ಕಂಬಗಳು ಹೊತ್ತು ನಿಂತಿರುವ ವಿಶಾಲವಾದ ನವರಂಗವು, ಹೂ-ಬಳ್ಳಿ ಕಮಲಾಲಂಕೃತ ಛತ್ತನ್ನು ಹೊಂದಿದ್ದು, ಆಕರ್ಷಕವಾಗಿದೆ. ನವರಂಗದ ಉತ್ತರದ್ವಾರದ ಬಳಿ ಸಿಂಹ-ನರ್ತಕಿ, ಋಷಿಮುನಿಗಳ ಶಿಲ್ಪಗಳಿದ್ದರೆ, ಹನುಮ ಹಾಗೂ ಗರುಡ ಶಿಲ್ಪಗಳು ನವರಂಗದ ಬಲಭಾಗದ ಲಕ್ಷ್ಮೀಗುಡಿಯ ಬಳಿ ಇವೆ. ಈ ದೇವಾಲಯದ ಪ್ರಾಕಾರದಲ್ಲಿ ಈಶಾನ್ಯ ಭಾಗಕ್ಕಾದಂತೆ, ವೃಂದಾವನ ಹಾಗೂ ಮಂಟಪಗಳಿವೆ. ಈ ದೇವಾಲಯದ ಹೊರಭಿತ್ತಿಯನ್ನು ಅಲಂಕಾರಿಕ ಅರೆಗೋಪುರ, ಅರೆಕಂಬ, ಅರೆಮಂಟಪಗಳಿಂದ ಅಲಂಕರಿಸಲಾಗಿದೆ.

ಇಲ್ಲಿಯ ಚೌಡೇಶ್ವರಿ ಗುಡಿಯಲ್ಲಿನ ಅಷ್ಟಭುಜ ಮಹಿಷಮರ್ಧಿನಿಯ ಶಿಲ್ಪವು ಆಕರ್ಷಕವಾಗಿದ್ದು ಗಂಗರ ಕಾಲದ್ದಾಗಿದೆ. ಇದರ ನವರಂಗದ ಕಿರುಗಾತ್ರದ ದುಂಡುಕಂಬಗಳು ಗಂಗಲಕ್ಷಣವನ್ನು ಹೊಂದಿವೆ. ಅಲ್ಲದೆ ಗೋಕರ್ಣೇಶ್ವರ, ಗಣೇಶ, ಅರ್ಕೇಶ್ವರ, ಗೌರಿಶಂಕರ (ಚಿಕ್ಕದೇವರಾಯ ನಿರ್ಮಿತ) ಆಂಜನೇಯ ಮುಂತಾದ ಗುಡಿಗಳಿವೆ. ಇಲ್ಲಿಯ ಆನಂದೇಶ್ವರ ದೇವಾಲಯವನ್ನು ಹೈದರಾಲಿಯ ಸಮಕಾಲೀನನಾದ ಚಿದಾನಂದಸ್ವಾಮಿಯು ಸುಮಾರು ೧೮ನೆಯ ಶತಮಾನದ ಮಧ್ಯಭಾಗದಲ್ಲಿ ನಿರ್ಮಿಸಿರುವ ಅಂಶ ಶಾಸನದಿಂದ ವೇದ್ಯವಾಗುತ್ತದೆ.

**ಮಠಗಳು :** ತಲಕಾಡಿನಲ್ಲಿರುವ ಸ್ಮಾರ್ತಮಠವು ಭಾಗವತ ಸಂಪ್ರದಾಯಕ್ಕೆ ಸೇರಿದ್ದು, ಕೃಷ್ಣಾನಂದಮಠ ಇಲ್ಲವೇ ಕೊಪ್ಪಳಮಠ ಎಂದೂ ಅದನ್ನು ಕರೆಯಲಾಗುತ್ತದೆ. ಶಂಕರಾಚಾರ್ಯರ ಶಿಷ್ಯರಾದ ಪದ್ಮಪಾದ, ವಿಷ್ಣುಸ್ವಾಮಿ, ಕ್ಷೀರಸ್ವಾಮಿ ಕೃಷ್ಣಾನಂದಸ್ವಾಮಿಗಳನ್ನು ಈ ಮಠದ ಗುರುಪರಂಪರೆಯಲ್ಲಿ ಗುರುತಿಸಲಾಗುತ್ತದೆ. ವಿಜಯನಗರದರಸರಿಗೆ ಮಂತ್ರಿಯಾಗಿದ್ದ ಮಾಧವಮಂತ್ರಿ ಹಾಗೂ ತಲಕಾಡಿನ ಪುರಪ್ರಮುಖರು ಈ ಮಠಕ್ಕೆ ಉಂಬಳಿ ನೀಡಿದ್ದಕ್ಕೆ ಪೂರಕವಾದ ದಾಖಲೆಗಳು ಮಠದಲ್ಲಿವೆ. ಅಲ್ಲದೇ ಶಾಸನದಲ್ಲಿ ಮಹಾಮಹತ್ತಿನಮಠವೆಂದೇ ಉಲ್ಲೇಖಿತಗೊಂಡಿರುವ ಅತ್ತಿಕೇರಿ ಶಿವಸ್ವಾಮಿಮಠ, ಕೆಂಡಗಣ್ಣಸ್ವಾಮಿಮಠ ಹಾಗೂ ತೋಪಿನಮಠಗಳು ಇಲ್ಲಿವೆ. ತಲಕಾಡಿಗೆ ಮೂರು ಕಿ.ಮೀ. ದೂರದಲ್ಲಿರುವ ಮಾಧವಮಂತ್ರಿ ಅಣೆಕಟ್ಟೆಯ ಒಂದು ನಾಲೆಯು ತಲಕಾಡಿನ ಮೂಲಕವೇ ಹಾದುಹೋಗುತ್ತಿದ್ದು, ಹಲವಾರು ಕೆರೆಗಳಿಗೆ, ನೂರಾರು ಹೆಕ್ಟೇರು ಜಮೀನಿಗೆ ನೀರುಣಿಸುತ್ತಿದೆ. **ಪಂಚಲಿಂಗದರ್ಶನ :** ದಕ್ಷಿಣ ಕಾಶಿ ಎಂಬ ಹೆಗ್ಗಳಿಕೆಗೂ ಪಾತ್ರವಾಗಿರುವ ತಲಕಾಡಿನಲ್ಲಿ ಈಶ್ವರನು ವೈದ್ಯೇಶ್ವರನಾಗಿ ಅವತರಿಸಿ, ಪಾತಾಳೇಶ್ವರ (ವಾಸೂಕೀಶ್ವರ) ಮರುಳೇಶ್ವರ, ಅರ್ಕೇಶ್ವರನಾಗಿ (ವಿಜಯಪುರ) ಹಾಗೂ ಮಲ್ಲಿಕಾರ್ಜುನನಾಗಿ (ಮುಡುಕುತೊರೆ) ರೂಪಾಂತರಗೊಂಡು ಪಂಚಲಿಂಗೇಶ್ವರನಾಗಿ ಭಕ್ತರಿಂದ ಆರಾಧಿಸಲ್ಪಡುತ್ತಿರುವನೆಂಬ ಪ್ರತೀತಿ ಇದೆ. ಕಾರ್ತೀಕ ಬಹುಳ



ಅಮಾವಾಸ್ಯೆಯಂದು ಸೂರ್ಯ-ಚಂದ್ರರು ವೃಶ್ಚಿಕ ರಾಶಿಯನ್ನು ಏಕಕಾಲದಲ್ಲಿ ಪ್ರವೇಶಿಸುವಂದು ಉಷಃಕಾಲದಲ್ಲಿ ಬರುವ ಕುಹುಯೋಗದಲ್ಲಿ ಪಂಚಲಿಂಗಗಳನ್ನು ಕ್ರಮಬದ್ಧವಾಗಿ ಸಂದರ್ಶಿಸಿ, ಪೂಜಿಸುವುದರಿಂದ ಮುಕ್ತಿ ದೊರೆಯುತ್ತದೆಂಬ ಸಾಂಪ್ರದಾಯಿಕ ಹಿನ್ನೆಲೆಯಲ್ಲಿ, ಸಾಮಾನ್ಯವಾಗಿ ಹನ್ನೆರಡು ವರ್ಷಗಳಿಗೊಮ್ಮೆ ಕೂಡಿ ಬರುವ ಈ ಪುಣ್ಯಕಾಲದಲ್ಲಿ, ಪಂಚಲಿಂಗದರ್ಶನ ಪಡೆಯಲು ಲಕ್ಷಾಂತರ ಯಾತ್ರಿಕರು ತಲಕಾಡಿಗೆ ಬಂದು ಹೋಗುತ್ತಾರೆ. ಪಂಚಮುಖಿ ಶಿವನ ಪಂಚಮುಖಗಳನ್ನು ಪ್ರತಿನಿಧಿಸುವ ಈ ಶಿವಲಿಂಗಗಳನ್ನು ಒಂದೇ ದಿನದಲ್ಲಿ ಕ್ರಮಬದ್ಧವಾಗಿ ಸಂದರ್ಶಿಸಬೇಕಾಗಿದ್ದು, ಪ್ರತಿ ಶಿವಲಿಂಗವನ್ನು ಸಂದರ್ಶಿಸುವ ಮೊದಲು ವೈದ್ಯನಾಥನಿಂದ ಪೂರ್ವಾನುಮತಿ ಪಡೆದು ಸಂದರ್ಶಿಸಿದ ನಂತರ ವೈದ್ಯನಾಥನಿಗೆ ವರದಿ ಸಲ್ಲಿಸುವುದು ವಾಡಿಕೆಯಾಗಿದೆ. ಇದು ಪಂಚಲಿಂಗ ದರ್ಶನಾರ್ಥಿಗಳು ಅನುಸರಿಸಬೇಕಾದ ಬಹುಮುಖ್ಯ ಸಂಪ್ರದಾಯವಾಗಿದೆ. ೨೦೦೯ರಲ್ಲಿ ಜರುಗಿದ ದ್ವಾದಶ ವರ್ಷ ಪಂಚಲಿಂಗ ದರ್ಶನದ ಬೆನ್ನಲ್ಲೇ ಇತ್ತೀಚೆಗೆ (೨೦೦೯ ರಲ್ಲಿ) ಜರುಗಿದ ಪಂಚಲಿಂಗದರ್ಶನದಲ್ಲಿ ಲಕ್ಷಾಂತರ ಜನ ಪಾಲ್ಗೊಂಡಿದ್ದರೆಂದು ತಿಳಿದುಬರುತ್ತದೆ.

**ತಡಿಮಾಲಂಗಿ (೨,೫೯೩)** : ತಾಲೂಕು ಕೇಂದ್ರ ನರಸೀಪುರದಿಂದ ೧೮ಕಿ.ಮೀ. ಆಗ್ನೇಯಕ್ಕೆ ಮಾದಾಪುರ-ಕಲಿಯೂರು ರಸ್ತೆಮಾರ್ಗವಾಗಿ ಇಲ್ಲವೇ, ನರಸೀಪುರದಿಂದ ೧೨ ಕಿ.ಮೀ. ಪೂರ್ವಕ್ಕೆ ಇರುವ ತಲಕಾಡಿನಿಂದ ದೋಣಿ ಮೂಲಕ ಹೊಳೆದಾಟಿ ಆಚೆ ದಡದಲ್ಲಿರುವ ತಡಿಮಾಲಂಗಿಯನ್ನು ತಲುಪಬಹುದಾಗಿದ್ದು, ಇದು ಕೊಳ್ಳೆಗಾಲಕ್ಕೆ ಎಂಟು ಕಿ.ಮೀ. ದೂರದಲ್ಲಿದೆ. ಕಾವೇರಿ ನದಿಯ ಬಲದಂಡೆಯ ಮೇಲಿರುವ ಇದು, ಹಿಂದೆ ಗಂಗರ ಕಾಲದಲ್ಲಿ ಪ್ರಮುಖ ಊರಾಗಿದ್ದು, ಚೋಳರ ಕಾಲದಲ್ಲಿ ಅಗ್ರಹಾರ ಪಟ್ಟಣವಾಗಿ ವಿದ್ಯಾಕೇಂದ್ರವಾಗಿ ಮೆರೆದಿರುವ ಸ್ಥಳ. ಇಲ್ಲಿಂದ ಈವರೆಗೆ ೨೦ ಶಾಸನಗಳು ವರದಿಯಾಗಿವೆ. ಪ್ರಾಚೀನ ಚೋಳ ಶಾಸನಗಳಲ್ಲಿ 'ವಾಯಿಲಂಗೈ' ಎಂದೇ ಉಲ್ಲೇಖಿತಗೊಂಡಿರುವ ಇದು ಚೋಳ ಒಂದನೆಯ ರಾಜೇಂದ್ರನ (೧೦೨೧) ಕಾಲದಿಂದಲೂ ಅಗ್ರಹಾರವಾಗಿದ್ದು, ಜನನಾಥಪುರ ಎಂಬ ಅಭಿದಾನವನ್ನು ಹೊಂದಿದ್ದ ಅಂಶ ಅವರ ಶಾಸನಗಳಿಂದ ವೇದ್ಯವಾಗುತ್ತದೆ. ಅದರೆ ಹೊಯ್ಸಳ ಶಾಸನಗಳಲ್ಲಿ ಮಾರ್ಕಲಂಗಿ (೧೧೯೫) ಎಂದೂ ಉಲ್ಲೇಖಿತಗೊಂಡಿರುವ ಇಲ್ಲಿಂದ ಹೊಯ್ಸಳ ಮುಮ್ಮಡಿ ನರಸಿಂಹನ ಕಾಲಕ್ಕೆ ಸೇರಿದ ಸುಮಾರು ೧೨೯೦ರ ಶಾಸನದಲ್ಲಿ ಪೆರುಮಾಳೆ ದಂಡನಾಯಕನೆಂಬ ಅಧಿಕಾರಿಯು ಅಗ್ರಹಾರ ಸರ್ವಜ್ಞ ಶ್ರೀರಂಗಪುರವಾದ ಮಾಲಂಗಿಯಲ್ಲಿ ಪ್ರಾಥಮಿಕ ಶಾಲೆಯನ್ನು ತೆರೆದು ನಾಗರಿ (ಸಂಸ್ಕೃತ), ತಮಿಳು, ಕನ್ನಡ ಹಾಗೂ ಅರೆಯ (ಮರಾಠಿ) ಭಾಷೆಗಳನ್ನು ಕಲಿಸುವ ಉಪಾಧ್ಯಾಯರ ಉಪಜೀವನಕ್ಕೆಂದು ವರ್ಷಕ್ಕೆ ತಲಾ ಆರು ಗದ್ಯಾಣವನ್ನು ವ್ಯವಸ್ಥೆ ಮಾಡಿದ ಉಲ್ಲೇಖವಿದೆ. ಕೃಷ್ಣದೇವರಾಯನ ಕಾಲಕ್ಕೆ ಸೇರಿದ ೧೫೧೪ರ ಶಾಸನದಿಂದ ಕಾಶಿಯ ವಿಶ್ವೇಶ್ವರಲಿಂಗವನ್ನು ವಿಷ್ಣುಮೂರ್ತಿ ಗುರುರಾಯರು ಇಲ್ಲಿ ಪ್ರತಿಷ್ಠಾಪಿಸಿ ಭೂದಾನ ನೀಡಿದ್ದು ವೇದ್ಯವಾಗುತ್ತದೆ.

ಮಾಲಂಗಿಯಲ್ಲಿ ಪ್ರಾಚೀನ ಕಾಲಕ್ಕೆ ಸೇರಿದ ಜನಾರ್ದನ, ಮಹಾಲಿಂಗ ಹಾಗೂ ಮಲ್ಲಿಕಾರ್ಜುನ ದೇವಾಲಯಗಳಿವೆ. ಊರಾಚೆ ತೋಟದಲ್ಲಿರುವ ಜನಾರ್ದನ ದೇವಾಲಯವು ಮೂಲತಃ ಗಂಗರ ಕಾಲದ ರಚನೆಯಾಗಿದ್ದು, ಚೋಳರ ಕಾಲದಲ್ಲಿ ವಿಸ್ತರಿಸಲ್ಪಟ್ಟಿರುವಂತೆ ತೋರುತ್ತಿದ್ದು, ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿರುವ ಈ ಗುಡಿಯ ಸುತ್ತ ತೆರೆದ ಮಂಟಪವನ್ನು ನಂತರದಲ್ಲಿ ನಿರ್ಮಿಸಲಾಗಿದೆ. ಗರ್ಭಗೃಹದ ನವೀನ ಶಿಖರವು ವೇಸರ ಶೈಲಿಯಲ್ಲಿದ್ದು, ಅಂತರಾಳದ ಮೇಲೆ ಕೀರ್ತಿಮುಖವಿದೆ. ಗರ್ಭಗೃಹದಲ್ಲಿರುವ ಜನಾರ್ದನ ಶಿಲ್ಪವು ಪಲ್ಲವ–ಗಂಗ ಲಕ್ಷಣವನ್ನು ಹೊಂದಿದ್ದು, ಶಿರದಲ್ಲಿ ಕೊಳವೆಯಾಕಾರದ ಕಿರೀಟವಿದೆ. ನವರಂಗದ ಮುಂಭಾಗದಲ್ಲಿ ಬಲಕ್ಕಾದಂತೆ ಆನೆಯ ಸುಂದರ ಶಿಲ್ಪವಿದೆ. ಈ ದೇವಾಲಯದ ಅಧಿಷ್ಠಾನ–ಭಿತ್ತಿಗಳ ಮೇಲಿರುವ ಶಾಸನಗಳಲ್ಲಿ ಮಾಲಂಗಿಯ ಜನಾರ್ದನ ದೇವರು (ಎರಡು ಶಾಸನ) ಹಾಗೂ ರವಿಕುಲ ಮಾಣಿಕ್ಯ ವಿಣ್ಣಗಾರ್ ಆಳ್ವಾರ್ (ಆರು ಶಾಸನಗಳು) ದೇವಾಲಯಗಳ ಉಲ್ಲೇಖವಿದೆ. ಇಲ್ಲಿರುವ ಚೋಳ ಶಾಸನಗಳಲ್ಲಿ ನಾಲ್ಕು ಶಾಸನಗಳು ಒಂದನೆಯ ರಾಜೇಂದ್ರನ ಕಾಲಕ್ಕೆ ಸೇರಿದ್ದು, ಅವನ ಕಾಲದಲ್ಲಿ ಜನಾರ್ದನ ದೇವಾಲಯವು ವಿಸ್ತಾರಗೊಂಡಿರುವ ಸಾಧ್ಯತೆಗಳಿವೆ. ಅದೇ ಗುಡಿ ಬಳಿಯ ಹೊಲದಲ್ಲಿರುವ ೧೧೯೫ ಹಾಗೂ ೧೪೮೨ರ ಶಾಸನಗಳಲ್ಲಿ ಇದನ್ನು ಜನಾರ್ದನ ಗುಡಿ ಎಂದು ಉಲ್ಲೇಖಿಸಲಾಗಿದ್ದು, ಆ ದೇವರ ಪೂಜಾವಿಧಿಗೆಂದು ದತ್ತಿ ಬಿಡಲಾಗಿದೆ.

ಊರಲ್ಲಿ, ಹೊಳೆಗೆ ಅನತಿ ದೂರದಲ್ಲಿರುವ ಮಲ್ಲಿಕಾರ್ಜುನ ದೇವಾಲಯವು ಚೋಳರ ಕಾಲದ್ದಾಗಿದ್ದು, ಅದರ ಮೇಲಿರುವ ೧೦೪೩ರ ಶಾಸನ ಒಂದನೆಯ ರಾಜೇಂದ್ರ ಚೋಳನು ಶುದ್ಧಮಲ್ಲೇಶ್ವರ ದೇವರಿಗೆ ದಾನ ಬಿಟ್ಟ ಅಂಶವನ್ನು ದಾಖಲಿಸುತ್ತದೆ. ಶಾಸನೋಕ್ತ ಮಲ್ಲೇಶ್ವರ ದೇವಾಲಯವೇ ಇದಾಗಿದ್ದು, ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿರುವ ಇದರ ಭಿತ್ತಿಯು ನಿರಾಡಂಬರವಾಗಿದ್ದು, ಅದನ್ನು ಜೀರ್ಣೋದ್ಧಾರ ಮಾಡಲಾಗಿದೆಯಾದರೂ, ಗರ್ಭಗೃಹ ಭಾಗವು ಶಿಥಿಲಾವಸ್ಥೆಯಲ್ಲಿದೆ. ಈ ಗುಡಿಯ ಬಳಿಯಿರುವ ಮಹಾಲಿಂಗ ದೇವಾಲಯವು ಹೊಯ್ಸಳ ಕಾಲದ್ದಾಗಿದ್ದು, ಸುಮಾರು ೧೨೯೦ರ ಶಾಸನವಿರುವುದು ಈ ಗುಡಿಯ ಬದಿಯಲ್ಲೇ. ಅಲ್ಲದೇ ಹೊಯ್ಸಳರ ಕಾಲದ ಮಲ್ಲೇಶ್ವರ ದೇವಾಲಯವೂ ಶಿಥಿಲಾವಸ್ಥೆಯಲ್ಲಿದೆ. ಮಾಲಂಗಿ ಮಡುವಿಗೆ ಹೋಗುವ ಮಾರ್ಗದಲ್ಲಿ ನಾಲ್ಕಾರು ವೀರಗಲ್ಲುಗಳಿವೆ. ಮಾಲಂಗಿ ಮಡುವು ಇತಿಹಾಸಪ್ರಸಿದ್ಧವಾಗಿದ್ದು, ಮೈಸೂರು ಅರಸ, ಒಂದನೆಯ ರಾಜ ಒಡೆಯನಿಗೆ 'ತಲಕಾಡು ಮರಳಾಗಿ, ಮಾಲಂಗಿ ಮಡುವಾಗಿ ಮೈಸೂರು ಅರಸರಿಗೆ ಮಕ್ಕಳಾಗದಿರಲಿ' ಎಂದು ಶಪಿಸಿದ ಶ್ರೀರಂಗರಾಯನ ಮಡದಿ ಅಲಮೇಲಮ್ಮನು ಹೊಳೆಗೆ ಬಿದ್ದು ಸತ್ತ ಸ್ಥಳವೇ 'ಮಾಲಂಗಿ ಮಡುವು' ಎಂದು ಹೇಳಲಾಗುತ್ತದೆ. ಉಳಿದಂತೆ ಊರಿನಲ್ಲಿ ಇತ್ತೀಚಿನದಾದ ಗ್ರಾಮದೇವತೆ ಗುಡಿ ಇದೆ. ಕಾವೇರಿ ನದಿಯಿಂದ ಇಲ್ಲಿಯ ಪಂಪಿಂಗ್‌ಸ್ಟೇಷನ್ ಮೂಲಕ ನೀರನ್ನು ಮೇಲಕ್ಕೆತ್ತಿ ನೆರೆಹೊರೆಯ ಗ್ರಾಮಗಳಿಗೆ ನೀರಾವರಿಗೆ ಬಳಸಿಕೊಳ್ಳಲಾಗುತ್ತಿದೆ.



**ತಿರುಮಕೂಡಲು (೪೪೦) :** ಕಾವೇರಿ–ಕಪಿಲ ಸಂಗಮ ಸ್ಥಳದಲ್ಲಿ ತಾಲೂಕು ಕೇಂದ್ರ ನರಸೀಪುರದಿಂದ ಆಚೆ ದಡದಲ್ಲಿರುವ ತೀರ್ಥಸ್ಥಳ. ತಿರುಮಕೂಡಲಿನ ಆಚೆ ದಡದಲ್ಲಿರುವ ಬೆನಕನಹಳ್ಳಿಯಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಅವಶೇಷಗಳನ್ನು ಬಹಳ ಹಿಂದೆಯೇ ಪತ್ತೆಹಚ್ಚಿದ್ದಾರೆ. ಕಾವೇರಿ–ಕಪಿಲ ನದಿಗಳು ಕೂಡುವ (ತಿರು–ಮಹಾಕೂಡಲು) ಸಂಗಮ ಸ್ಥಳ ಇದಾಗಿದ್ದು, ಈ ಎರಡು ನದಿಗಳು ಅಲ್ಲಿರುವ ಸ್ಫಟಿಕ ಸರೋವರದೊಂದಿಗೆ ಸಂಗಮಿಸುವುದರಿಂದ ಇದಕ್ಕೆ 'ತಿರುಮಕೂಡಲು' ಎಂಬ ಹೆಸರು ಬಂದಿದೆ ಎಂದೂ ಹೇಳಲಾಗುತ್ತದೆ. ಇದನ್ನು ಸ್ಥಳೀಯ ಶಾಸನಗಳೂ ಮಾರ್ದನಿಸುತ್ತವೆ. ಅಲ್ಲದೆ ಇದಕ್ಕೆ ಸಾಕ್ಷಿಯಾಗಿ ಎರಡು ನದಿ(ಕಾವೇರಿ ಹಾಗೂ ಕಪಿಲ)ಗಳು ಸ್ಫಟಿಕ ಸರೋವರದೊಂದಿಗೆ ಒಂದಾಗುವ ಸ್ಥಳದಲ್ಲಿ ನಿಲ್ಲಿಸಿರುವ ನಂದಿಕಂಬವನ್ನು ತೋರಿಸಲಾಗುತ್ತದೆ. ಇಲ್ಲಿಂದ ಈವರೆಗೆ ಹನ್ನೆರಡು ಶಾಸನಗಳು ವರದಿಯಾಗಿವೆ. ಅಲ್ಲದೇ ತಿರುಮಕೂಡಲಿನ ಉಲ್ಲೇಖ ಇತರೆಡೆಯ ಶಾಸನಗಳಲ್ಲೂ ಕಂಡು ಬರುತ್ತವೆ. ತುಂಬಲದ ೧೧೮೦ರ ಎರಡು ಶಾಸನಗಳು ಇಮ್ಮಡಿ ಬಲ್ಲಾಳನ ಆಳ್ವಿಕೆಯಲ್ಲಿ ತಿರುಮಕೂಡಲಿನ ಅಗಸ್ತೇಶ್ವರ ದೇವರ ಪೂಜಾವಿಧಿಗೆಂದು ತುಂಬಲ ಮತ್ತದರ ಉಪಗ್ರಾಮಗಳನ್ನು ಅರಸನು ಅಘಜೀಯನಿಗೆ ದತ್ತಿ ಬಿಟ್ಟಿದ್ದನ್ನು ದಾಖಲಿಸುತ್ತದೆ. ತಿರುಮಕೂಡಲಿನ ಮೊದಲ ಉಲ್ಲೇಖ ಇದಾಗಿದ್ದು, ಪ್ರಾಚೀನ ಶಾಸನಗಳಲ್ಲಿ ದಕ್ಷಿಣ ಪ್ರಯಾಗ, ದಕ್ಷಿಣ ವಾರಣಾಸಿ, ಭೂಕೈಲಾಸವಾದ ಶ್ರೀರುದ್ರಪಾದ ಸಾನಿಧ್ಯವಾದ ಕಾವೇರಿ ಕಪಿಲ ಸಂಗಮ 'ತಿರುಮಕೂಡಲು' ಎಂದೇ ಉಲ್ಲೇಖಿತಗೊಂಡಿದ್ದು, ಇಲ್ಲಿ ಅಗಸ್ತೇಶ್ವರ, ಹನುಮಂತೇಶ್ವರ, ಗರ್ಗೇಶ್ವರ ಪಾರ್ವತಿ ಮುಂತಾದ ಗುಡಿಗಳಿವೆ. ಹಿಂದೆ ಇದು ಅಗಸ್ತ್ಯಮುನಿಗಳ ಆಶ್ರಮವಾಗಿದ್ದು, ಅವರ ಆದೇಶದಂತೆ ಉತ್ತರದಿಂದ ಶಿವಲಿಂಗವನ್ನು ತರಲು ಹೋದ ಹನುಮಂತನು ಸಕಾಲಕ್ಕೆ ಬರುವಲ್ಲಿ ವಿಫಲನಾದಾಗ ತಾವೇ ಮರಳಿನಿಂದ ಸಿದ್ಧಪಡಿಸಿದ್ದ ಲಿಂಗವನ್ನು ಅಗಸ್ತ್ಯರು ಪ್ರತಿಷ್ಠಾಪಿಸಿ ಪೂಜಿಸಿದರಂತೆ. ಆನಂತರ ಶಿವಲಿಂಗದೊಂದಿಗೆ ಉತ್ತರದಿಂದ ಬಂದ ಹನುಮಂತನು ಇದನ್ನು ಕಂಡು ಸಿಟ್ಟಿನಿಂದ ಈ ಲಿಂಗವನ್ನು ಕೀಳಲು ಯತ್ನಿಸಿದಾಗ ಆದ ಗುರುತನ್ನು ಹನುಮಲಿಂಗದ ಮೇಲೆ ಈಗಲೂ ನೋಡಬಹುದೆಂದು ಆಸ್ತಿಕರು ಹೇಳುತ್ತಾರೆ. ನಂತರದಲ್ಲಿ ಅಗಸ್ತ್ಯಲಿಂಗವಿರುವ ಈ ಕ್ಷೇತ್ರಗಳಲ್ಲೇ ಹನುಮಂತನು ತಂದಿದ್ದ ಹನುಮಂತೇಶ್ವರ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಯಿತಂತೆ. ಕಚ್ಚು ಬಿದ್ದಿರುವ ಅಗಸ್ತೇಶ್ವರ ಲಿಂಗದಲ್ಲಿನ ಗುಳಿಯ ನೀರನ್ನು ಭಕ್ತರು ಪ್ರಸಾದವೆಂದು ಈಗಲೂ ಪರಿಗಣಿಸಿ ಸ್ವೀಕರಿಸುತ್ತಾರೆ. ಸುಮಾರು ೧೦ನೆಯ ಶತಮಾನಕ್ಕೆ ಸೇರಿದ ಗುಡಿ ಇದೆಂದು ಈವರೆಗೆ ಪರಿಗಣಿಸಲಾಗಿತ್ತು. ಈ ಗುಡಿಯ ಪರಿಸರದಲ್ಲಿ ಲಭಿಸಿರುವ ಮುಮ್ಮಡಿ ನರಸಿಂಹನ ಕಾಲದ ಶಾಸನಗಳಲ್ಲಿ ಎರಡು ಶಾಸನಗಳು ಅರಸನ ಸಾಮಂತನಾದ ಗಂಗಮಂಡಲ ಪಿಳ್ಳೆಯು ಅಗಸ್ತೇಶ್ವರ ದೇವರ ಸನ್ನಿಧಿಯಲ್ಲಿ ಬಲಿಪೀಠ ಹಾಗೂ ವೃಷಭದೇವರನ್ನೊಳಗೊಂಡ ವೃಷಭ ಮಂಟಪವನ್ನು ನಿರ್ಮಿಸಿದ ಅಂಶವನ್ನು ತಿಳಿಸುತ್ತದೆ. ಇಮ್ಮಡಿ ವೀರಹರಿಹರನ ಕಾಲದ ಭೈರಾಪುರದ ೧೩೯೨ರ ಶಾಸನ ತಿರುಮಕೂಡಲನಾಥನ ಸನ್ನಿಧಿಯಲ್ಲಿ ಭೈರಾಪುರವನ್ನು ಆಲುಗೋಡಿನ ಕೇದಾರನಾಥನಿಗೆ ದತ್ತಿ ಬಿಟ್ಟಿದ್ದನ್ನು ದಾಖಲಿಸುತ್ತದೆ. ತಿರುಮಕೂಡಲಿನ ದೇವರಕಟ್ಟೆ ಬಳಿಯಿರುವ ೧೪೯೪ರ ಶಾಸನ, ಮಹಾಮಂಡಳೇಶ್ವರ

ವೀರನಂಜರಾಜವೊಡೆಯನ ಕಾಲದಲ್ಲಿ ಪರ್ವತಯ್ಯನು ಅಗಸ್ತ್ತೇಶ್ವರ, ಗರ್ಗೇಶ್ವರ ದೇವರ ಸನ್ನಿಧಿಯಲ್ಲಿ ಉಮಾಹರದೇವರನ್ನು ಪ್ರತಿಷ್ಠಾಪಿಸಿ, ಆಲುಗೋಡು ಗ್ರಾಮವನ್ನು ದಾನಬಿಟ್ಟ ಅಂಶವನ್ನು ದಾಖಲಿಸುತ್ತದೆ. ಇಲ್ಲಿ ಪ್ರಸ್ಥಾಪಿಸಿರುವ ಗರ್ಗೇಶ್ವರ ಸನ್ನಿಧಿ ನೆರೆಯ ಗರ್ಗೇಶ್ವರಿಯೇ ಆಗಿದ್ದು, ಅಲ್ಲಿ ಗರ್ಗೇಶ್ವರ ಹಾಗೂ ಉಮಾಹರದೇವರ ಆಲಯಗಳಿವೆ. ಇಲ್ಲಿಯ ಗಣಪತಿಗೆ ಶ್ರೀ ಚಕ್ರಯಂತ್ರವನ್ನು ಬರೆದವರು ಆದಿಶಂಕರರೆಂಬ ಪ್ರತೀತಿ ಇದ್ದು, ಭಕ್ತರ ಕೋರಿಕೆ ಪೂರೈಸುವ ಗಣಪನೆಂದೇ ಪ್ರಸಿದ್ಧನಾಗಿದ್ದಾನೆ.

ನೆರೆಯ ಭೈರಾಪುರದ ಸುಮಾರು ೧೫ನೆಯ ಶತಮಾನದ ಇನ್ನೊಂದು ಶಾಸನದಲ್ಲಿ ತಿರುಮಕೂಡಲಿನ ಹನುಮಂತೇಶ್ವರ ದೇವರ ನಂದಾದೀಪಕ್ಕೆಂದು ಆಲುಗೋಡು ಹಾಗೂ ಭೈರಾಪುರದ ಒಕ್ಕಲುಗಳು ದಾನಬಿಟ್ಟ ಉಲ್ಲೇಖವಿದೆ. ಕೃಷ್ಣದೇವರಾಯನ ಕಾಲಕ್ಕೆ ಸೇರಿದ ತಿರುಮಕೂಡಲಿನ ಶಾಸನದಿಂದ ಶರಣಪ್ಪಸೆಟ್ಟಿಯು ಪಾರ್ವತಿ ಗುಡಿಯನ್ನು ನಿರ್ಮಿಸಿದಾಗ ಪ್ರಾಂತಾಧಿಕಾರಿ ಸಾಳುವ ಗೋವಿಂದರಸನು ಗದ್ದೆಯನ್ನು ದಾನಬಿಟ್ಟ ಅಂಶ ಗೊತ್ತಾಗುತ್ತದೆ.

ಇಲ್ಲಿರುವ ಅಗಸ್ತ್ತೇಶ್ವರ ದೇವಾಲಯವು ವಿಶಾಲ ಸಂಕೀರ್ಣವಾಗಿದ್ದು, ಪ್ರಧಾನದ್ವಾರವು ಉತ್ತರಕ್ಕಿದ್ದರೆ, ಅಗಸ್ತ್ತೇಶ್ವರ ಗುಡಿಯು ಪೂರ್ವಾಭಿಮುಖವಾಗಿದೆ. ಮೂಲತಃ ೧೦-೧೧ನೆಯ ಅಂತ್ಯಕಾಲದ್ದೆಂದು ಊಹಿಸಲಾಗಿರುವ ಈ ಗುಡಿಯು ನಂತರದಲ್ಲಿ ಹೊಯ್ಸಳ, ವಿಜಯನಗರ, ಮೈಸೂರರಸರು ಹಾಗೂ ಸ್ಥಳೀಯ ಪಾಳೇಗಾರರ ಆಡಳಿತಾವಧಿಯಲ್ಲಿ ಹಲವಾರು ಸೇರ್ಪಡೆ ಮಾರ್ಪಾಡುಗಳೊಂದಿಗೆ ವಿಸ್ತಾರಗೊಂಡು ಇಂದಿನ ರೂಪು ಪಡೆದಿದೆ. ಮೂಲಗರ್ಭಗೃಹದಲ್ಲಿ ಅಗಸ್ತ್ತೇಶ್ವರಲಿಂಗವಿದ್ದು, ನವರಂಗದಲ್ಲಿ ದುಂಡಾಕಾರದ ಕಂಬಗಳಿದ್ದು, ಇದರ ಬಾಗಿಲುವಾಡ ಸರಳವಾಗಿದೆ. ನವರಂಗದ ಮುಂಭಾಗದಲ್ಲಿರುವ ವಿಶಾಲವಾದ ಮಂಟಪವು ವಿಜಯನಗರ ಕಾಲದ ರಚನೆಯಾಗಿದ್ದು, ವಿಜಯನಗರ ಶೈಲಿಯ ಕಂಬಗಳಿವೆ. ಇದಕ್ಕೆ ನಂತರದಲ್ಲಿ ಪ್ರಾಕಾರವನ್ನು ಸೇರಿಸಲಾಗಿದ್ದು, ಸುಂದರವಾದ ದ್ವಾರಪಾಲಕರು ಆದಿತ್ಯ, ಸುಬ್ರಹ್ಮಣ್ಯ, ಗಣಪತಿ ಹಾಗೂ ಮಹಿಷಮರ್ಧಿನಿ ಶಿಲ್ಪಗಳಿರುವುದು ಇಲ್ಲೇ. ಅನಂತರದಲ್ಲಿ ಎತ್ತರದ ಕಂಬಗಳುಳ್ಳ ವಿಶಾಲವಾದ ಮಂಟಪ ಹಾಗೂ ಪ್ರಾಕಾರವನ್ನು ೧೯ನೆಯ ಶತಮಾನದಲ್ಲಿ ನಿರ್ಮಿಸಲಾಗಿದೆ. ಈ ಮಂಟಪದ ತೊಲೆ ಹಾಗೂ ಛಾವಣಿಗಳ ಮೇಲೆ ಕಪ್ಪು-ಕೆಂಪುವರ್ಣ ಬಳಸಿ ರಚಿಸಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರು, ಬ್ರಿಟಿಷ್ ಅಧಿಕಾರಿಗಳು ಹಾಗೂ ರೇಖಾಚಿತ್ರ ವಿನ್ಯಾಸಗಳ ಆಕರ್ಷಕ ವರ್ಣಚಿತ್ರವಿಂದು ಮಬ್ಬಾಗಿದ್ದು, ದುಸ್ಥಿತಿಯಲ್ಲಿದೆ. ಇದೇ ಮಂಟಪದಲ್ಲಿ ಶಾಸನೋಕ್ತ ನಂದಿಯಮೂರ್ತಿ ಇದ್ದು, ಗುಡಿಯ ವಾಯವ್ಯ ಭಾಗದಲ್ಲಿ ಶಾಸನೋಕ್ತ ಪಾರ್ವತಿ ಗುಡಿ ಇದ್ದು, ಅದನ್ನಿಂದು 'ಪೂರ್ಣಮಂಗಳ ಕಾಮಾಕ್ಷಿ' ಎಂದು ಕರೆಯಲಾಗುತ್ತಿದೆ. ಈ ಗುಡಿಯ ಆವರಣದಲ್ಲಿ ವಿಷ್ಣು ಹಾಗೂ ದಕ್ಷಿಣಾಮೂರ್ತಿಯ ಶಿಲ್ಪಗಳಿವೆ. ಗುಡಿಯ ಹೊರ ಪ್ರಾಕಾರದ ಪ್ರವೇಶ ದ್ವಾರಕ್ಕೆ ಕಿರುಶಿಖರವಿದ್ದು, ಮುಖಮಂಟಪವೂ ಇದೆ. ಅದರ ಗೋಡೆಯಲ್ಲಿ ೧೯೨೭ರಲ್ಲಿ ನೀಡಿರುವ ದತ್ತಿ ಶಿಲಾಲೇಖವಿದೆ. ಅಲ್ಲದೇ ಆದಿಚುಂಚನಗಿರಿ ಶಾಖಾಮಠದ ಸಮುದಾಯ ಭವನವಿದೆ.



ಅಗಸ್ತ್ತೇಶ್ವರನ ಸನ್ನಿಧಿಯಲ್ಲಿ ಮೂರು ವರ್ಷಕ್ಕೊಮ್ಮೆ ಮಾಘ ಶುದ್ಧ ಪೌರ್ಣಿಮೆಯಲ್ಲಿ ಜರುಗುವ ಕುಂಭಮೇಳದಲ್ಲಿ ಅಸಂಖ್ಯಾತ ಭಕ್ತರು ನೆರೆಯುತ್ತಿದ್ದು, ೨೦೧೦ರಲ್ಲಿ ಕುಂಭಮೇಳವು ಯಶಸ್ವಿಯಾಗಿ ಜರುಗಿತು. ಪ್ರವೇಶದ್ವಾರದ ಬಳಿಯಿರುವ ಆಕರ್ಷಕ ತೋರಣಕಲ್ಲನ್ನು ದೀಪಸ್ತಂಭಗಳು ಹೊತ್ತುನಿಂತಿದ್ದು, ಅಲ್ಲೇ ಬಲಿಪೀಠವಿದೆ. ಇಲ್ಲಿರುವ ಅಷ್ಟಭುಜ ನಾಟ್ಯ ವಿಷ್ಣು ಶಿಲ್ಪ ಅಪರೂಪದ ಹೊಯ್ಸಳ ಶಿಲ್ಪವಾಗಿದ್ದು, ಅದನ್ನಿಂದು ಅಶ್ವಥನಾರಾಯಣನೆಂದು ಕರೆಯಲಾಗುತ್ತಿದೆ. ಅಗಸ್ತ್ತೇಶ್ವರ ದೇವಾಲಯದ ಆವರಣದಲ್ಲಿ ಮಾರ್ಕಂಡೇಶ್ವರ, ಸೋಮೇಶ್ವರ, ಗರ್ಗೇಶ್ವರ ಮುಂತಾದವಲ್ಲದೆ ೨೧ ಬಿಡಿ ಶಿವಲಿಂಗಗಳನ್ನುಳ್ಳ ಕಿರುಗುಡಿಗಳೂ ಪ್ರಾಕಾರದಂಚಿನಲ್ಲಿವೆ. ಈ ಗುಡಿಗೆ ಹೊಂದಿಕೊಂಡಂತೆ ಇರುವ ಅಶ್ವತ್ಥಕಟ್ಟೆಯು ಬ್ರಹ್ಮಪೂಜಿತವೆಂಬ ಹೇಳಿಕೆ ಇದ್ದು, ಅಲ್ಲಿ ಆಕರ್ಷಕವಾದ ನೂರಾರು ನಾಗಕಲ್ಲುಗಳಿವೆ. ಸನಿಹದಲ್ಲೇ ಇರುವ ಬ್ರಹ್ಮೇಶ್ವರ ಗುಡಿಯ ಬದಿಯಲ್ಲಿ ಸುಮಾರು ೧೮ನೇ ಶತಮಾನದಲ್ಲಿದ್ದ ಮಾಧ್ವಯತಿ ರಘುನಾಥತೀರ್ಥ ಶೇಷಚಂದ್ರಿಕಾಚಾರ್ಯರ ವೃಂದಾವನವೂ ಸೇರಿದಂತೆ ಹತ್ತು ವೃಂದಾವನಗಳಿವೆ. ಸೋಸಲೆಯ ವ್ಯಾಸರಾಜ ಮಠದ ಶಾಖಾಮಠವಿದಾಗಿದ್ದು, ಅನತಿ ದೂರದಲ್ಲೇ ಶೃಂಗೇರಿ ಶಾಖಾಮಠವೂ ಇದೆ.

ಇಲ್ಲಿಯ ಅಗಸ್ತ್ತೇಶ್ವರ ದೇವಾಲಯದಷ್ಟೇ ಪ್ರಾಚೀನವಾದ ಹನುಮಂತೇಶ್ವರನ ಗುಡಿಯು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ಗರ್ಭಗೃಹದಲ್ಲಿ, ಹನುಮ ಪ್ರತಿಷ್ಠಾಪಿತ ಹನುಮಂತೇಶ್ವರ ಲಿಂಗವಿದ್ದು, ಗುಡಿಯ ಛಾವಣಿಯು ಇಳಿಜಾರಾಗಿದೆ. ಅಲ್ಲದೇ ಇಲ್ಲಿ ಗಣಪತಿ, ವೀರಭದ್ರ, ಆಂಜನೇಯ, ಗ್ರಾಮದೇವತೆ ಚೌಡೇಶ್ವರಿ ಮುಂತಾದ ನವೀನ ಗುಡಿಗಳಿವೆ. ಇಲ್ಲಿಯ ವೀರಭದ್ರ ಗುಡಿಯು ಹಿಂದೆ ಇಲ್ಲಿದ್ದಿರಬಹುದಾದ ಜೈನ ಬಸದಿಯನ್ನು ಸೂಚಿಸುವಂತಿದೆ. ಅಗಸ್ತ್ತೇಶ್ವರ ಗುಡಿಯಿಂದ ಪೂರ್ವಕ್ಕೆ ಆಚೆ ದಡದಲ್ಲಿರುವ ಆನಂದೇಶ್ವರ ದೇವಾಲಯವನ್ನು ಚಿದಾನಂದ ಎಂಬ ಸನ್ಯಾಸಿಯು ೨೦೦ ವರ್ಷಗಳ ಹಿಂದೆ ನಿರ್ಮಿಸಿದ್ದು, ಬದಿಯಲ್ಲೇ ಭಿಕ್ಷೇಶ್ವರ ಎಂದು ಕರೆಯಲ್ಪಡುವ ಇನ್ನೊಂದು ದೇವಾಲಯವಿದೆ. ಅಗಸ್ತ್ತೇಶ್ವರ ದೇವಾಲಯದ ಹೊರಪ್ರಾಕಾರದ ಸಭಾಮಂಟಪದ ಕಂಬಗಳ ಮೇಲಿರುವ ಉಬ್ಬುಕೆತ್ತನೆಗಳು ವೈವಿಧ್ಯತೆಯಿಂದ ಕೂಡಿದ್ದು, ಕಂಬವೊಂದರ ಮೇಲೆ ಪಿಟೀಲನ್ನು ನುಡಿಸುತ್ತಿರುವ ಸುಂದರಿಯೋರ್ವಳ ಉಬ್ಬುಕೆತ್ತನೆ ಆಕರ್ಷಕವಾಗಿದೆ. ಶ್ರೇಷ್ಠ ಪಿಟೀಲುವಾದಕರಾದ ಚೌಡಯ್ಯ ಮತ್ತವರ ತಾಯಿ ಭರತನಾಟ್ಯ ವಿಶಾರದೆ ಖ್ಯಾತಿಯ ರಾಜನರ್ತಕಿ ಸುಂದರಮ್ಮ ತಿರುಮಕೂಡಲಿನವರಾಗಿದ್ದು, ರಾಜಾಶ್ರಯದಲ್ಲಿದ್ದ ಕಲಾಕೋವಿದರಾಗಿದ್ದು, ಅವರ ವಂಶಸ್ಥರು ಈಗಲೂ ಇಲ್ಲಿದ್ದಾರೆ. ತಿರುಮಕೂಡಲಿನ ೧೫೫೭ರ ಶಾಸನದಿಂದ, ಅಗಸ್ತ್ತೇಶ್ವರ ದೇವರ ಅಂಗ-ರಂಗಭೋಗ, ನೈವೇದ್ಯ, ರಥೋತ್ಸವ, ಹನುಮಂತೇಶ್ವರದೇವರ ಸೇವೆ ಹಾಗೂ ಆದಿಗುಂಜಿಯ ನರಸಿಂಹದೇವರ ತಿರುವಿಡಿಯಾಟಕ್ಕೆಂದು ಶ್ರೀರಂಗಪಟ್ಟಣಕ್ಕೆ ಸಲ್ಲುವ ತುಂಬಲ ಗ್ರಾಮವನ್ನು ರಾಯಸದ ವೆಂಕಟಾದ್ರಿಯು, ತಂದೆ ತಿಮ್ಮರಾಜನ ಪುಣ್ಯಾರ್ಥವಾಗಿ ದಾನ ಬಿಟ್ಟ ಅಂಶ ಗೊತ್ತಾಗುತ್ತದೆ. ಅದೇ ಕಾಲಕ್ಕೆ ಸೇರಿದ ತುಂಬಲದ

ಶಾಸನವೂ ಇದೇ ಅಂಶವನ್ನು ಒಳಗೊಂಡಿರುವುದು ಉಲ್ಲೇಖಾರ್ಹ. ಆ ದಿನಗಳಲ್ಲಿ ರಥೋತ್ಸವಕ್ಕೆ ಬಳಸಲ್ಪಡುತ್ತಿದ್ದ ಕಲಾತ್ಮಕವಾದ ರಥವಿಂದು ಜೀರ್ಣಾವಸ್ಥೆಯಲ್ಲಿ ಅಗಸ್ತ್ಯೇಶ್ವರ ಗುಡಿಯ ಬದಿಯಲ್ಲಿ ನಿಂತಿದೆ. ಚಾಮರಾಜೊಡೆಯನು ಚಾಮರಾಜಸಮುದ್ರ ಎಂಬ ಅಗ್ರಹಾರವನ್ನು ನಿರ್ಮಿಸಿದ ಅಂಶವನ್ನು ದಾಖಲಿಸುವುದರ ಜೊತೆಗೆ 'ಕಾವೇರಿ–ಕಪಿಲಾ ಸಂಗಮದ ತ್ರಿಕೂಟ ಕ್ಷೇತ್ರದಲ್ಲಿನ ಅಗಸ್ತ್ಯೇಶ್ವರ, ಸೋಮೇಶ್ವರ, ಮಾರ್ಕಂಡೇಶ್ವರ, ಹನುಮಂತೇಶ್ವರ, ಗರ್ಗೇಶ್ವರ ಎಂಬ ಪಂಚಲಿಂಗಗಳು ಹಾಗೂ ಸ್ಫಟಿಕ ಸರೋವರ ತೀರದ ಗುಂಜಾ ನೃಸಿಂಹಸ್ವಾಮಿ ಸನ್ನಿಧಿಯಲ್ಲಿ ದತ್ತಿಯನ್ನು ೩೩ ವೃತ್ತಿಗಳನ್ನಾಗಿ ವಿಭಜಿಸಿ ೩೩ ಬ್ರಾಹ್ಮಣರೂ ಸೇರಿದಂತೆ ಗುಂಜಾನರಸಿಂಹಸ್ವಾಮಿಗೆ ದತ್ತಿಬಿಟ್ಟ ಅಂಶವನ್ನು ಅರಹುತ್ತದೆ. ಇದರಿಂದ ತಿರುಮಕೂಡಲು ಕೂಡ ಈ ಶಾಸನದ (೧೬೨೨) ಕಾಲಕ್ಕೆ ಪಂಚಲಿಂಗಕ್ಷೇತ್ರವಾಗಿದ್ದ ಅಂಶ ವೇದ್ಯವಾಗುತ್ತದೆ.

ತಿರುಮಕೂಡಲಿನ ಬಳಿ ಕಾವೇರಿ–ಕಪಿಲ ನದಿಗಳಿಗೆ ೧೯೩೨–೩೪ರಲ್ಲಿ ನಿರ್ಮಿಸಿರುವ ಸೇತುವೆಗಳು ತಾಲೂಕಿನ ಪ್ರಾಚೀನ ಸೇತುವೆಗಳಾಗಿದ್ದು, ಈಗಲೂ ಸುಸ್ಥಿತಿಯಲ್ಲಿವೆ. ಕಾವೇರಿ ನದಿ ತೀರದ ಮರಳಿಗೆ ನೆರೆಯ ಮೈಸೂರಿನಿಂದ ದೂರದ ಬೆಂಗಳೂರುವರೆಗೆ ಬಹಳ ಬೇಡಿಕೆ ಇದೆ. ಮರಳು ಸಾಗಣೆಯನ್ನು ಸರ್ಕಾರ ನಿರ್ಬಂಧಿಸಿದೆ. ಇಲ್ಲಿಯ ಸೇತುವೆ ರಸ್ತೆಗಳು ಶಿಥಿಲಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಪರ್ಯಾಯ ಸೇತುವೆಗಳ ನಿರ್ಮಾಣಕ್ಕೆ ಯೋಜನೆಯನ್ನು ರೂಪಿಸಲಾಗಿದೆ.

**ತಿರುಮಕೂಡಲು ನರಸೀಪುರ (೯೯೨೭)** : ಇಂದು ತಾಲೂಕು ಕೇಂದ್ರವಾಗಿರುವ ಇದು, ೧೮೬೮ರಿಂದ ಆಗಿನ ತಲಕಾಡು ತಾಲೂಕಿನ ಆಡಳಿತಕೇಂದ್ರವಾಗಿದ್ದು, ಮುಂದೆ ೧೮೮೨ರಲ್ಲಿ ತಾಲೂಕಿಗೂ ಇದೇ ಹೆಸರನ್ನು ನೀಡಲಾಯಿತು. ನರಸೀಪುರ ನಗರವು ಕಪಿಲ ಹಾಗೂ ಕಾವೇರಿ ನದಿಯ ಬಲದಂಡೆಯ ಮೇಲಿರುವ ಪಟ್ಟಣವಾಗಿದ್ದು, ಕಾವೇರಿ–ಕಪಿಲ ಸಂಗಮ ಸ್ಥಳದ ಇಕ್ಕೆಲದಲ್ಲಿ ಆಚೀಚೆ ದಡದಲ್ಲಿ ಅಗಸ್ತ್ಯೇಶ್ವರ ಹಾಗೂ ಗುಂಜಾ ನರಸಿಂಹಸ್ವಾಮಿ ದೇವಾಲಯಗಳನ್ನು ಪ್ರಮುಖವಾಗಿ ಹೊಂದಿದೆ. ಅಲ್ಲದೆ ಈ ಪರಿಸರವು ನೂತನ ಶಿಲಾಯುಗ ಹಾಗೂ ಬೃಹತ್ ಶಿಲಾಯುಗ ಜನರ ಬದುಕನ್ನು ಬಿಂಬಿಸುವ ಕುರುಹುಗಳನ್ನು ಹೊಂದಿರುವುದು ಉಲ್ಲೇಖಾರ್ಹವಾಗಿದ್ದು, ಹೊಳೆಯಾಚೆಯ ಬೆನಕಹಳ್ಳಿ ಪರಿಸರದಲ್ಲಿ ಈ ಸಂಸ್ಕೃತಿಗಳಿಗೆ ಸಂಬಂಧಿಸಿದ ಅವಶೇಷಗಳನ್ನು ಅನ್ವೇಷಣೆ, ಉತ್ಖನನಗಳ ಮೂಲಕ ಈಗಾಗಲೇ ವಿದ್ವಾಂಸರು ಬೆಳಕಿಗೆ ತಂದಿದ್ದಾರೆ. ಪ್ರಾಚೀನ ಶಾಸನಗಳಲ್ಲಿ ತಿರುಮಕೂಡಲಿನ ಉಲ್ಲೇಖ ಆರಂಭದಿಂದಲೂ ಕಂಡುಬರುತ್ತಿದ್ದು, ಸುಮಾರು ೧೩ನೆಯ ಶತಮಾನಕ್ಕೆ ಸೇರಿದ ಹೊಯ್ಸಳ ಬಲ್ಲಾಳನ ಹುಣಸೂರು ಶಾಸನದಲ್ಲಿ ಪುಣಿಶೆಯೂರಾದ ಸಿಂಹದೇವಚತುರ್ವೇದಿ ಮಂಗಲ ಮಹಾಸಭೆಯ ಉಲ್ಲೇಖವಿದೆ. ಆದರೆ ನರಸೀಪುರದ ೧೧೮೮ರ ಶಾಸನದಿಂದ ಪುಣಿಶೆಯೂರಿಗೆ ರಾಮದೇವ ಚತುರ್ವೇದ ಮಂಗಲ ಎಂಬ ಹೆಸರಿದ್ದು, ಆ ಊರಲ್ಲಿ ಭೂಮಿಯನ್ನು ಖರೀದಿಸಿ, ಆಲುಗೋಡಿನ ದೇವಾಲಯವೊಂದಕ್ಕೆ ದಾನ ಬಿಟ್ಟ ಅಂಶ ಗೊತ್ತಾಗುತ್ತದೆ. ಇದನ್ನು ಬಿಟ್ಟರೆ ನರಸಿಂಹಪುರ ಅಗ್ರಹಾರದ ಉಲ್ಲೇಖ ನರಸೀಪುರದ ೧೬೨೨



ಹಾಗೂ ೧೭೪೯ರ ತಾಮ್ರ ಶಾಸನಗಳಲ್ಲಿ ಕಂಡು ಬರುತ್ತದೆ. ಆದರೂ ಸಾಂದರ್ಭಿಕ ಆಧಾರದ ಮೇಲೆ ಇದನ್ನು ಹೊಯ್ಸಳ ಮುಮ್ಮಡಿ ನರಸಿಂಹನ ಕಾಲದಷ್ಟು ಹಿಂದಕ್ಕೆ ಗುರುತಿಸಬಹುದೆಂದು ತೋರುತ್ತದೆ. ತಿ.ನರಸೀಪುರದಿಂದ ಈವರೆಗೆ ವರದಿಯಾಗಿರುವ ೧೭ ಶಾಸನಗಳಲ್ಲಿ, ನಾಲ್ಕು ನೆರೆಯ ಆಲುಗೋಡಿಗೂ, ಒಂದು ನೆರೆಯ ಹುಣಸೂರಿಗೂ ಸಂಬಂಧಿಸಿದ್ದು, ಉಳಿದ ೧೩ ಶಾಸನಗಳು (ಸುಮಾರು ೧೩ನೇ ಶತಮಾನದ ನಂತರದವು) ನರಸೀಪುರದ ಆದಿಗುಂಜಾ ನರಸಿಂಹಸ್ವಾಮಿ ಹಾಗೂ ಇತರೇ ದೇವರುಗಳಿಗೆ ಸಂಬಂಧಿಸಿದ ದಾನದತ್ತಿಗಳಾಗಿವೆ. ಅವುಗಳಲ್ಲಿ ಕೃಷ್ಣದೇವರಾಯನ ಕಾಲಕ್ಕೆ ಸೇರಿದ ಶಾಸನ, ಸಾಳುವ ಗೋವಿಂದರಾಜನು ನರಸಿಂಹದೇವರಿಗೆ ಬಿಟ್ಟ ದತ್ತಿಯನ್ನು ದಾಖಲಿಸಿದರೆ, ನೆರೆಯ ತಿರುಮಕೂಡಲಿನ ೧೫೫೬ರ ಶಾಸನದಿಂದ ರಾಯಸದ ವೆಂಕಟಾದ್ರಿಯು ತಿರುಮಕೂಡಲ ಅಗಸ್ತ್ಯೇಶ್ವರ ಹಾಗೂ ದಕ್ಷಿಣ ಪ್ರಯಾಗವಾದ ಆದಿಗುಂಜಾನರಸಿಂಹಸ್ವಾಮಿಯ ತಿರುವಿಡಿಯಾಟಕ್ಕೆಂದು ತುಂಬಲ ಗ್ರಾಮವನ್ನು ದತ್ತಿ ಬಿಟ್ಟ ಅಂಶ ವೇದ್ಯವಾಗುತ್ತದೆ. ತುಂಬಲದ ೧೫೫೬ರ ಶಾಸನವೂ ಇದೇ ಅಂಶವನ್ನು ದಾಖಲಿಸಿದೆ. ಈ ಶಾಸನಗಳಲ್ಲಿ ಆದಿಗುಂಜಿಯ ನರಸಿಂಹ ಎಂದಿದ್ದು, 'ಆದಿಗುಂಜಿ' ನರಸಿಂಹನ ಮೂಲ ಸ್ಥಳವನ್ನು ಸೂಚಿಸುವಂತಿದೆ. ೧೬೨೨ರ ನರಸೀಪುರ ತಾಮ್ರಶಾಸನ ರಾಜ್ಯದಲ್ಲಿ ಈವರೆಗೆ ಲಭಿಸಿರುವ ಅತ್ಯಂತ ಸುದೀರ್ಘ ಶಾಸನವಾಗಿದ್ದು, ಚಾಮರಾಜ ಒಡೆಯನು ನವಿಲೂರು, ಆಲದೂರುಗಳನ್ನು ಒಗ್ಗೂಡಿಸಿ ಚಾಮರಾಜಪುರ ಅಗ್ರಹಾರವನ್ನು ರೂಪಿಸಿ, ಅದರಲ್ಲಿ ಒಂದು ವೃತ್ತಿಯನ್ನು ಗುಂಜಾನರಸಿಂಹಸ್ವಾಮಿಯ ಸೇವೆಗೆಂದು ಉಂಬಳಿ ಬಿಟ್ಟು ಉಳಿದ ೪೦ ವೃತ್ತಿಗಳನ್ನು ೩೩ ಬ್ರಾಹ್ಮಣರಿಗೆ ದತ್ತಿ ಬಿಟ್ಟ ಅಂಶವನ್ನು ದಾಖಲಿಸುತ್ತಾ ನರಸಿಂಹಪುರ ಅಗ್ರಹಾರವನ್ನೂ ಉಲ್ಲೇಖಿಸುತ್ತದೆ. ಇಲ್ಲಿಯ ೧೭೪೯ರ ನರಸಿಂಹಪುರದ (ದಳವಾಯಿ ಅಗ್ರಹಾರ) ತಾಮ್ರಶಾಸನದಿಂದ ಗುಂಜಾನರಸಿಂಹಸ್ವಾಮಿ ಗುಡಿಯ ದಕ್ಷಿಣ ಪಾರ್ಶ್ವದಲ್ಲಿ ೧೪ ಹಳ್ಳಿಗಳನ್ನೊಳಗೊಂಡ ರಾಮಚಂದ್ರಪುರ ಎಂಬ ಅಗ್ರಹಾರವನ್ನು ರೂಪಿಸಿದ್ದ ದಳವಾಯಿ ದೇವರಾಜನು ಅದನ್ನು ೧೨೦ ವೃತ್ತಿಗಳಾಗಿ ವಿಭಜಿಸಿ ಬ್ರಾಹ್ಮಣರಿಗೆ ದತ್ತಿ ಬಿಟ್ಟ ಅಂಶ ಗೊತ್ತಾಗುತ್ತದೆ.

ಉತ್ತರಾಭಿಮುಖವಾಗಿರುವ ಇಲ್ಲಿಯ ಗುಂಜಾ ನರಸಿಂಹಸ್ವಾಮಿ ಗುಡಿಯು ವಿಜಯನಗರ ಕಾಲದ ರಚನೆಯಾಗಿದ್ದು, ವಿಶಾಲವಾಗಿದೆ. ಪ್ರಾಕಾರದ ಮಹಾದ್ವಾರಕ್ಕೆ ಎತ್ತರವಾದ ಗೋಪುರವಿದ್ದು, ಮೇಲೆ ಸುತ್ತಲೂ, ಇಟ್ಟಿಗೆ ಗಾರೆಗಳಿಂದ ಮಾಡಿದ ಕಿರು ದೇವಕೋಷ್ಟಗಳಿವೆ. ಈ ಗುಡಿಯ ದ್ವಾರಮಂಟಪವನ್ನು ೧೭೨೫ರಲ್ಲಿ ಮೂಗೂರಿನ ಕೃಷ್ಣೇಅರಸರ ಪತ್ನಿ ಚಾಮಮ್ಮಣ್ಣಿ ನಿರ್ಮಿಸಿದ್ದಾಗಿ ತಿಳಿದುಬರುತ್ತದೆ. ಮಹಾದ್ವಾರದ ಬಳಿಯಿರುವ ಭಕ್ತವಿಗ್ರಹವನ್ನು ಮೂಗೂರು ಪಾಳೇಗಾರನ ಶಿಲ್ಪವೆಂದು ಹೇಳಲಾಗುತ್ತದೆ. ಒಳಗೆ ಪ್ರಧಾನ ಗರ್ಭಗೃಹದಲ್ಲಿ ಬಲಗೈಯಲ್ಲಿ ಗುಲಗಂಜಿಮರದ ರೆಂಬೆಯನ್ನಿಡಿದಿರುವ ನರಸಿಂಹ ಶಿಲ್ಪವಿದೆ. ಅದರಿಂದಾಗಿ ಈ ಕ್ಷೇತ್ರವು ವಾರಣಾಸಿಗಿಂತ ಒಂದು ಗುಲಗಂಜಿಯಷ್ಟು ಹೆಚ್ಚು ಪವಿತ್ರವೆಂದು ಸಾಂಪ್ರದಾಯಕವಾಗಿ ಹೇಳಲಾಗುತ್ತದೆ. ಗರ್ಭಗೃಹ–ಅಂತರಾಳಗಳ ಮುಂದೆ ವಿಶಾಲವಾದ ನವರಂಗ ಹಾಗೂ ವಿಜಯನಗರ

ಶೈಲಿಯ ಎತ್ತರದ ಕಂಬಗಳನ್ನು ಹೊಂದಿದ ರಂಗಮಂಟಪವಿದೆ. ಅದರ ಕಂಬಗಳ ಮೇಲೆ ರಾಮಾಯಣ ಹಾಗೂ ಭಾಗವತಗಳಿಗೆ ಸಂಬಂಧಿಸಿದ ಕಥನ ಶಿಲ್ಪಗಳಿವೆ. ಈ ಕಂಬಗಳ ಮೇಲಿರುವ ಭಕ್ತ ವಿಗ್ರಹಗಳನ್ನು ಮೂಗೂರು ಪಾಳೇಗಾರರ ಶಿಲ್ಪಗಳೆಂದು ಹೇಳಲಾಗುತ್ತದೆ. ಪ್ರಧಾನ ಗುಡಿಯ ದಕ್ಷಿಣ ಹಾಗೂ ಉತ್ತರ ಭಿತ್ತಿಗಳ ಮೇಲ್ತುದಿಯ ದೇವಕೋಷ್ಟಗಳಲ್ಲಿ ವೆಂಕಟೇಶ, ವೈಕುಂಠನಾರಾಯಣ ನರಸಿಂಹಾವತಾರ ಹಾಗೂ ಕೃಷ್ಣಾವತಾರ ಸಂಬಂಧಿತ ನಯವಾದ ಗಾರೆಶಿಲ್ಪಗಳಿವೆ.

ಈ ದೇವಾಲಯದ ಹಿಂಬದಿಯಲ್ಲಿ ಆಂಡಾಲಮ್ಮ, ಚೆಲುವನಾರಾಯಣ, ಸೀತಾರಾಮ, ಶ್ರೀನಿವಾಸ, ಬೆಣ್ಣೆಕೃಷ್ಣ, ವರದರಾಜಸ್ವಾಮಿ, ವೇದಾಂತ ದೇಶಿಕಾ ಹಾಗೂ ಮಹಾಲಕ್ಷ್ಮೀಯರ ಕಿರುಗುಡಿಗಳಿವೆ. ಅಲ್ಲೇ ವ್ಯಾಸಪ್ರತಿಷ್ಠಿತವೆಂದು ಹೇಳಲಾಗುವ ಹನುಮ ಶಿಲ್ಪವೂ ಸೇರಿದಂತೆ ಹನುಮಂತನ ಎರಡು ಶಿಲ್ಪಗಳಿವೆ. ಇದರ ಎಡಭಾಗದ ಗುಡಿಯಲ್ಲಿ ಜನಾರ್ದನನ ಸುಂದರ ಶಿಲ್ಪವಿದೆ. ಗುಂಜಾನರಸಿಂಹಸ್ವಾಮಿಯ ರಥೋತ್ಸವವು ಜನವರಿ ತಿಂಗಳಲ್ಲಿ ವಿಜೃಂಭಣೆಯಿಂದ ಜರುಗುತ್ತದೆ. ಬದಿಯಲ್ಲೆ ಇರುವ ಪ್ರಹ್ಲಾದ ಮಂಟಪವನ್ನು ಮುಮ್ಮಡಿ ಕೃಷ್ಣರಾಜರ ಸೇವಕನಾದ ಜಗ್ಗುಲಾಲನು ೧೮೫೫ರಲ್ಲಿ ನಿರ್ಮಿಸಿದ್ದು, ಅದಿಂದು ಶಿಥಿಲಾವಸ್ಥೆಯಲ್ಲಿದೆ. ಊರಾಚೆ ಹೆಮ್ಮಿಗೆ ರಸ್ತೆಯಲ್ಲಿ ಎಡಕ್ಕಾದಂತೆ ಕಾವೇರಿಯ ಬಲದಂಡೆಯ ಮೇಲಿರುವ ಮೂಲಸ್ಥಾನೇಶ್ವರ ಗುಡಿಯು ವಿಜಯನಗರ ಕಾಲದ ರಚನೆಯಾಗಿದ್ದು, ಅನಂತರದಲ್ಲಿ ಲಕ್ಷ್ಮೀನಾರಾಯಣ, ದಕ್ಷಿಣಾಮೂರ್ತಿ, ಸಚ್ಚಿದಾನಂದೇಶ್ವರಿ, ಶಿವಕಾಮೇಶ್ವರಿ ಹಾಗೂ ಚಂಡಿಕೇಶ್ವರಿ ಗುಡಿಗಳನ್ನು ಸೇರಿಸುವ ಮೂಲಕ ಅದನ್ನು ವಿಸ್ತರಿಸಲಾಗಿದೆ. ಮೂಲಸ್ಥಾನಗುಡಿಯ ಹಿಂಬದಿಯಲ್ಲಿ ಮರವೊಂದರ ಬುಡಕ್ಕೆ ಒರಗಿಸಿರುವ ಪಾರ್ಶ್ವನಾಥತೀರ್ಥಂಕರ ಶಿಲ್ಪದ (ಇದು ಹಿಂದಿನ ತಾಲೂಕು ಕಚೇರಿ ಬಳಿ ಇತ್ತೆಂದು ವರದಿಯಾಗಿದೆ)ಲ್ಲಿರುವ ಶಾಸನದಲ್ಲಿ ಮೂಲಸಂಘ ದೇಶಿಗಣ, ಪುಷ್ಟಕಗಚ್ಚ ಕೊಂಡಕುಂದಾನ್ವಯದ ಉಲ್ಲೇಖವಷ್ಟೇ ಇದೆ. ಈ ಶಾಖೆಗೆ ಸೇರಿದ ದಾನಿಯೊಬ್ಬ ಇದನ್ನು ಮಾಡಿಸಿರುವ ಅಂಶ ಅದರಿಂದ ವೇದ್ಯವಾಗುತ್ತದೆಯಾದರೂ ಹೆಚ್ಚಿನ ವಿವರ ಲಭಿಸುವುದಿಲ್ಲ. ಕಪಿಲ ಹೊಳೆದಂಡೆಯಲ್ಲಿರುವ ಬಲ್ಲೇಶ್ವರ ಎಂಬ ಇನ್ನೊಂದು ದೇವಾಲಯವೂ ಜೀರ್ಣೋದ್ಧಾರಗೊಂಡಿದೆ. ಉಳಿದಂತೆ, ಇತರ ನವೀನಗುಡಿಗಳಷ್ಟೇ ಅಲ್ಲದೇ ಇಗರ್ಜಿ ಹಾಗೂ ಮಸೀದಿಗಳೂ ಇಲ್ಲಿವೆ. (ಪೂರಕ ಮಾಹಿತಿಗೆ ಆಲ್ಗೋಡು, ತಿರುಮಕೂಡಲು ಭಾಗ ನೋಡಿ)

**ತುಂಬಲ (೨,೩೨೨)** : ತಾಲೂಕು ಕೇಂದ್ರ ತಿ.ನರಸೀಪುರದಿಂದ ೧೨ ಕಿ.ಮೀ. ಅಂತರದಲ್ಲಿ ರಂಗಸಮುದ್ರ ರಸ್ತೆಬದಿಯಲ್ಲಿ ಕಾವೇರಿಯ ಬಲದಂಡೆ ಮೇಲಿರುವ ಚಾರಿತ್ರಿಕ ಮಹತ್ವದ ಸ್ಥಳ. ಇತಿಹಾಸ ಪ್ರಸಿದ್ಧ ಸೋಮನಾಥಪುರವು ಈ ಗ್ರಾಮದ ಆಚೆದಡದಲ್ಲಿದ್ದು, ಸ್ಥಳೀಕರು ಬೇಸಿಗೆಯಲ್ಲಿ ಕಾಲ್ನಡಿಗೆಯಲ್ಲೇ ನದಿಯನ್ನು ದಾಟಬಹುದಾಗಿದ್ದು, ಹರಿಗೋಲು ಸೇವೆಯೂ ಲಭ್ಯವಿದೆ. ಪ್ರಾಚೀನ ಶಾಸನಗಳಲ್ಲೂ ತುಂಬಲ ಎಂದೇ ಉಲ್ಲೇಖಿತಗೊಂಡಿರುವ ಇಲ್ಲಿಂದ ಈವರೆಗೆ ನಾಲ್ಕು ಶಾಸನಗಳು ವರದಿಯಾಗಿವೆ. ಅವುಗಳಲ್ಲಿ ಉಪ್ಪರಿಗೆ ಬಸವೇಶ್ವರ ಗುಡಿಯ ಗದ್ದೆ ಬಳಿ ಇರುವ



೧೧೮೦ರ ಎರಡು ಶಾಸನಗಳಿಂದ ಇಮ್ಮಡಿ ಬಲ್ಲಾಳನ ಆಳ್ವಿಕೆಯಲ್ಲಿ, ತಿರುಮಕೂಡಲಿನ ಅಗಸ್ತೇಶ್ವರ ದೇವರ ಅಂಗ–ರಂಗಭೋಗಗಳಿಗೆಂದು ತುಂಬಲ ಹಾಗೂ ಅದರ ಕಾಲುವಳಿ ಗ್ರಾಮಗಳನ್ನು ದಾನ ಬಿಟ್ಟ ಅಂಶ ವೇದ್ಯವಾಗುತ್ತಿದ್ದು, ಅವುಗಳಲ್ಲೊಂದು ಶಾಸನ ಕನ್ನಡದಲ್ಲೂ ಇನ್ನೊಂದು ತಮಿಳಿನಲ್ಲೂ ಇವೆ. ಊರ ಬಸವೇಶ್ವರ ಗುಡಿ ಬಳಿ ಇರುವ ಸುಮಾರು ೧೨ನೆಯ ಶತಮಾನದ ಇನ್ನೊಂದು ಶಾಸನದಿಂದ ಈ ಶಿವಾಲಯವನ್ನು ಕುಂದಯ್ಯನೆಂಬುವನು ನಿರ್ಮಿಸಿದಾಗ ಕಾವಗಾವುಂಡನ ಮಗಳಾದ ಮಾರಿಕಬ್ಬೆಯು ಕೆರೆಯನ್ನು ಕಟ್ಟಿಸಿ, ತೂಬನ್ನು ಇಕ್ಕಿಸಿ, ತೋಟವನ್ನು ರೂಪಿಸಿ ದಾನ ಬಿಟ್ಟ ಅಂಶ ಗೊತ್ತಾಗುತ್ತದೆ. ಗುಡಿಯ ಬಳಿಯ ಹೊಲವೊಂದರಲ್ಲಿರುವ ೧೫೫೬ರ ಶಾಸನದಿಂದ ಸದಾಶಿವರಾಯನ ಆಳ್ವಿಕೆಯಲ್ಲಿ ರಾಯಸದ ವೆಂಕಟಾದ್ರಿಯು ತಿರುಮಕೂಡಲಿನ ಅಗಸ್ತೇಶ್ವರ–ಹನುಮಂತೇಶ್ವರ ದೇವರ ನಿತ್ಯಪೂಜೆ, ರಥೋತ್ಸವಗಳಿಗೆ ಹಾಗೂ ಆದಿಗುಂಜಾ ನರಸಿಂಹಸ್ವಾಮಿಯ ತಿರುವಿಡಿಯಾಟಕ್ಕೆಂದು ತುಂಬಲ ಗ್ರಾಮದ ಆದಾಯವನ್ನು ಸಮಭಾಗ ಮಾಡಿ ದತ್ತಿ ನಿಡಿದ ಅಂಶ ಸ್ಪಷ್ಟವಾಗುತ್ತದೆ. ಊರಲ್ಲಿಂದು ಕಾಶಿಲಿಂಗ, ಉಪ್ಪರಿಗೆ ಬಸವೇಶ್ವರ ಗುಡಿಗಳಿದ್ದು, ಇವುಗಳಲ್ಲಿ ಮೊದಲಿನದು ಹೊಯ್ಸಳರ ಕಾಲದ್ದಾದರೆ, ನಂತರದ್ದು ವಿಜಯನಗರ ಕಾಲದ್ದಾಗಿದೆ. ಊರ ಸಮೀಪದಲ್ಲಿರುವ ಕಂಬದರಾಯನ ಬೆಟ್ಟದ ಮೇಲೆ ಕಂಬದ ನರಸಿಂಹನ ದೇವಾಲಯವಿದೆ. ಈ ನರಸಿಂಹನೇ ಸೋಮನಾಥಪುರದ ಶಾಸನಗಳಲ್ಲಿ ಉಕ್ತವಾಗಿರುವ ಹೊಳೆತಡಿಯ ಭೋಗಾನರಸಿಂಹನಿರಬಹುದೆ? ಇದನ್ನು ಪರಿಶೀಲಿಸುವ ಅಗತ್ಯವಿದೆ.

**ಬನ್ನೂರು (೨೩,೩೯)** ತಾಲೂಕು ಕೇಂದ್ರ ನರಸೀಪುರದಿಂದ ೧೨ ಕಿ.ಮೀ. ವಾಯವ್ಯಕ್ಕಿರುವ ಹೋಬಳಿ ಕೇಂದ್ರವಾಗಿದ್ದು, ೧೯೯೧ರಿಂದ ಪಟ್ಟಣ ಪಂಚಾಯತಿಯ ಆಡಳಿತದಲ್ಲಿದ್ದು, ಪ್ರಸ್ತುತ ಪುರಸಭೆಯನ್ನು ಹೊಂದಿದೆ. ಊರಿನಿಂದ ಸುಮಾರು ಒಂದು ಕಿ.ಮೀ. ದೂರದಲ್ಲಿ ಹರಿದಿರುವ ಕಾವೇರಿಯ ಎಡದಂಡೆಯ ಮೇಲಿರುವ ಇದನ್ನು ಕ್ರಿ.ಶ. ೮–೯ನೆಯ ಶತಮಾನಕ್ಕೆ ಸೇರಿದ ಶಾಸನಗಳಲ್ಲಿ 'ಬನ್ನಿಯೂರು' ಎಂದೂ ಚೋಳ–ಹೊಯ್ಸಳ ಶಾಸನಗಳಲ್ಲಿ ವನ್ನಿಯೂರು, ವನ್ನಿಪುರ, (ವಹ್ನಿಪುರ) ಎಂದು ಹೆಸರಿಸಲಾಗಿದ್ದು, ಕೆಲವೊಮ್ಮೆ ಜನನಾಥ ಚತುರ್ವೇದಿ ಮಂಗಲ, ಅನಾದಿ ಅಗ್ರಹಾರ ಶ್ರೀರಾಮಪುರ ಎಂಬ ವಿಶೇಷಣಗಳೂ ಕಂಡು ಬರುತ್ತಿದ್ದು, ೧೭೦೦ ಮಹಾಜನರನ್ನು ಒಳಗೊಂಡಿತ್ತು. ಕನ್ನಡ ಮೂಲದ 'ಬನ್ನಿಮರ'ದಿಂದ ಈ ಊರಿಗೆ ಬನ್ನೂರು ಎಂಬ ಹೆಸರು ಬಂದಿದೆ.

ಗಂಗ ಶ್ರೀಪುರಷನ ಕಾಲದಲ್ಲಿ ಗಂಗರ ನೆಲೆವೀಡಾಗಿ, ಚೋಳರ ಕಾಲದಲ್ಲಿ ಪ್ರಮುಖ ಪುರವಾಗಿ, ಹೊಯ್ಸಳರ ಕಾಲದಲ್ಲಿ ವಿದ್ಯಾಕೇಂದ್ರ (ಅಗ್ರಹಾರ)ವಾಗಿ ಇದು ಮಹತ್ವ ಪಡೆದಿತ್ತು. ಇದು ವಿಜಯನಗರ ಕಾಲದಲ್ಲೂ ಮಹತ್ವ ಪಡೆದಿದ್ದು, ಇಲ್ಲಿರುವ ಜನ್ಮಾಂಜನೇಯ ದೇವಾಲಯವೇ ಮಧ್ವಪಂಥದ ಯತಿಶ್ರೇಷ್ಠರಲ್ಲೊಬ್ಬರಾದ ವ್ಯಾಸತೀರ್ಥರ ಜನ್ಮಸ್ಥಳವೆಂಬ ನಂಬಿಕೆ ಜನಸಾಮಾನ್ಯರಲ್ಲಿ ದಟ್ಟವಾಗಿದೆ. 'ಬನ್ನೂರು ಕುರಿ' ಎಂಬ ವಿಶಿಷ್ಟ ತಳಿಗೂ ಈ ಊರು ಪ್ರಸಿದ್ಧವಾಗಿದ್ದು, ೨೦ ವಾರ್ಡುಗಳನ್ನು ಹೊಂದಿರುವ

ಇದು ತಾಲೂಕು ಕೇಂದ್ರ ನರಸೀಪುರಕ್ಕಿಂತ ಹೆಚ್ಚು ಜನಸಂಖ್ಯೆ ಹಾಗೂ ವಾರ್ಡುಗಳನ್ನು ಹೊಂದಿದೆ. ಇಲ್ಲಿಂದ ಈವರೆಗೆ ಗಂಗ, ಚೋಳ, ಹೊಯ್ಸಳ, ವಿಜಯನಗರ ಹಾಗೂ ಮೈಸೂರರಸರ ಕಾಲಕ್ಕೆ ಸೇರಿದ ೨೮ ಶಾಸನಗಳು ವರದಿಯಾಗಿವೆ. ಈ ಶಾಸನಗಳಿಂದ ಹಿಂದೆ ಬನ್ನೂರಿನಲ್ಲಿ ಹನುಮೇಶ್ವರ, ಕೈಲಾಸೇಶ್ವರ, ರಾಮನಾಥ, ಜನನಾಥ ಮುಂತಾದ ಪ್ರಾಚೀನ ದೇವಾಲಯಗಳಿದ್ದ ಅಂಶ ವೇದ್ಯವಾಗುತ್ತದೆ.

ಬನ್ನೂರಿನ ಪ್ರಾಚೀನ ದೇವಾಲಯುಗಳಲ್ಲಿ ಕೆಲವು ಈಗಾಗಲೇ ಜೀರ್ಣೋದ್ಧಾರಗೊಂಡು ನವೀಕರಿಸಲ್ಪಟ್ಟಿವೆ. ಹನುಮಂತೇಶ್ವರ ಗುಡಿಯೇ ಇಲ್ಲಿಯ ಅತ್ಯಂತ ಪ್ರಾಚೀನ ದೇವಾಲಯವಾಗಿದ್ದು, ಈ ದೇವಾಲಯದ ನವರಂಗ ಹಾಗೂ ಮುಖಮಂಟಪಗಳಲ್ಲಿರುವ ದುಂಡಾಕಾರದ ಕಂಬಗಳು ಗಂಗರ ಕಾಲವನ್ನು ಸೂಚಿಸುತ್ತಿದ್ದು, ಗರ್ಭಗೃಹದಲ್ಲಿನ ಬೃಹತ್ತಾದ ಶಿವಲಿಂಗವು ಹನುಮ ಪ್ರತಿಷ್ಠಿತವೆಂದು ಹೇಳಲಾಗುತ್ತದೆ. ಈ ದೇವಾಲಯಕ್ಕೆ ಒಂದನೆಯ ರಾಜರಾಜನು ದತ್ತಿ ನೀಡಿರುವ ಅಂಶ ಅಲ್ಲೇ ಇರುವ ಶಾಸನದಿಂದ ಗೊತ್ತಾದರೆ, ಉಳಿದ ಮೂರ್ನಾಲ್ಕು ಹೊಯ್ಸಳ ಶಾಸನಗಳಿಂದ ಅದಕ್ಕೆ ರಾಜಾಶ್ರಯ ಮುಂದುವರಿದ ಅಂಶ ವ್ಯಕ್ತವಾಗುತ್ತದೆ. ಗುಡಿಯ ದಕ್ಷಿಣ ಮಹಾದ್ವಾರದ ಬಳಿಯಿರುವ ಇಮ್ಮಡಿ ದೇವರಾಯನ ೧೪೨೧ರ ಶಾಸನದಿಂದ, ಮಾದರಸನು ಸಾವಿರ ಅಡಕೆ ಮರದ ಸುಂಕವನ್ನು ದಾನಬಿಟ್ಟ ಅಂಶ ಗೊತ್ತಾಗುತ್ತದೆ. ಅಲ್ಲದೇ ಕುಮಾರ ಕಾಣಿಕೆ ಹಾಗೂ ಮೊದೆ ಸುಂಕಗಳನ್ನು ದಾನ ನೀಡಿದ್ದನ್ನೂ ದಾಖಲಿಸಿದೆ. ಅಲ್ಲೇ ಇರುವ ೧೫೪೧ರ ಶಾಸನದಿಂದ, ಅಚ್ಯುತರಾಯನ ಆಳ್ವಿಕೆಯಲ್ಲಿ ತಮ್ಮಣ್ಣ ನಾಯಕನು ವಹ್ನಿಪುರಾಧೀಶ್ವರನಾದ ಹನುಮಂತೇಶ್ವರ ದೇವರಿಗೆ ದಿವ್ಯವಾದ ಹೊಸ ರಥವನ್ನು ನೀಡಿ ಉಮಾ–ಸ್ಕಂದೇಶ್ವರ, ವಿಘ್ನೇಶ್ವರಮೂರ್ತಿಗಳನ್ನು ಪ್ರತಿಷ್ಠಾಪಿಸಿ ಕಾವೇರಿ ಕಾಲುವೆ ಕೆಳಗಿನ ಭೂಮಿಯನ್ನು ದಾನ ಬಿಟ್ಟ ಅಂಶವು ವೇದ್ಯವಾಗುತ್ತದೆ. ಇದೇ ದೇವರಿಗೆ ಆಚರಸನು ಖಂಡುಗ ಗದ್ದೆಯನ್ನು ಬನ್ನೂರಿನಲ್ಲಿ ಖರೀದಿಸಿ ದಾನ ಬಿಟ್ಟ ಅಂಶವನ್ನು ಸುಮಾರು ೧೬–೧೭ನೇ ಶತಮಾನದ ಶಾಸನವೊಂದು ದಾಖಲಿಸಿದೆ. ಈ ದೇವಾಲಯದ ಬದಿಯಲ್ಲಿರುವ ಪಾರ್ವತಿ ಗುಡಿಯು ವಿಜಯನಗರ ಕಾಲದ ರಚನೆಯಂತೆ ತೋರಿದರೂ, ಅದರ ತಳಪಾಯದ ಮೇಲಿರುವ ೧೨೦೩ರ ದತ್ತಿ ಶಾಸನದಿಂದ ಅದು ಹೊಯ್ಸಳರಷ್ಟು ಪ್ರಾಚೀನವೆಂದು ಗೊತ್ತಾಗುತ್ತದೆ.

ಹನುಮಂತೇಶ್ವರ ಗುಡಿಯ ಬಳಿ ಮಧ್ವಯತಿ ವ್ಯಾಸತೀರ್ಥರು ಜನಿಸಿದ ಮನೆ ಇತ್ತೆಂದು ಹೇಳಲಾಗುತ್ತಿದ್ದ ಸ್ಥಳದಲ್ಲಿಂದು ವ್ಯಾಸರಾಜ ಶಾಖಾಮಠವನ್ನು ಸ್ಥಾಪಿಸಲಾಗಿದ್ದು, ಹಿಂದೆ ಅಲ್ಲಿದ್ದ ಹುಣಸೆಮರದ ಪೊಟರೆಯಲ್ಲಿ ಅವರು ಜನಿಸಿದರೆಂದು ಹೇಳಲಾಗುತ್ತದೆ. ಕೃಷ್ಣದೇವರಾಯನಿಗೆ ಕುಹುಯೋಗದಲ್ಲಿ ಸರ್ಪದೋಷವಿದ್ದು, ಅದರಿಂದ ಪಾರಾಗಲು ಹತ್ತು ದಿನಗಳ ಕಾಲ ರಾಜ್ಯದ ಅಧಿಕಾರವನ್ನು ವ್ಯಾಸತೀರ್ಥರಿಗೆ ಅವನು ವಹಿಸಿಕೊಟ್ಟಿದ್ದನೆಂದು ಮಧ್ವ ಗುರುಪರಂಪರೆಯಲ್ಲಿ ವಿವರ ಲಭಿಸುತ್ತದೆ. ಅದರಿಂದಾಗಿ ಇವರು ರಾಜಬಿರುದನ್ನು ಧರಿಸುತ್ತಿದ್ದರೆಂದೂ ಹೇಳಲಾಗುತ್ತದೆ. ಇವರು ನ್ಯಾಯಾಮೃತ,



ತಾತ್ಪರ್ಯಚಂದ್ರಿಕೆ, ತರ್ಕ ತಾಂಡವ, ಮಂದಾರಮಂಜರಿ ಮುಂತಾದ ಸಂಸ್ಕೃತ ಗ್ರಂಥಗಳನ್ನು ರಚಿಸಿದ್ದು, ಕನ್ನಡದಲ್ಲಿರುವ ಇವರ ಕೀರ್ತನೆಗಳೂ ಪ್ರಖ್ಯಾತವಾಗಿವೆ.

ಇಲ್ಲಿಯ ಕೈಲಾಸೇಶ್ವರ (ಕೋಸಲೇಶ್ವರ) ದೇವಾಲಯವು ಹೊಯ್ಸಳರ ಕಾಲದ್ದಾಗಿದ್ದು, ಸಾಕಷ್ಟು ಸೇರ್ಪಡೆಗಳೊಂದಿಗೆ ವಿಜಯನಗರ ಕಾಲದ್ದೆಂಬಂತೆ ಭಾಸವಾಗುತ್ತದೆ. ಈ ಗುಡಿಯಲ್ಲಿ ಇರುವ ೧೧೩೫ರ ಶಾಸನದಿಂದ ಮಹಾಜನರು ಸ್ಥಾಪಿಸಿದ ಅಗ್ಗಿಷ್ಟಿಕೆಗೆಂದು ೧೨ ಗದ್ಯಾಣಗಳನ್ನು ದಾನ ಬಿಟ್ಟ ಅಂಶ ಗೊತ್ತಾದರೆ, ೧೧೯೨ರ ಇನ್ನೊಂದು ಶಾಸನದಿಂದ ಮಧುರಾಂತಕ ಚತುರ್ವೇದಿಮಂಗಲದ ಸಾಮವೇದಿ ಭಟ್ಟನ ಮಡದಿಯು ಈ ದೇವರ ನಂದಾದೀಪಕ್ಕೆಂದು ಮೂರು ಗದ್ಯಾಣವನ್ನು ದತ್ತಿ ಬಿಟ್ಟ ಅಂಶ ಗೊತ್ತಾಗುತ್ತದೆ. ಅಲ್ಲೇ ಇರುವ ೧೫೫೩ರ ಶಾಸನ ಗುಂಡಸಮುದ್ರ ತಟಾಕವನ್ನು ದೇವರಿಗೆ ದಾನಬಿಟ್ಟಿದ್ದನ್ನು ದಾಖಲಿಸುತ್ತದೆ. ಈ ದೇವಾಲಯವನ್ನು ಇಂದು ಸಂಪೂರ್ಣ ಜೀರ್ಣೋದ್ಧಾರ ಮಾಡಲಾಗಿದೆ. ಈ ಗುಡಿಯ ಸಮೀಪದಲ್ಲೇ ೧೯ನೆಯ ಶತಮಾನದಲ್ಲಿದ್ದ ಕರಿಯಪ್ಪ ಸ್ವಾಮಿ ಗದ್ದುಗೆ ಇದೆ.

ಊರ ಬಸ್ ನಿಲ್ದಾಣದ ಬಳಿಯ ಕೋದಂಡರಾಮಸ್ವಾಮಿ ದೇವಾಲಯವು ವಿಶಾಲವಾಗಿದ್ದು, ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪಗಳನ್ನು ಹೊಂದಿದ್ದು, ಗರ್ಭಗೃಹದ ಸುತ್ತ ಪ್ರದಕ್ಷಿಣಾ ಪಥವಿದ್ದು, ಗುಡಿಯ ಸುತ್ತ ಪ್ರಾಕಾರವಿದೆ. ಈ ದೇವಾಲಯದ ಪರಿಸರದಲ್ಲೇ ಗಂಗರ ಕಾಲದ ನಾಲ್ಕು ಶಾಸನಗಳು ಪತ್ತೆಯಾಗಿದ್ದು, ಅದರಿಂದ ಇದು ಗಂಗರ ಕಾಲದಲ್ಲೇ ಅಸ್ತಿತ್ವದಲ್ಲಿದ್ದು, ನಂತರದಲ್ಲಿ ಸಾಕಷ್ಟು ಮಾರ್ಪಾಡುಗಳೊಂದಿಗೆ ವಿಸ್ತಾರಗೊಂಡಿರುವಂತೆ ಭಾಸವಾಗುತ್ತದೆ. ನೆರೆಯ ಅತ್ತಿಹಳ್ಳಿಯ ೧೩೬೮ರ ಶಾಸನದಲ್ಲಿ ಅನಾದಿ ಅಗ್ರಹಾರ ಶ್ರೀರಾಮಪುರವಾದ ಬನ್ನೂರ ಮಹಾಜನಗಳು ಅತ್ತಿಹಳ್ಳಿಯಲ್ಲಿ ದತ್ತಿಬಿಟ್ಟ ಉಲ್ಲೇಖವಿದೆ. ಈ ಶಾಸನದಿಂದ ಆ ವೇಳೆಗೆ ಬನ್ನೂರಿಗೆ ಶ್ರೀರಾಮ ದೇವಾಲಯದಿಂದಾಗಿ, ಶ್ರೀರಾಮಪುರ' ಎಂಬ ವಿಶೇಷ ಅಭಿದಾನ ಲಭಿಸಿದ್ದ ಅಂಶ ವೇದ್ಯವಾಗುತ್ತದೆ. ಕೈಲಾಸೇಶ್ವರ ಗುಡಿಯಲ್ಲಿರುವ ೧೬೧೫ರ ಶಾಸನದಿಂದ, ಮೈಸೂರು ಅರಸ ರಾಜೊಡೆಯರು ಬನ್ನೂರ ರಘುಪತಿ ಸ್ವಾಮಿಯ ಅರ್ಚನೆಗೆಂದು ನೆರೆಯ ಬೇವಿನಹಳ್ಳಿಯನ್ನು ದಾನ ಬಿಟ್ಟ ಅಂಶ ಗೊತ್ತಾಗುತ್ತದೆ. ಈ ದೇವರ ಜಾತ್ರೆಯು ರಾಮನವಮಿಯಂದು ವಿಜೃಂಭಣೆಯಿಂದ ನಡೆಯುತ್ತದೆ. ಈ ಗುಡಿಯ ಆವರಣದಲ್ಲೇ ಮಧ್ವಯತಿ ವ್ಯಾಸತೀರ್ಥರು ಪ್ರತಿಷ್ಠಾಪಿಸಿದರೆಂದು ಹೇಳಲಾಗುವ ಪ್ರಾಣದೇವರು ಜನ್ಮಾಂಜನೇಯನ ಸುಂದರ ಕಿರುಮೂರ್ತಿ ಇದೆ.

ಈ ದೇವಾಲಯದ ಮೂಲೆಯೊಂದರಲ್ಲಿರುವ ಹೊಯ್ಸಳ ಕಾಲದ ಜನಾರ್ದನ ದೇವಾಲಯುವಿಂದು ಗರ್ಭಗೃಹ – ಅಂತರಾಳಗಳಿಗಷ್ಟೇ ಸೀಮಿತವಾಗಿರುವ ಕಿರುಗುಡಿಯಾಗಿದೆ. ಈ ದೇವಾಲಯದ ಅಧಿಷ್ಠಾನ ಭಿತ್ತಿಗಳ ಮೇಲಿರುವ ಸುಮಾರು ೧೧–೧೨ನೇ ಶತಮಾನದ ಶಾಸನಗಳಿಂದ ಜನಾರ್ದನ ಗುಡಿಯ ನಿರ್ಮಾಣ, ಮನವಾಳ ಆಳ್ವಾರ ಪ್ರತಿಷ್ಠೆ, ಬನ್ನೂರಿನ ೧೨೦೦ ಮಹಾಜನ ಹಾಗೂ ಭೂದಾನಗಳ ಬಗ್ಗೆ

ಮಾಹಿತಿ ದೊರೆಯುತ್ತದೆ. ಅಲ್ಲದೆ ಈ ದೇವಾಲಯದಲ್ಲಿ ಸಂಜೆಯ ಮಠವಿದ್ದ ಅಂಶವೂ ವೇದ್ಯವಾಗುತ್ತದೆ. ಗರ್ಭಗೃಹದಲ್ಲಿರುವ ಆಳೆತ್ತರದ ಜನಾರ್ದನ ಶಿಲ್ಪವು ಆಕರ್ಷಕವಾಗಿದೆ.

ಇಲ್ಲಿಯ ತೀರ್ಥ(ಗದ್ದೆ)ರಾಮೇಶ್ವರ ಗುಡಿ ಸಂಪೂರ್ಣಜೀರ್ಣೋದ್ಧಾರಗೊಂಡಿರುವ ಪುರಾತನ ಗುಡಿಯಾಗಿದ್ದು, ಸುಮಾರು ೧೬ನೆಯ ಶತಮಾನದ ಶಾಸನವೊಂದು ಅದರ ತಳಪಾದಿ ಕಲ್ಲಿನ ಮೇಲಿದೆ. ಈ ಗುಡಿಯಲ್ಲಿರುವ ಮಹಿಷಮರ್ಧಿನಿ ಶಿಲ್ಪವು ಗಮನಾರ್ಹವಾಗಿದೆ. ಊರ ಬಸ್‌ಸ್ಟಾಪ್ ಬಳಿ ಇರುವ ಹೆಮಾದ್ರಮ್ಮನ ಗುಡಿಯು ವಿಜಯನಗರೋತ್ತರ ಕಾಲದ್ದಾಗಿದೆ. ಇಲ್ಲಿಯ ಮೂಲಮೂರ್ತಿಯು ಚತುರ್ಭುಜವನ್ನು ಹೊಂದಿದ್ದು, ನಂತರದಲ್ಲಿ ಕಳುವಾಯಿತು. ಈಗಿರುವ ಮೂರ್ತಿಯು ಅದರ ಪ್ರತಿರೂಪವಾಗಿದ್ದು, ಮಾಘಶುದ್ಧ ಪೌರ್ಣಮಿ ಸಂದರ್ಭದಲ್ಲಿ ಜರುಗುವ ದೇವಿಯ ಐದು ದಿನಗಳ ವಾರ್ಷಿಕ ಜಾತ್ರೆಯ ಸಂದರ್ಭದಲ್ಲಿ ಮೆರೆಸಿದ ನಂತರ ದೇವಿ ಮೂರ್ತಿಯನ್ನು ತಾಲೂಕು ಖಜಾನೆಯಲ್ಲಿ ಸಂರಕ್ಷಿಸಿಡಲಾಗುತ್ತದೆ. ಇಲ್ಲಿಯ ಸರೋವರಾಂಜನೇಯ ದೇವಾಲಯವು ಸಣ್ಣ ಹೊಂಡದ ಬಳಿ ಇದ್ದು ಅದರಿಂದಾಗಿ ಇದಕ್ಕೆ ಆ ಹೆಸರು ಬಂದಿದೆ. ಉಳಿದಂತೆ ಊರಲ್ಲಿ ಸಣ್ಣಪುಟ್ಟ ನವೀನ ಗುಡಿಗಳಿವೆ. ಅಲ್ಲದೇ ಇತ್ತೀಚೆಗೆ ನಿರ್ಮಾಣಗೊಂಡಿರುವ ಮಸೀದಿ ಹಾಗೂ ಇಗರ್ಜಿ ಕೂಡ ಇವೆ. **ಒಡ್ಡಗಲ್ ರಂಗಪ್ಪನ ಬೆಟ್ಟ :** ಬನ್ನೂರು–ನರಸೀಪುರ ರಸ್ತೆಯಲ್ಲಿ ಬನ್ನೂರಿನಿಂದ ಮೂರು ಕಿ.ಮೀ. ದೂರದ ಅತ್ತಹಳ್ಳಿಯಿಂದ ನಾಲ್ಕೈದು ಕಿ.ಮೀ. ಒಳಕ್ಕಾದಂತೆ ಬಿ. ಬೆಟ್ಟಹಳ್ಳಿ ಗ್ರಾಮದ ಸರಹದ್ದಿನಲ್ಲಿರುವ ಈ ಬೆಟ್ಟವು ಅಲ್ಲಿರುವ ರಂಗನಾಥನ ಗುಡಿಯಿಂದಾಗಿ ಪ್ರಸಿದ್ಧವಾಗಿದೆ. ಈ ಬೆಟ್ಟದಿಂದಾಗಿ ಊರು ಕೂಡ ಬೆಟ್ಟಹಳ್ಳಿ ಎಂದೇ ಚಿರಪರಿಚಿತವಾಗಿದೆ. ಈ ಬೆಟ್ಟವನ್ನು ಮೇಗಲಕೊಪ್ಪಲಿನಿಂದ ಎರಡು ಕಿ.ಮೀ ನಡೆದು ತಲುಪಬಹುದಾಗಿದೆ. ಅತ್ಯಂತ ಪ್ರಾಚೀನ ಧಾರ್ಮಿಕ ಕೇಂದ್ರವಾದ ಇದು ಶಿಲಾಯುಗ ಸಂಸ್ಕೃತಿಯ ಅವಶೇಷಗಳನ್ನು ಹೊಂದಿದ್ದು, ಆ ಸಂಸ್ಕೃತಿಯ ಶವಸಂಸ್ಕಾರ ಪದ್ಧತಿಯು ಕಳೆದ ಶತಮಾನದ ಪೂರ್ವಾರ್ಧ ಭಾಗದಲ್ಲೂ ರೂಢಿಯಲ್ಲಿತ್ತು. ಈ ದೇವರ ಜಾತ್ರೆಯು ಶ್ರಾವಣ ಮಾಸದಲ್ಲಿ ಬಹಳ ವೈಭವದಿಂದ ಜರುಗುತ್ತದೆ. ಈ ಬೆಟ್ಟಕ್ಕೆ ಅನತಿ ದೂರದಲ್ಲಿರುವ ಉಕ್ಕಲಗೆರೆ ಮಲ್ಲಪ್ಪನ ಬೆಟ್ಟದ ಮೇಲೆ ಮಲ್ಲಿಕಾರ್ಜುನ ದೇವಾಲಯವಿದ್ದು, ಆ ದೇವರ ಜಾತ್ರೆಯು ಶಿವರಾತ್ರಿಯಂದು ಬಹಳ ವಿಜೃಂಭಣೆಯಿಂದ ನಡೆಯುತ್ತದೆ.

**ಮುಡುಕುತೊರೆ (ಟಿ. ತಲಕಾಡು ಬೆಟ್ಟಹಳ್ಳಿ) (೨,೫೮೫) :** ತಾಲೂಕು ಕೇಂದ್ರ ತಿ.ನರಸೀಪುರದಿಂದ ಪೂರ್ವಕ್ಕೆ, ಪೂರಿಗಾಲಿ–ಹ್ಯಾಂಡ್‌ಪೋಸ್ಟ್ ಮಾರ್ಗವಾಗಿ (೨೦ ಕಿ.ಮೀ.) ಇಲ್ಲವೆ ತಲಕಾಡಿನಿಂದ ನಾಲ್ಕು ಕಿ.ಮೀ. ಉತ್ತರಕ್ಕೆ, ಕಾವೇರಿಯ ಎಡದಂಡೆ ಮೇಲೆ, ಟಿ. ಬೆಟ್ಟಹಳ್ಳಿ ಗ್ರಾಮದ ವ್ಯಾಪ್ತಿಯಲ್ಲಿರುವ ಯಾತ್ರಾಸ್ಥಳ. ಕಾವೇರಿ ತೊರೆಯ ಮೂಡಲ ದಿಕ್ಕಲ್ಲಿರುವುದರಿಂದ ಈ ಸ್ಥಳಕ್ಕೆ ಮುಡುಕುತೊರೆ ಎಂಬ ಹೆಸರು ಬಂದಿದೆಯಾದರೂ ಈ ಸ್ಥಳದಲ್ಲಿ ಕಾವೇರಿಯು ದಕ್ಷಿಣಕ್ಕೆ ತಿರುಗಿ ಮುರಿದಂತೆ ಮುಂದೆ ಸಾಗುವ ಮೂಲಕ ಮುರುಕು ತೊರೆ ಎಂಬ ಹೆಸರು ಬಂದು ಮುಂದೆ ಅದೇ



ಮುಡುಕುತೊರೆಯಾಯಿತೆಂಬ ಸ್ಥಳೀಯ ಅಭಿಪ್ರಾಯವೂ ಇದೆ. ಮುಡುಕುತೊರೆಯು ಬೆಟ್ಟದ ಮೇಲಿರುವ ಶ್ರೀಶೈಲ ಮಲ್ಲಿಕಾರ್ಜುನ ಹಾಗೂ ಪಾರ್ವತಿ ದೇವಾಲಯಗಳಿಂದಾಗಿ ಉಲ್ಲೇಖಾರ್ಹವಾಗಿದ್ದು, ತಲಕಾಡಿನ ಪಂಚಲಿಂಗಗಳಲ್ಲಿ ಮುಡುಕುತೊರೆಯ ಮಲ್ಲಿಕಾರ್ಜುನಲಿಂಗವೂ ಒಂದಾಗಿರುವುದರಿಂದ ಪ್ರಸಿದ್ಧವಾಗಿದೆ.

ಪ್ರಾಚೀನ ತಮಿಳು ಶಾಸನಗಳಲ್ಲೂ ವೆಟ್ಟನ್ಪಳ್ಳಿ (೧೧೬೦,೧೧೭೯, ೧೩೨೦) ಬೆಟ್ಟಳ್ಳಿ (೧೬೦೩) ಎಂದೇ ಉಲ್ಲೇಖಿತಗೊಂಡಿರುವ ಇದನ್ನು ೧೬೦೩ರ ಶಾಸನದಲ್ಲಿ ಮುಡುಕುತೊರೆ ಎಂದೇ ಕರೆಯಲಾಗಿದೆ. ಇಲ್ಲಿಂದ ಈವರೆಗೆ ವರದಿಯಾಗಿರುವ ೧೪ ಶಾಸನಗಳಲ್ಲಿ ಏಳು ಹೊಯ್ಸಳರ ಕಾಲಕ್ಕೂ, ಎರಡು ವಿಜಯನಗರ ಕಾಲಕ್ಕೂ ಹಾಗೂ ಉಳಿದ ಐದು ೧೭–೧೮ನೇ ಶತಮಾನಕ್ಕೂ ಸೇರಿದ್ದಾಗಿವೆ. ಅವುಗಳಲ್ಲಿ ಇಮ್ಮಡಿ ಬಲ್ಲಾಳನ ಕಾಲದ ೧೧೭೯ರ ಶಾಸನ, ಬೆಟ್ಟನ್ಪಳ್ಳಿಯ ಮಲೈ ಮೇಲಿರುವ ಮಲ್ಲಿಕಾರ್ಜುನ ದೇವರಿಗೆ ಮಾಸಯ್ಯನಾಯಕರ ಪೆರ್ಗಡೆಯಾದ ವೈಚ್ಚಪ್ಪನ ರಾಮಯ್ಯನು ಭೂದಾನ ನೀಡಿದ್ದನ್ನು ದಾಖಲಿಸಿದರೆ, ಇದೇ ಅರಸನ ಇನ್ನೆರಡು ಶಾಸನ ಗಾಣಗಳನ್ನು ದಾನ ಬಿಟ್ಟ ಅಂಶವನ್ನು ದಾಖಲಿಸುತ್ತವೆ. ವೀರನರಸಿಂಹನ ಕಾಲದ ೧೨೮೦ರ ಇನ್ನೊಂದು ಶಾಸನ, ಅತ್ತಿಪಳ್ಳಿಯ ಕುಂಬಾಂಡಯ್ಯ ಹಾಗೂ ಸಂಗಣ್ಣಯ ಸೋದರರು, ವೆಟ್ಟಪಳ್ಳಿಯ ರಾಮನಾಥ ದೇವಸ್ಥಾನದ ಭೂಮಿಯನ್ನು ಖರೀದಿಸಿ ದಾನ ಬಿಟ್ಟ ಅಂಶವನ್ನು ಉಲ್ಲೇಖಿಸುತ್ತದೆ. ಮುಮ್ಮಡಿ ಬಲ್ಲಾಳನ ಕಾಲಕ್ಕೆ ಸೇರಿದ ೧೩೨೦ರ ಒಂದು ಶಾಸನ, ರಾಜರಾಜಪುರ(ತಲಕಾಡು)ದ ನಗರ್ತರು, ಬೆಟ್ಟಹಳ್ಳಿಯ ಕೆರೆ ಕೆಳಗಣ ಭೂಮಿಯನ್ನು ಖರೀದಿಸಿ ಪಟ್ಟಣಸ್ವಾಮಿಗಳಿಗೆ ದಾನ ಬಿಟ್ಟ ಅಂಶವನ್ನು ತಿಳಿಸಿದರೆ, ಇನ್ನೊಂದು ತಮಿಳು ಶಾಸನ, ತಲಕಾಡಿಗೆ ಸೇರಿದ ವಾಗೀಶ್ವರಮಂಗಲವಾದ ಸಿರಿಯಕುಲ ಮಾಣಿಕ್ಯಪಳ್ಳಿಯಲ್ಲಿ ಭೂಮಿಯನ್ನು ಖರೀದಿಸಿ ದಾನ ಬಿಟ್ಟ ವಿಷಯವನ್ನು ಅರುಹುತ್ತದೆ. ವಿಜಯನಗರ ಕಾಲಕ್ಕೆ ಸೇರಿದ ೧೪೩೫ರ ಶಾಸನದಿಂದ, ಮಲ್ಲಿಕಾರ್ಜುನದೇವರ ದೀಪಾರಾಧನೆಯನ್ನು ತಲಕಾಡ ಮಾಗಣೆದಾರ ಆದಿತ್ಯ ಮತ್ತಿತರರು ವಿರುಪಣ್ಣಒಡೆಯನ ಅನುಮತದೊಂದಿಗೆ ನಿರ್ವಹಿಸುತ್ತಿದ್ದು, ಅದಕ್ಕಾಗಿ ಸುಂಕದ ನರಹರಿದೇವ ಹಾಗೂ ಲಿಂಗರಸ ಒಡೆಯರು ಸುಂಕವನ್ನು ದಾನ ಬಿಟ್ಟ ಅಂಶ ಗೊತ್ತಾಗುತ್ತದೆ. ಅಲ್ಲೇ ಇರುವ ೧೫೧೩ರ ಶಾಸನದಿಂದ ಸೋಸಲೆಯ ಚಿಕ್ಕಣ್ಣನು ಮುಡುಕುತೊರೆಯ ಮಲ್ಲಿಕಾರ್ಜುನ ದೇವರ ನಂದಾದೀಪಕ್ಕೆಂದು ಕೆರೆಕೆಳಗಣ ನಂದನವನವನ್ನು ನೀಡಿ ೨೯ ಮಗ್ಗಗಳ ತೆರಿಗೆಯನ್ನೂ ಬಿಟ್ಟುಕೊಟ್ಟ ಅಂಶ ಗೊತ್ತಾಗುತ್ತದೆ. ಮುಡುಕುತೊರೆ ರಸ್ತೆ ಬದಿಯಲ್ಲಿರುವ ೧೬೦೩ರ ಶಾಸನದಿಂದ, ಗಜಾರಣ್ಯ ಕ್ಷೇತ್ರದ ಒಡೆಯನಾದ ವೈದೇಶ್ವರ ಸ್ವಾಮಿಯ ವಾಮದೇವ ಮುಖವೆಂಬ ಹೆಗ್ಗಳಿಕೆಗೆ ಪಾತ್ರವಾದ ಮುಡುಕುತೊರೆಯ ಶ್ರೀಶೈಲಮಲ್ಲಿಕಾರ್ಜುನ ದೇವರ ಸೇವೆಗೆಂದು ಮೈಸೂರು ಚಾಮರಾಜ ಒಡೆಯರು, ಬೆಟ್ಟಹಳ್ಳಿಗೆ ದೇವರಾಜಪುರ ಎಂದು ಹೆಸರಿಟ್ಟು, ರಥಸಪ್ತಮಿ ಪುಣ್ಯಕಾಲದಲ್ಲಿ ದಾನ ನೀಡಿದ ಅಂಶ ಗೊತ್ತಾಗುತ್ತದೆ. ಅಲ್ಲೇ ಇರುವ ಸುಮಾರು ೧೭ನೆಯ ಶತಮಾನದ ಇನ್ನೆರಡು ಶಾಸನಗಳಲ್ಲೊಂದು, ಗುಡಿಯ ಮುಂದಿರುವ ಹಿತ್ತಾಳೆಯ ಧ್ವಜಸ್ತಂಭವನ್ನು

ಕುದೇರು ಗ್ರಾಮದ ಮಾಳಿಗೆ ಮನೆ ಬಸೆಟ್ಟಿಯು ಪ್ರತಿಷ್ಠೆ ಮಾಡಿಸಿದ ಅಂಶವನ್ನು ದಾಖಲಿಸುತ್ತದೆ. ಅಲ್ಲದೆ ಗುಡಿಯ ಎಡಭಾಗದ ಚಿತ್ರಮಂಟಪದ ಮೇಲಿರುವ ವರ್ಣಚಿತ್ರಗಳಿಗೆ ಪೂರಕವಾದ ಗಿರಿಜಾಕಲ್ಯಾಣಮಂಟಪದ ಭಿತ್ತಿ ಬರಹಗಳನ್ನು ನೋಡಬಹುದಾಗಿದೆ.

ಬೆಟ್ಟದ ತುದಿಯಲ್ಲಿರುವ ಮಲ್ಲಿಕಾರ್ಜುನ ದೇವಾಲಯವು ಗಂಗರ ಕಾಲದಷ್ಟು ಪುರಾತನವೆನಿಸಿದರೂ, ಹೊಯ್ಸಳರ ಕಾಲದಿಂದ ಅದರ ಉಲ್ಲೇಖ ದೊರೆಯುತ್ತದೆ. ಸುಮಾರು ೪೦೦ ಮೆಟ್ಟಿಲುಗಳನ್ನೇರಿ, ಮುಮ್ಮಡಿ ಕೃಷ್ಣರಾಜಒಡೆಯರಿಂದ ನಿರ್ಮಾಣಗೊಂಡಿತೆಂದು ಹೇಳಲಾಗುವ ಕಿರಿದಾದ ದ್ವಾರಗೋಪುರದ ಮೂಲಕ ಪ್ರಾಕಾರವನ್ನು ಪ್ರವೇಶಿಸಿದರೆ ಎದುರಾಗುವುದೇ ಶಾಸನೋಕ್ತ ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯ. ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿರುವ ಈ ದೇವಾಲಯದ ಕಂಬಗಳು ಕಿರುಗಾತ್ರದ್ದಾಗಿವೆ. ಗರ್ಭಗೃಹದಲ್ಲಿರುವ ಶಿವಲಿಂಗವು ಸ್ವಯಂಭುಲಿಂಗವಾಗಿದ್ದು, ಅದರ ಮೇಲೆ ಕಾಮಧೇನುವಿನ ಗೊರಸಿನ ಗುರುತಿದೆ ಎಂದು ಹೇಳಲಾಗುತ್ತದೆ. ನವರಂಗದ ಕಂಬಗಳ ಮೇಲಿರುವ ರಾಮ–ಲಕ್ಷ್ಮಣ, ಹನುಮಂತ, ನರ್ತಕಿಯರೇ ಮುಂತಾದ ಉಬ್ಬುಶಿಲ್ಪಗಳು, ಗಂಗಶಿಲ್ಪ ಲಕ್ಷಣವನ್ನು ಹೋಲುತ್ತವೆ. ಗರ್ಭಗೃಹದ ಎಡಬದಿಯಲ್ಲಿರುವ ಭ್ರಮರಾಂಬ ಗುಡಿಯೂ ಸೇರಿದಂತೆ ಪ್ರಾಕಾರ ಇತ್ಯಾದಿಗಳು ವಿಜಯನಗರ ಕಾಲದ್ದಾಗಿವೆ. ಬದಿಯಲ್ಲಿರುವ ಚಿತ್ರಮಂಟಪದ ಭಿತ್ತಿಯ ಮೇಲೆ ಮೈಸೂರು ಅರಸರ ಕಾಲದ ವರ್ಣಚಿತ್ರಗಳಿವೆ. ಗಿರಿಜಾಕಲ್ಯಾಣದ ದೃಶ್ಯವನ್ನು ಒಳಗೊಂಡ ಕೈಲಾಸದ ಒಡ್ಡೋಲಗವನ್ನು ಅಲ್ಲಿ ಚಿತ್ರಿಸಲಾಗಿದ್ದು, ಇಂದು ಮಸುಕಾಗುತ್ತಿದ್ದು, ರಕ್ಷಿಸುವ ಅಗತ್ಯವಿದೆ. ಈ ದೇವಾಲಯದ ಹಿಂಬದಿಯಲ್ಲಿರುವ ಐದು ಕಿರುಗುಡಿಗಳಲ್ಲಿ ಶಿವಲಿಂಗಗಳಿವೆ. ಮೂಲಗರ್ಭಗೃಹದ ಹೊರಭಿತ್ತಿಯ ಮೇಲೆ ಗಂಗಶಿಲ್ಪ ಲಕ್ಷಣವುಳ್ಳ ಮಹಿಷಮರ್ಧಿನಿಯ ಸುಂದರ ಶಿಲ್ಪವಿದೆ. ಬೆಟ್ಟದ ತಪ್ಪಲಿನಲ್ಲಿ ಮಾಘ ಪೂರ್ಣಿಮೆಯಂದು ಜರುಗುವ ವಾರ್ಷಿಕ ಜಾತ್ರೆಯ ಸಂದರ್ಭದಲ್ಲಿ ತಲಕಾಡಿನ ತಾಂಡವೇಶ್ವರನನ್ನು ಇಲ್ಲಿ ತಂದಿರಿಸಲಾಗುತ್ತದೆ. ವಿನಾಯಕ, ಷಣ್ಮುಖ, ಭ್ರಮರಾಂಬ ಸಹಿತ ಮಲ್ಲಿಕಾಜುನದೇವರುಗಳಿಗಾಗಿ ಪ್ರತ್ಯೇಕ ರಥಗಳನ್ನು ಏಕಕಾಲದಲ್ಲಿ ಎಳೆಯಲಾಗುತ್ತದೆ. ಆ ರಥಗಳಲ್ಲಿ ಮಲ್ಲಿಕಾರ್ಜುನ–ಪಾರ್ವತಿಯರ ರಥವು ಚಿತ್ತಾಕರ್ಷಕವಾಗಿರುತ್ತದೆ. ಈ ಜಾತ್ರೆಗೆ ಒಂದು ತಿಂಗಳು ಮೊದಲೇ ಆರಂಭವಾಗುವ ದನಗಳ ಜಾತ್ರೆಯೂ ಪ್ರಸಿದ್ಧವಾಗಿದ್ದು, ಜಾತ್ರೆಯ ಕೊನೆಯ ದಿನ ನಡೆಯುವ ದನಗಳ ಓಟಸ್ಪರ್ಧೆಯಲ್ಲಿ ಗೆಲ್ಲುವ ಎತ್ತಿನ ಮೇಲೆ ಪಾರ್ವತಿಯನ್ನು ಕೂರಿಸಿಕೊಂಡು ಸುತ್ತಲಿನ ಊರುಗಳಲ್ಲಿ ಮೆರೆಸಿದ ನಂತರ ದೇವಿಗೆ ಮಡಿಲಕ್ಕಿ ತುಂಬಿ ಶ್ರೀಶೈಲದಲ್ಲಿ ನಡೆಯುವ ಮಲ್ಲಿಕಾರ್ಜುನನ ಜಾತ್ರೆಗೆ ಕಳುಹಿಸಲಾಗುತ್ತದೆ. ಅಲ್ಲಿಂದ ಹಿಂತಿರುಗಿದ ನಂತರ ಮತ್ತೆ ದೇವಿಯನ್ನು ಸುತ್ತಮುತ್ತಲಿನ ಊರಲ್ಲಿ ಮೆರೆಸಿ, ಗುಡಿಗೆ ಸೇರಿಸಲಾಗುತ್ತದೆ. ಮುಡುಕುತೊರೆಯಲ್ಲಿ ವೀರಶೈವರ ಮಠ, ಹಾಗೂ ಕಲ್ಯಾಣಮಂಟಪಗಳಿವೆ. ಅಲ್ಲದೇ ಅರಸು ಹಾಗೂ ಉಪ್ಪಾರ ಜನಾಂಗದವರ ಕಲ್ಯಾಣಮಂಟಪಗಳೂ ಇವೆ.



ಮುಡುಕುತೊರೆಯ ಮಲ್ಲಿಕಾರ್ಜುನ ಲಿಂಗವು ಪಂಚಮುಖಿ ಶಿವನ ವಾಮದೇವ ಭಾಗವೆಂಬ ನಂಬಿಕೆಯಿದ್ದು, ತಲಕಾಡಿನ ಪಂಚಲಿಂಗದರ್ಶನ ಸಂದರ್ಭದಲ್ಲಿ ದರ್ಶನಾರ್ಥಿಗಳು ಸಂದರ್ಶಿಸಬೇಕಾದ ಐದು ಶಿವಲಿಂಗಗಳಲ್ಲಿ ಇದೂ ಒಂದಾಗಿದೆ. ಮುಡುಕುತೊರೆ ಬೆಟ್ಟದ ಮೇಲಿಂದ ಪಶ್ಚಿಮಕ್ಕೆ ದೃಷ್ಟಿ ಹಾಯಿಸಿದರೆ ಕಾಣಸಿಗುವ, ಅಂಕುಡೊಂಕಾಗಿ ಹರಿದಿರುವ ಕಾವೇರಿ ನದಿಯ ಹಸಿರು ಬಯಲಿನ ವಿಹಂಗಮ ನೋಟ, ಮಾಧವಮಂತ್ರಿ ಅಣೆ, ಭೂರೂಚ ವಿದ್ಯುತ್ ಉತ್ಪಾದನಾ ಕೇಂದ್ರ ಹಾಗೂ ಹೆಮ್ಮಿಗೆ ಬಳಿ ಇರುವ ಕಾವೇರಿಯ ನೂತನ ಸೇತುವೆಗಳು (೨೦೦೫) ಮನಸ್ಸಿಗೆ ಅವರ್ಣನೀಯ ಆನಂದವನ್ನು ನೀಡುತ್ತವೆ.

**ಮೂಗೂರು (೭,೭೨೭)** : ತಾಲೂಕು ಕೇಂದ್ರ ತಿ.ನರಸೀಪುರದಿಂದ ೧೦ ಕಿ.ಮೀ. ಆಗ್ನೇಯಕ್ಕೆ ನರಸೀಪುರ–ಚಾಮರಾಜನಗರ ರಸ್ತೆಯಲ್ಲಿರುವ ಹೋಬಳಿ ಕೇಂದ್ರ. ಪ್ರಾಚೀನ ಶಾಸನಗಳಲ್ಲಿ 'ಮೋಗೂರು' (ಮೊಗೂರು) ಮೊಗೆಯೂರ, ಮೂಗೂರು ಎಂದೆಲ್ಲ ಉಲ್ಲೇಖಿತಗೊಂಡಿದೆ. ಇಲ್ಲಿಂದ ಈವರೆಗೆ ವರದಿಯಾಗಿರುವ ೨೭ ಶಾಸನಗಳಲ್ಲಿ ಎರಡು ಹತ್ತನೆಯ ಶತಮಾನಕ್ಕೂ, ೧೨ ಹೊಯ್ಸಳರ ಆಡಳಿತಕ್ಕೂ, ಐದು ವಿಜಯನಗರ ಕಾಲಕ್ಕೂ ಹಾಗೂ ಉಳಿದ ಎಂಟು ಮೈಸೂರು ಅರಸರ ಕಾಲಕ್ಕೂ ಸೇರಿವೆ. ಇದು ಗಂಗರ ಕಾಲದಲ್ಲಿ ಪ್ರಮುಖ ಜೈನಕೇಂದ್ರವಾಗಿದ್ದು, ತಿಬ್ಬಾದೇವಿ ಗುಡಿಯ ಪ್ರಾಕಾರದಲ್ಲಿರುವ ಸುಮಾರು ೧೦ನೆಯ ಶತಮಾನಕ್ಕೆ ಸೇರಿದ ಗಂಗ ಶಾಸನವೊಂದರಲ್ಲಿ ಮೊಗೂರಿನ ಸಿವಾಲಯ್ಯನ ಬಸದಿಯ ತೊಯ್ವಬ್ಬೆಯ ಶಿಷ್ಯೆಯಾದ ಅಮ್ಮಿ(ಕ)ಬ್ಬೆಕಂತಿಯು ಗತಿಸಿದ ಅಂಶವನ್ನು ದಾಖಲಿಸಲಾಗಿದೆ. ಅಲ್ಲದೆ ಇಲ್ಲಿಯ ದುಬ್ಬಲಮ್ಮನ ಗುಡಿಯ ದೇವಿಪೀಠದ ಮೇಲಿರುವ ಸುಮಾರು ೧೦ನೆಯ ಶತಮಾನದ ಇನ್ನೊಂದು ಶಾಸನದಿಂದ, ಆ ಶಿಲ್ಪವನ್ನು ಮಾಳಕ್ಕ ಎಂಬುವಳು ಮಾಡಿಸಿದ ಅಂಶ ಸ್ಪಷ್ಟವಾಗುತ್ತದೆ. ಈ ಎರಡು ಶಾಸನಗಳಿಂದ ಮೂಗೂರಿನ ಪ್ರಾಚೀನತೆಯನ್ನು ೧೦ನೆಯ ಶತಮಾನದಷ್ಟು ಹಿಂದಕ್ಕೆ ಗುರುತಿಸಬಹುದಾಗಿದ್ದು, ಆ ವೇಳೆಗಾಗಲೇ ಮೂಗೂರಿನಲ್ಲಿ ಜೈನಧರ್ಮವು ಅಸ್ತಿತ್ವಕ್ಕೆ ಬಂದಿದ್ದು, ಗ್ರಾಮದೇವತೆ ದುಬ್ಬಲಮ್ಮನ ಆರಾಧನೆಯೂ ಚಾಲ್ತಿಯಲ್ಲಿದ್ದ ಅಂಶ ವೇದ್ಯವಾಗುತ್ತದೆ. ಇಲ್ಲಿಯ ಆದಿನಾಥ, ಪಾರ್ಶ್ವನಾಥ, ದೇಶೇಶ್ವರ, ತಿಬ್ಬಾದೇವಿ ಹಾಗೂ ನಾರಾಯಣಸ್ವಾಮಿ ಗುಡಿಗಳಿಗೂ ಹೊಯ್ಸಳರ ಕಾಲದಲ್ಲಿ ದಾನದತ್ತಿ ನೀಡಿರುವ ಅಂಶ ಅವರ ಹಲವಾರು ಶಾಸನಗಳಲ್ಲಿ ವ್ಯಕ್ತವಾಗಿದೆ.

ಊರ ನಡುವೆ ಇರುವ ತಿಬ್ಬಾದೇವಿ (ತ್ರಿಪುರ ಸುಂದರಿ) ಗುಡಿಯ ಪ್ರಾಚೀನತೆಯನ್ನು ಅಲ್ಲಿರುವ ಸುಮಾರು ೧೦ನೆಯ ಶತಮಾನದ ಶಾಸನಾಧಾರದ ಮೇಲೆ ಗಂಗರಷ್ಟು ಹಿಂದಕ್ಕೆ ಗುರುತಿಸಲಾಗುತ್ತದೆ. ಆದರೆ ಅಲ್ಲೇ ಇರುವ ಹೊಯ್ಸಳ ಮುಮ್ಮಡಿ ನರಸಿಂಹನ ಕಾಲಕ್ಕೆ ಸೇರಿದ ೧೨೬೧ರ ಶಾಸನದಲ್ಲಿ ಈ (ತಿಬ್ಬವ್ವೆ) ದೇವಿಯ ಮೊದಲ ಉಲ್ಲೇಖ ಕಂಡುಬರುತ್ತಿದ್ದು, ಸುಂಕಾಧಿಕಾರಿ ನಾಚಣ್ಣನ ಮಗ ಸಂಕಣ್ಣನು ದೇವಿಯ ನಂದಾದೀಪದ ಎಣ್ಣೆಗೆಂದು ಪ್ರತೀ ವರ್ಷ ಒಂದು ಗದ್ಯಾಣ

ಹಾಗೂ ಎರಡು ಪಣವನ್ನು ದಾನ ನೀಡಿದ ಅಂಶ ಗೊತ್ತಾಗುತ್ತದೆ. ಊರ ಮನೆಯೊಂದರ ಬಾಗಿಲ ಬಳಿ ಬಿದ್ದಿರುವ ಸುಮಾರು ೧೩–೧೪ನೆ ಶತಮಾನದ ಶಾಸನಕಂಬದಿಂದ, 'ಮೋಗೂರ' ಮಂಚಗಾವುಂಡನು ತಿಪ್ಪವ್ವೆಕೋಯಿಲಿ (ಗುಡಿ)ಗೆ ಚಂದನವನ್ನು ಲೇಪಿಸಿದ ಅಂಶ ಗೊತ್ತಾಗುತ್ತದೆ. ಇದೇ ದೇವಿಯ ಗರ್ಭಗುಡಿಯ ಬಾಗಿಲಿಗೆ ಹಿತ್ತಾಳೆಚೌಕಟ್ಟಿನ ಸೇವೆಯನ್ನು ಮುಮ್ಮಡಿ ಕೃಷ್ಣರಾಜ ಒಡೆಯರ ಮಗಳು ದೇವರಾಜಮ್ಮಣಿಯವರು ಮಾಡಿಸಿದ್ದನ್ನು ಒಂದು ಶಾಸನ ತಿಳಿಸಿದರೆ, ದೇವರ ಪಲ್ಲಕ್ಕಿ ವಾಹನವನ್ನು ಒಡೆಯರ ಪಾದಸೇವಕಿಯಾದ ಮೂಗೂರ ಅಮೃತಾಸಾನಿಯು ಮಾಡಿಸಿದ ಅಂಶವನ್ನು ಇನ್ನೊಂದು ಶಾಸನ ದಾಖಲಿಸುತ್ತಿದ್ದು, ಆ ವೇಳೆಗೆ ದೇವಿಯು ತ್ರಿಪುರಸುಂದರಮ್ಮ ಎಂದೇ ಖ್ಯಾತಳಾಗಿದ್ದ ಅಂಶ ಶಾಸನದಿಂದ ಸ್ಪಷ್ಟವಾಗುತ್ತದೆ. ಇದೇ ರೀತಿ ನವರಂಗದ ಹಿತ್ತಾಳೆಯ ಬಾಗಿಲ ಚೌಕಟ್ಟನ್ನು ಸಿದ್ಧಲಿಂಗಮ್ಮ, ದೇವಿ ಸನ್ನಿಧಾನದ ೩೨ ಸೇರು ತೂಕದ ಗಂಟೆಯನ್ನು ಭದ್ರಕಾಳಮ್ಮನೂ ಹಾಗೂ ಕುದುರೆ ವಾಹನವನ್ನು ಮದ್ದಲೆ ಲಿಂಗಯ್ಯನ ಮಗಳಾದ ಕೆಂಪಾಸಾನಿಯು ಮಾಡಿಸಿದ ಅಂಶ ಅವುಗಳ ಮೇಲಿರುವ ಶಾಸನಗಳಿಂದ ಸ್ಪಷ್ಟವಾಗುತ್ತದೆ.

ವಿಶಾಲವಾದ ಪ್ರಾಕಾರದ ನಡುವೆ ಇರುವ ತಿಬ್ಬಾದೇವಿ ಗುಡಿಗೆ ಗರ್ಭಗೃಹ ನವರಂಗ ಹಾಗೂ ಮುಖಮಂಟಪಗಳಿವೆ. ಗರ್ಭಗೃಹದಲ್ಲಿರುವ ವಿಷ್ಣುಶಕ್ತಿ ವೈಷ್ಣವಿಯ ಶಿಲ್ಪವು ೧೨೬೧ರ ಶಾಸನೋಕ್ತ ತಿಬ್ಬವ್ವೆಯದಾಗಿದ್ದು, ದೇವಿಯು ಶಂಖ, ಚಕ್ರ ಅಭಯ ವರದ ಹಸ್ತೆಯಾಗಿದ್ದು, ಪೀಠದ ಮೇಲೆ ಶ್ರೀಚಕ್ರವನ್ನು ರೇಖಿಸಲಾಗಿದೆ. ನವರಂಗದ ಇಕ್ಕೆಲದಲ್ಲಿ ಕಿರುದೇವಕೋಷ್ಟಗಳಿದ್ದು, ಬಳಿಯಲ್ಲೇ ಮಾತೃಕಾಶಿಲ್ಪವೊಂದಿದ್ದು, ಉಳಿದವು ಕಾಣೆಯಾಗಿವೆ. ಮುಖಮಂಟಪ ಹಾಗೂ ನವರಂಗದ ಬಾಗಿಲವಾಡಗಳ ಮೇಲೆ ಪಾಳೇಗಾರರ ಶಿಲ್ಪಗಳಿದ್ದು, ಈ ದೇವಾಲಯಕ್ಕಿರುವ ವಿಶಾಲವಾದ ಪ್ರಾಕಾರವು ವಿಜಯನಗರ ಕಾಲದ ಸೇರ್ಪಡೆಯಾಗಿದ್ದು, ಮಹಾದ್ವಾರಕ್ಕೆ ರಾಯಗೋಪುರವಿದೆ. ಈಕೆ ಮುಗೂರಿನ ಗ್ರಾಮದೇವತೆಯಾಗಿದ್ದು, ಎಲ್ಲರಿಂದಲೂ ಪೂಜಿಸಲ್ಪಡುತ್ತಿದ್ದು, ಪ್ರಾಕಾರವು ೫೦ಕ್ಕೂ ಹೆಚ್ಚು ದೇವತೆಗಳ ಗಾರೆಶಿಲ್ಪಗಳನ್ನು ಹೊಂದಿದ್ದು, ಅವುಗಳನ್ನು ಹೆಸರಿಸಲಾಗಿದೆ. ಈ ದೇವಾಲಯವು ೧೯ನೆಯ ಶತಮಾನದಲ್ಲಿ ತ್ರಿಪುರ ಸುಂದರಮ್ಮಣ್ಣಿಯವರ ಮೇಲ್ವಿಚಾರಣೆಯಲ್ಲಿ ದುರಸ್ತಿ ವಿಸ್ತರಣೆಗಳನ್ನು ಕಂಡಿದ್ದರಿಂದ ತ್ರಿಪುರಸುಂದರಮ್ಮಣಿ ಗುಡಿ ಎಂಬ ಹೆಸರು ರೂಢಿಗೆ ಬಂದಂತೆ ತೋರುತ್ತದೆ. ಈ ದೇವಾಲಯಕ್ಕೆ ಹೊಂದಿಕೊಂಡಂತೆ ಇರುವ ಕಲ್ಯಾಣಿಯಲ್ಲಿ ಪುಷ್ಯಮಾಸ (ಜನವರಿ)ದಲ್ಲಿ ಜರುಗುವ ಏಳು ದಿನಗಳ ವಾರ್ಷಿಕ ಜಾತ್ರೆ ಸಂದರ್ಭದಲ್ಲಿ ದೇವಿಗೆ ತೆಪ್ಪೋತ್ಸವವಾಗುತ್ತದೆ. ದೇವಿಯ ಜಾತ್ರೆ ಸಂದರ್ಭದಲ್ಲಿ ಸುಮಾರು ೧೦,೦೦೦ ಜನ ಸೇರುತ್ತಾರೆ. ಹಿಂದೆ ಮೂಗೂರನ್ನು ಆಳುತ್ತಿದ್ದ ಸ್ಥಳೀಯ ಪ್ರಭುಗಳ ಅರಮನೆ ಈ ದೇವಾಲಯದ ಬದಿಯಲ್ಲೇ ಇತ್ತೆಂದು ಹೇಳಲಾಗುತ್ತದೆ. ದೇವಾಲಯದ ಮುಂಭಾಗದಲ್ಲಿ ದೇವಿಯ ಜಾತ್ರೆಯಲ್ಲಿ ಬಳಸಲ್ಪಡುವ ಕಲಾತ್ಮಕವಾದ ರಥವನ್ನು ನೋಡಬಹುದಾಗಿದೆ.

ಊರ ಪ್ರವೇಶದಲ್ಲೇ ಎದುರಾಗುವ ದೇಶೇಶ್ವರ ದೇವಾಲಯವು ಚೋಳ ಹೊಯ್ಸಳರ ಕಾಲದ (ಸುಮಾರು ೧೧–೧೨ನೆಯ ಶತಮಾನ) ರಚನೆಯಾಗಿದ್ದು,



ವಿಜಯನಗರ ಕಾಲದ ಗೋಪುರವನ್ನುಳ್ಳ ಮಹಾದ್ವಾರ ಹಾಗೂ ವಿಶಾಲವಾದ ಪ್ರಾಕಾರವನ್ನು ಹೊಂದಿದೆ. ಮೂಲ ಗರ್ಭಗೃಹವು ಚೋಳರ ಕಾಲದ ರಚನೆಯಾಗಿದ್ದು, ಮುಮ್ಮಡಿ ನರಸಿಂಹನ ಕಾಲದಲ್ಲಿ ಈ ಗುಡಿಗೆ ಸೇರಿದಂತೆ ಶಂಕರೇಶ್ವರ ದೇವಾಲಯವನ್ನು ನಿರ್ಮಿಸಲಾಗಿದೆ. ಇದನ್ನು ೧೨೭೭ರಲ್ಲಿ ನಿರ್ಮಿಸಿರುವ ಸಾಧ್ಯತೆಗಳಿದ್ದು, ಅದೇ ಸಂದರ್ಭದಲ್ಲಿ ಮೂಗೂರಲ್ಲಿ ಸಂತೆ ಆರಂಭಿಸಿ, ಪಟ್ಟಣ ರಚನೆಗೆ ಮುಂದಾಗಿರುವ ಅಂಶ ಶಾಸನವೊಂದರಿಂದ ಸ್ಪಷ್ಟವಾಗುತ್ತದೆ. ಈ ಗುಡಿಯ ನವರಂಗದಲ್ಲಿ ಸೂರ್ಯ, ವಿಷ್ಣು, ಸಪ್ತಮಾತೃಕಾ ಮುಂತಾದ ಶಿಲ್ಪಗಳಿವೆ. ಕೃಷ್ಣದೇವರಾಯ ಹಾಗೂ ಅಚ್ಯುತದೇವರಾಯರ ಕಾಲದಲ್ಲಿ ಇದು ಮತ್ತಷ್ಟು ವಿಸ್ತಾರಗೊಂಡಿದೆ. ನಂತರದಲ್ಲಿ ಹದಿನಾಡು ಹಾಗೂ ಮೈಸೂರು ಅರಸರು ಇದರ ವಿಸ್ತರಣೆಯಲ್ಲಿ ಕೈಜೋಡಿಸಿದ್ದಾರೆ. ಇದರ ಕಟ್ಟಿಗೆಯ ಬಾಗಿಲು ಆಕರ್ಷಕವಾಗಿದೆ. ಈ ಗುಡಿಯ ಹಿಂಬದಿಯಲ್ಲಿ ಪಂಚಲಿಂಗಗಳಿದ್ದು, ಆವರಣದಲ್ಲಿ ಅಮ್ಮನವರ ಗುಡಿ, ಆಂಜನೇಯ, ಚಂಡಿಕೇಶ್ವರ ಮುಂತಾದ ಕಿರುಗುಡಿಗಳಿವೆ. ಇಲ್ಲಿರುವ ಕಾಳಭೈರವನ ಶಿಲ್ಪ ಆಕರ್ಷಕವಾಗಿದೆ. ದೇಶೇಶ್ವರ ಗುಡಿ ಬಳಿ ಇರುವ ಕಬ್ಬು ಅರೆಯುವ ಕಲ್ಲು ವಿಶಿಷ್ಟವಾಗಿದೆ. ಇಂದು ಈ ದೇವಾಲಯದ ಕಲ್ಯಾಣಿಯ ಮೆಟ್ಟಿಲಾಗಿರುವ, ಇಮ್ಮಡಿ ಬಲ್ಲಾಳನ ಆಳ್ವಿಕೆಗೆ ಸೇರಿದ ೧೧೭೭ರ ಶಾಸನದಿಂದ, ಊರ ಪ್ರಭುಗೌಂಡರು ತಿರುವರಂಗಮೌಳಿತಂಬಿಗೆ ಎರಡು ವೇಲಿ ಭೂಮಿಯನ್ನು ದಾನಬಿಟ್ಟ ಅಂಶ ವೇದ್ಯವಾಗುತ್ತದೆ. ಅಲ್ಲೇ ಇರುವ ಇನ್ನೊಂದು ಶಾಸನದಿಂದ ಮಾಲಂಗಿಯ ಎಂಬೆರುಮಾನ್ ವಂಡುವರೈ ಪೆರುಮಾಳ ದೇವರ ಸೇವೆಗೆಂದು ೧೨ ಪಟ್ಟಣದ ವರ್ತಕ ಸಂಘದವರು ನೀಡಿದ ನಗದು ದಾನದಿಂದ ಬರುವ ಬಡ್ಡಿಯನ್ನು ದಾನಬಿಟ್ಟ ಅಂಶ ಗೊತ್ತಾಗುತ್ತದೆ. ಈ ದೇವಾಲಯದ ಗರುಡಗಂಬದ ಬಳಿ ಇರುವ ೧೨೭೭ರ ಶಾಸನದಿಂದ ಮುಮ್ಮಡಿ ನರಸಿಂಹನ ಆಡಳಿತಾವಧಿಯಲ್ಲಿ ಮೋಗೂರ ಅಧಿಕಾರಿ, ಪ್ರಭು, ಸೆಟ್ಟಿಗಾವುಂಡಗಳು ಊರಲ್ಲಿ ಸಂತೆಯನ್ನು ಆರಂಭಿಸಿ ಪಟ್ಟಣವನ್ನು ನೂತನವಾಗಿ ನಿರ್ಮಿಸಲು ಕಟ್ಟುಪಾಡುಗಳನ್ನು ವಿಧಿಸಿದ ಅಂಶ ಗೊತ್ತಾಗುತ್ತದೆ. ಅದರಂತೆ ಈ ಪಟ್ಟಣದಲ್ಲಿ ಮನೆ ಮಾಡುವವರಿಗೆ ಮೊದಲ ವರ್ಷ ಮನೆತೆರಿಗೆ ಮನ್ನಾ ಹಾಗೂ ಪಟ್ಟಣಕ್ಕೆ ಹೊರಗಿನಿಂದ ಹೊಸದಾಗಿ ಬಂದು ನೆಲೆಸಿದ ಒಕ್ಕಲಿಗೆ ಮೊದಲ ಎರಡು ವರ್ಷ ಮನೆದೆರೆ ರಿಯಾಯಿತಿ ನೀಡಿದ ಅಂಶವನ್ನೂ ಇದು ದಾಖಲಿಸುತ್ತದೆ. ದೇಶೇಶ್ವರ ಗುಡಿಯ ತಳಪಾಯದ ಮೇಲಿರುವ ೧೨೭೯ರ ಶಾಸನದಿಂದ ನಾಡನ್ನಾಳುವ ದಂಡನಾಯಕರು, ಗೌಂಡರು ಹಾಗೂ ಪ್ರಜೆಗಳು ಒಂದಾಗಿ ಊರಲ್ಲಿದ್ದ ದೇಶೇಶ್ವರ ದೇವರಿಗೆ ದಾನ ನೀಡಿದ ಅಂಶ ವೇದ್ಯವಾಗುತ್ತದೆ. ಮುಮ್ಮಡಿ ಬಲ್ಲಾಳನ ಕಾಲದ (೧೩೩೬) ಶಾಸನ ಹಾಳಾಗಿರುವುದರಿಂದ ಹೆಚ್ಚಿನ ವಿವರ ಲಭಿಸುವುದಿಲ್ಲ. ಈ ದೇವಾಲಯದ ಭಿತ್ತಿಯ ಮೇಲೆ ೩೫ ಅಂಗುಲ ಉದ್ದದ ಅಳತೆಗೋಲಿನ ಎರಡು ತುದಿಗಳನ್ನು ೩೫ ಅಂಗುಲ ಅಂತರದಲ್ಲಿ ರೇಖಿಸಿರುವ ಅಂಶ ಅಲ್ಲೇ ಇರುವ ಶಾಸನ ಹಾಗೂ ರೇಖಾಗುರುತುಗಳಿಂದ ಸ್ಪಷ್ಟವಾಗುತ್ತದೆ. ಇದೇ ಗುಡಿ ಆವರಣದಲ್ಲಿರುವ, ಅಚ್ಯುತದೇವರಾಯನ (೧೫೩೪, ೧೫೪೦) ಕಾಲದ ಎರಡು ಶಾಸನಗಳಿಂದ ದೇಶೇಶ್ವರ ದೇವರ ಪೂಜಾವಿಧಿಗೆಂದು ಭೂದಾನ ನೀಡಿದ

ಅಂಶ ವೇದ್ಯವಾಗುತ್ತದೆ. ದೇಶೇಶ್ವರ ಗುಡಿ ಮುಂದಿರುವ ದೀಪಮಾಲೆ ಕಂಬವನ್ನು, ಉಡುಸಿಯ ವ್ಯಾಧಿಯಿಂದ ಬಳಲುತ್ತಿದ್ದ ಮೂಗೂರ ಹಂಪೆಯಣ್ಣನು ಚೇತರಿಸಿಕೊಳ್ಳಲೆಂದು ಆಶಿಸಿ, ಅವನ ತಮ್ಮನಾದ ಶಿವಪ್ಪನು ದೇಶಿನಾಥ ದೇವರ ಗುಡಿ ಮುಂದೆ ನಿಲ್ಲಿಸಿದ ಅಂಶ ಆ ಕಂಬದ ಮೇಲಿರುವ ಸುಮಾರು ೧೬ನೆಯ ಶತಮಾನದ ಶಾಸನದಿಂದ ವೇದ್ಯವಾಗುತ್ತಿದ್ದು, ಕಂಬದ ಮೇಲೆ ಮತ್ಸ್ಯೇಂದ್ರನಾಥ ಶಿಲ್ಪವಿದೆ. ಅಲ್ಲೇ ಇರುವ ೧೬೨೮ರ ಶಾಸನದಿಂದ ದೊಡ್ಡಯ್ಯನು ಕೇತಹಟ್ಟಿ ಮಠಕ್ಕೆ ಬತ್ತದ ಗದ್ದೆಯನ್ನು ದಾನಬಿಟ್ಟ ಅಂಶ ವೇದ್ಯವಾಗುತ್ತದೆ.

ಮೂಗೂರಿನಲ್ಲಿ ಹಿಂದೆ ಎರಡು ಜೈನಬಸದಿಗಳಿದ್ದ ಅಂಶ ಸುಮಾರು ೧೩ನೆಯ ಶತಮಾನದ ಶಾಸನಗಳಿಂದ ವೇದ್ಯವಾಗುತ್ತದೆ. ಪಾರ್ಶ್ವನಾಥ ಬಸದಿಯಲ್ಲಿದ್ದ ಶಾಸನದಿಂದ ಇಂಗಳೇಶ್ವರ ಸಂಘಕ್ಕೆ ಸೇರಿದ ಭಾನುಕೀರ್ತಿಪಂಡಿತರು ಕೊಡೆಯಾಲ ಬಸದಿಯನ್ನು ಜೀರ್ಣೋದ್ಧಾರ ಮಾಡಿಸಿದಾಗ ಊರ ಗೌಡರು ದಾನ ಬಿಟ್ಟ ಅಂಶ ಗೊತ್ತಾದರೆ, ನೆರೆಯ ಆದಿನಾಥ ಬಸದಿಯಲ್ಲಿರುವ ಇನ್ನೊಂದು ಶಾಸನ, ಮೂಲಸಂಘಕ್ಕೆ ಸೇರಿದ ಭರತಪಂಡಿತರಿಗೆ ಜಕ್ಕಿಯಬ್ಬೆಯ ಮಗಳು ದಾನ ಬಿಟ್ಟ ಅಂಶವನ್ನು ದಾಖಲಿಸಿರುವಂತೆ ತೋರುತ್ತದೆ. ಈ ಶಾಸನಗಳಿರುವ ಎಡೆಯಲ್ಲಿ ಹಿಂದೆ ಇದ್ದ ಎರಡು ಬಸದಿಗಳಲ್ಲೊಂದನ್ನು (ಆದಿನಾಥ) ಸಂಪೂರ್ಣ ನವೀಕರಿಸಲಾಗಿದ್ದು, ಅಲ್ಲಿ ಆದಿನಾಥನೂ ಸೇರಿದಂತೆ ನಾಲ್ಕಾರು ಜಿನಬಿಂಬಗಳಿವೆ. ಆದಿನಾಥನನ್ನು ಸ್ಥಳೀಯ ಒಕ್ಕಲಿಗರು ಭೈರವನೆಂದು ನಂಬಿದ್ದು, ತಿಬ್ಬಾದೇವಿಯನ್ನು ಅವನ ತಂಗಿಯೆಂದು ಹೇಳುವ ವಾಡಿಕೆ ಈ ಭಾಗದಲ್ಲಿದೆ. ಉಪಗ್ರಾಮ ಹೊಸಹಳ್ಳಿಯಲ್ಲಿ ಇವಳ ಆರು ಸೋದರಿಯರ ಶಿಲ್ಪಗಳಿವೆ. ಅಲ್ಲೇ ಇರುವ ಇನ್ನೊಂದು ಬಸದಿಯು ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಕೇವಲ ಸ್ತಂಭ ಹಾಗೂ ಛಾವಣಿಗಳಷ್ಟೇ ಉಳಿದಿದ್ದು, ಭಿತ್ತಿಭಾಗ ಸಂಪೂರ್ಣ ನಾಶವಾಗಿದೆ. ಆದರೂ ಅಲ್ಲಲ್ಲಿ ಇಟ್ಟಿಗೆಯ ಗೋಡೆಯ ಅವಶೇಷಗಳನ್ನು ನೋಡಬಹುದಾಗಿದೆ.

ಊರ ಕೆರೆ ದಂಡೆ ಬಳಿಯಿರುವ ನಾರಾಯಣಸ್ವಾಮಿ ಗುಡಿಯು ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಮುಮ್ಮಡಿ ನರಸಿಂಹನ ಕಾಲದ್ದಾಗಿದೆ. ಅಲ್ಲೇ ಇರುವ ೧೨೭೯ರ ಶಾಸನದಿಂದ, ಮೂಗೂರ ಗೌಡ ಪ್ರಜೆಗಳು, ವಿಷ್ಣುಗೃಹದ ಅಳಗ್ಯೆ ಪೆರುಮಾಳ್ ದೇವರಿಗೆ ದಾನ ನೀಡಿದ ಅಂಶ ಗೊತ್ತಾದರೆ, ಇನ್ನೊಂದು ಶಾಸನ, ದೇವರ ನಂದಾದೀಪಕ್ಕೆಂದು ಕೆಲವು ಗದ್ಯಾಣವನ್ನು ಭಕ್ತನೊಬ್ಬ ಸಲ್ಲಿಸಿದ್ದ ಅಂಶವನ್ನು ನಿವೇದಿಸುತ್ತಿದ್ದು ಗುಡಿಯಲ್ಲಿರುವ ನಾರಾಯಣ ಶಿಲ್ಪವು ಸುಂದರವಾಗಿದೆ. ಮೂಗೂರ ಹಳ್ಳದ ಬಳಿ ಬಿದ್ದಿರುವ ೧೩೬೩ರ ಶಾಸನ ವೀರಬುಕ್ಕಣನ ಕಾಲದಲ್ಲಿ ಮಹಾಪ್ರಧಾನ ಬಸವದಂಡನಾಯ್ಕನ ಅಧಿಕಾರಿ ರಾಘವದೇವರಸನು ದಾನ ನೀಡಿದ ಅಂಶವನ್ನು ದಾಖಲಿಸಿದೆ.

ಸಂತೆಮರಳ್ಳಿ ರಸ್ತೆ ಬದಿಯ ಹಿತ್ತಲೊಂದರಲ್ಲಿರುವ ಸುಮಾರು ೧೪ನೆಯ ಶತಮಾನದ ವೀರಗಲ್ಲು ಶಾಸನ, ಹಂದಿಗನಹಳ್ಳಿ ಘಟ್ಟದ ಬಳಿ ೪೦ ಕಳ್ಳರು ದಾಂಧಲೆ



ಮಾಡಿದಾಗ, ಮೂಗೂರ ಒಡೆಯ ಮಾದಣ್ಣನನ್ನು ರಕ್ಷಿಸಿ, ಇಬ್ಬರು ಕಳ್ಳರನ್ನು ಕೊಂದು ಮಡಿದ ಮಾದಪ್ಪನ ಹೆಸರಲ್ಲಿ ವೀರಗಲ್ಲನ್ನು ನಿಲ್ಲಿಸಿ, ದಾನ ನೀಡಿದ ಅಂಶವನ್ನು ತಿಳಿಸಿದರೆ, ಪ್ರವಾಸಿ ಮಂದಿರದ ಬಳಿ ನಿಂತಿರುವ ಇನ್ನೊಂದು ವೀರಗಲ್ಲು ಶಾಸನ. ಅರೆಯೂರ ಹುಯಿಲಿನಲ್ಲಿ ಹೋರಾಡುತ್ತಾ ಮಡಿದ ಸಣ್ಣಬೋವು ಹಾಗೂ ಮುದಿಯ ಬೋವರುಗಳಿಗಾಗಿ ಮಾದಣ್ಣನು ವೀರಗಲ್ಲು ನಿಲ್ಲಿಸಿದ ಅಂಶವನ್ನು ದಾಖಲಿಸಿದೆ. ಈ ವೀರಗಲ್ಲಿನ ಶಿಲ್ಪಗಳು ಮೂರು ಹಂತದಲ್ಲಿದ್ದು, ಶಾಸನಸ್ಥ ಘಟನೆಯನ್ನು ಮನೋಜ್ಞವಾಗಿ ಮನವರಿಕೆ ಮಾಡಿಕೊಡುವಲ್ಲಿ ಯಶಸ್ವಿಯಾಗಿವೆ. ಕುರುಬರಹಳ್ಳಿ–ಮೂಗೂರು ರಸ್ತೆಯಬದಿಯಲ್ಲಿ ಹುಲಿಬೇಟೆ ವೀರಗಲ್ಲೊಂದನ್ನು ನೋಡಬಹುದಾಗಿದೆ. ಉಳಿದಂತೆ ಊರಲ್ಲಿ ರಾಕ್ಷಸಮ್ಮ, ವೀರಭದ್ರ, ದುಬ್ಬಲಮ್ಮ ಮುಂತಾದ ಗುಡಿಗಳಿವೆ.

**ವಿಜಯಪುರ (೫೩೦) :** ತಾಲೂಕು ಕೇಂದ್ರ ನರಸೀಪುರದಿಂದ ೧೯ ಕಿ.ಮೀ. ಹಾಗೂ ತಲಕಾಡಿನಿಂದ ನಾಲ್ಕು ಕಿ.ಮೀ. ಪೂರ್ವಕ್ಕಾದಂತೆ ಕಾವೇರಿಯ ಎಡದಂಡೆಯ ಮೇಲಿರುವ ಇದು ಗಂಗರ ಕಾಲದ ಅರ್ಕೇಶ್ವರ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. ಪ್ರಾಚೀನ (ಗಂಗ, ಚೋಳ, ವಿಜಯನಗರ) ಶಾಸನಗಳಲ್ಲಿ 'ಕಿರುಪೆರ್ನ್ನಗರ', ಕಿರುವೆನ್ನಾಗರ, ಕಿರುನಾಗರ, ಎಂದೇ ಉಲ್ಲೇಖಿತಗೊಂಡಿರುವ ಇಲ್ಲಿಂದ ಈವರೆಗೆ ಏಳು ಶಾಸನಗಳು (ಕ್ರಿ.ಶ. ೯–೧೫ನೇ ಶತಮಾನದ) ವರದಿಯಾಗಿವೆ. ಅವುಗಳಲ್ಲಿ ಅರ್ಕೇಶ್ವರ ಗುಡಿ ಹಿಂಭಾಗದಲ್ಲಿರುವ ಸುಮಾರು ಒಂಭತ್ತನೆಯ ಶತಮಾನದ ಒಂದು ಶಾಸನ, ಇಮ್ಮಡಿ ಶಿವಮಾರನ ಆಳ್ವಿಕೆಯಲ್ಲಿ ಮಣಲೆಯರಸನು ಕಿಳಲೆ ನಾಡನ್ನಾಳುತ್ತಿದ್ದಾಗ, ಕಿರುಪೆಳ್ಳಿಯ ಹನ್ನಿರ್ವರಿಗೆ ಪತ್ತೊನ್ದಿಯನ್ನು ದಾನಬಿಟ್ಟ ಅಂಶವನ್ನು ತಿಳಿಸಿದರೆ, ಹಾಳುಕೋಟೆ ಬಳಿಯಿರುವ, ಗಂಗ ಎರೆಯಪ್ಪನ ಕಾಲದ ಇನ್ನೊಂದು ಶಾಸನದಲ್ಲಿ ಮಣಲೆಯರಸನ ಅನುಮತಿಯೊಂದಿಗೆ ಕಿರುವೆನ್ನಗರದ ಹನ್ನೀರ್ವರಿಗೆ ಮಳವೂರಲ್ಲಿ ಐದೊನ್ದಿ(ಕೃಷಿ ಉತ್ಪನ್ನದ ೧/೫ ಭಾಗ)ಯನ್ನು ಬಿಟ್ಟು ಧರ್ಮತೂಬನ್ನು ಇಕ್ಕಿಸಿದ ಉಲ್ಲೇಖವಿದೆ. ಅಗಸ್ತ್ಯೇಶ್ವರ ಗುಡಿ ಬಳಿಯ ಸೂರ್ಯದೇವರ ಗುಡಿಯ ಮಾಳಿಗೆಯಲ್ಲಿರುವ ೧೦೧೭–೧೮ರ ಶಾಸನ, ಚೋಳ ಒಂದನೆಯ ರಾಜೇಂದ್ರನ ಆಳ್ವಿಕೆಗೆ ಸೇರಿದ್ದು, ಕಿರುವೆನ್ನಾಗರದ ಗೌಡರು ಹಾಗೂ ಬೆದಿಯಣ್ಣರ ಉಲ್ಲೇಖವಿದೆಯಾದರೂ ಹೆಚ್ಚಿನ ವಿವರ ಹಾಳಾಗಿದೆ. ಅಲ್ಲೇ ಇರುವ ಇನ್ನೊಂದು ಶಾಸನ ಇಮ್ಮಡಿ ಬಲ್ಲಾಳನ ಕಾಲಕ್ಕೆ ಸೇರಿದ್ದು, ಆರಂಭದ ಭಾಗವಷ್ಟೇ ಉಳಿದಿದೆ. ಇಲ್ಲಿಯ ೧೪೨೬ರ ಶಾಸನ ಇಮ್ಮಡಿ ದೇವರಾಯನ ಕಾಲದಲ್ಲಿ ಅಧಿಕಾರಿ ಸೋವರಸನು ಕಿರುನಾಗರದ ಅರ್ಕನಾಥದೇವರ ನಂದಾದೀಪಕ್ಕೆಂದು ಒಂದು ಮಗ್ಗದಿಂದ ಬರುವ ಹಾಗ ತೆರಿಗೆಯನ್ನು ದಾನ ಬಿಟ್ಟ ಅಂಶವನ್ನು ದಾಖಲಿಸಿದೆ. ಅಲ್ಲೇ ಇರುವ ಸುಮಾರು ೧೫ನೆಯ ಶತಮಾನಕ್ಕೆ ಸೇರಿದ ಇನ್ನೊಂದು ಶಾಸನ, ಲಖ್ಖಣ ಒಡೆಯರ ಸುಂಕಾಧಿಕಾರಿ ನಂಜಿನಾಥನು ಅಂಕನಾಥ ದೇವರ ನಂದಾದೀಪಕ್ಕೆಂದು ಕೊಪ್ಪಹಾಳದ ಮಗ್ಗದ ಸುಂಕವನ್ನು ದಾನಬಿಟ್ಟಿದ್ದನ್ನು ಉಲ್ಲೇಖಿಸುತ್ತದೆ. ಈ ಶಾಸನಗಳಲ್ಲಿ ಯಾವುದರಲ್ಲೂ 'ವಿಜಯಪುರ' ಎಂಬ ಉಲ್ಲೇಖವಿಲ್ಲದಿರುವುದು ಗಮನಾರ್ಹ. ತಲಕಾಡಿಗೆ ಪೆರ್ನಗರ ಎಂಬ ಹೆಸರಿದ್ದ ಹಿನ್ನೆಲೆಯಲ್ಲಿ ಇದಕ್ಕೆ ಕಿರುವೆನ್ನಗರ ಎಂಬ ಹೆಸರು

ಬಂದಿದ್ದು, ಕಿರುನ್ನಾಗರ ಎಂದರೆ ಚಿಕ್ಕಪಟ್ಟಣ ಎಂದಾಗುತ್ತಿದ್ದು, 'ವಿಜಯಪುರ' ಎಂಬ ಹೆಸರು ಯಾವಾಗ ಬಂತೆಂಬುದು ಕುತೂಹಲವಾಗಿಯೇ ಉಳಿದಿದೆ. ತಲಕಾಡು–ವಿಜಯಪುರ ರಸ್ತೆಯಲ್ಲಿ ಬಲಕ್ಕಾದಂತೆ ಇರುವ ಅರ್ಕೇಶ್ವರ ದೇವಾಲಯವು ಗಂಗರ ಕಾಲದ ರಚನೆಯಾಗಿದ್ದು, ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ತಲಕಾಡಿನ ಪಂಚಲಿಂಗಗಳಲ್ಲಿ ಇದೂ ಒಂದಾಗಿದ್ದು, ಮಹತ್ವ ಪಡೆದಿದೆ. ಈ ದೇವಾಲಯದ ಮುಂದಿರುವ ನಾಲ್ಕು ಕಿರುಗುಡಿಗಳಲ್ಲಿ ಶಿವಲಿಂಗಗಳಿವೆ. ಪ್ರಧಾನ ಗರ್ಭಗೃಹಕ್ಕೆ ಎದುರಾಗಿರುವ ಕಿರುಗುಡಿಯಲ್ಲಿ ಮುಕ್ಕಾಲು ಮೀ. ಎತ್ತರದ ಗಂಗರ ಕಾಲದ ಸೂರ್ಯಶಿಲ್ಪವಿದೆ. ಕೋಟೆ ಭಾಗದಲ್ಲಿ ನಾಲ್ಕಾರು ವೀರಗಲ್ಲುಗಳಿವೆ. ಊರಿಗೆ ಅನತಿ ದೂರದ ಕಾಳಿಹುಂಡಿ ಗ್ರಾಮದಲ್ಲಿ ಮೈಸೂರು ಅರಸರ ಕಾಲಕ್ಕೆ ಸೇರಿದ ವಿಶಾಲವಾದ ಬೀರದೇವರ ಗುಡಿ ಇದೆ.

**ಸೋಮನಾಥಪುರ (೪,೫೫೪)** ತಾಲೂಕು ಕೇಂದ್ರ ತಿ.ನರಸೀಪುರದಿಂದ ೧೦ ಕಿ.ಮೀ. ಉತ್ತರಕ್ಕಾದಂತೆ ಬನ್ನೂರು ರಸ್ತೆಯಲ್ಲಿರುವ ಚಾರಿತ್ರಿಕ ಮಹತ್ವದ ಪ್ರವಾಸಿತಾಣ ಇದಾಗಿದ್ದು, ಅರ್ಧ ಕಿ.ಮೀ. ಅಂತರದಲ್ಲಿ ಕಾವೇರಿ ನದಿಯು ಹರಿಯುತ್ತದೆ. ಹೊಯ್ಸಳ ಶಾಸನಗಳಲ್ಲಿ 'ಸರ್ವನಮಸ್ಯದಗ್ರಹಾರ ವಿದ್ಯಾನಿಧಿ ಪ್ರಸನ್ನ ಸೋಮನಾಥಪುರ' ಎಂದೇ ಉಲ್ಲೇಖಿತಗೊಂಡಿರುವ ಈ ಅಗ್ರಹಾರವನ್ನು ಹೊಯ್ಸಳ ಮುಮ್ಮಡಿ ನರಸಿಂಹನ ಮಂತ್ರಿಯಾಗಿದ್ದ ಸೋಮನಾಥ ದಂಡನಾಯಕನು ರೂಪಿಸಿ, ಕೇಶವ, ವೇಣುಗೋಪಾಲ ಜನಾರ್ದನರಿರುವ ತ್ರಿಕೂಟಾಚಲ; ಪಂಚಲಿಂಗೇಶ್ವರರಿಗಾಗಿ ಪಂಚಕೂಟ (ಈಗ ನಾಲ್ಕಷ್ಟೇ ಇದೆ) ಸೋಮೇಶ್ವರ ಗುಡಿ, ಹೊಳೆಗೆ ಹೋಗುವ ಮಾರ್ಗದಲ್ಲಿರುವ ನರಸಿಂಹದೇವರು, ಲಕ್ಷ್ಮೀನರಸಿಂಹ, ಯೋಗನಾರಾಯಣಗುಡಿಗಳನ್ನು ನಿರ್ಮಿಸಿ ಅವುಗಳ ಪೂಜಾವಿಧಿಗೆಂದು ಅಗ್ರಹಾರ ಸೋಮನಾಥಪುರಕ್ಕೆ ವಿವಿಧ ಗ್ರಾಮಗಳ ಆದಾಯವನ್ನು ಉಂಬಳಿ ನೀಡಿದ್ದ ಅಂಶ ಸೋಮನಾಥಪುರದಲ್ಲಿ ಲಭ್ಯವಿರುವ ಹೊಯ್ಸಳರ ಏಳು ಶಾಸನಗಳಿಂದ ಗೊತ್ತಾಗುತ್ತದೆ. ಇದನ್ನು ಹರಿಹರದ (ದಾವಣಗೆರೆ ಜಿಲ್ಲೆ) ಶಾಸನವೂ ತಿಳಿಸುತ್ತದೆ. ವಿಜಯನಗರ ಕಾಲದ ಎರಡು ಶಾಸನಗಳಿಂದ ಅಗ್ರಹಾರವಾಗಿ ಸೋಮನಾಥಪುರವು ಮುಂದುವರಿದ ಅಂಶ ವೇದ್ಯವಾಗುತ್ತದೆ. ಆದರೆ ಮೊದಲ ಮೂರು ದೇವಾಲಯಗಳಷ್ಟೇ ಇಂದು ಉಳಿದಿದ್ದು, ಹೊಳೆಯ ತಡಿಯ ಯೋಗನಾರಾಯಣ ಹಾಗೂ ಲಕ್ಷ್ಮೀ ನರಸಿಂಹಗುಡಿಗಳು ಕಂಡುಬರುತ್ತಿಲ್ಲ. ಪಂಚಲಿಂಗೇಶ್ವರ ಗುಡಿಯ ಮುಂಭಾಗದಲ್ಲಿರುವ ಮುಮ್ಮಡಿ ನರಸಿಂಹನ ಕಾಲಕ್ಕೆ ಸೇರಿದ ೧೨೬೮–೬೯ರ ಶಾಸನದಿಂದ ಆ ವೇಳೆಗಾಗಲೇ ಈ ಅಗ್ರಹಾರವು ರೂಪುಗೊಂಡಿದ್ದು, ಅಗ್ರಹಾರದ ಈಶಾನ್ಯ ಭಾಗದಲ್ಲಿ ಪಂಚಲಿಂಗೇಶ್ವರ ದೇವಾಲಯ ಸಂಕೀರ್ಣ, ಅದರ ಬಳಿಯ ಸೋವಲೇಶ್ವರ ಹಾಗೂ ಕಾವೇರಿತಡಿಯ ನರಸಿಂಹ ದೇವಾಲಯಗಳು ನಿರ್ಮಾಣಗೊಂಡಿದ್ದು, ಅವುಗಳ ಪೂಜಾವಿದಿಗೆಂದು ಬಂಡೂರು, ಬಣ್ಣಸಮುದ್ರ, ಬಾಗೆವೂರು, ಮಂಡಗೆ, ಮಾಗನೂರು, ಹಿರಿವೂರು, ಚೋಳೇನಹಳ್ಳಿ ಹಾಗೂ ಕಿರುಹೊಸೂರುಗಳನ್ನು ಉಂಬಳಿ ನೀಡಿದ್ದ ಅಂಶ ವೇದ್ಯವಾಗುತ್ತದೆ. ಇಂದು ಸೋಮನಾಥಪುರದ ಕೇಂದ್ರಬಿಂದುವಾಗಿರುವ ಕೇಶವ



ದೇವಾಲಯದ ಮಹಾದ್ವಾರದ ಬಳಿ ಇರುವ ಮುಮ್ಮಡಿ ನರಸಿಂಹನ ಕಾಲಕ್ಕೆ ಸೇರಿದ ಒಂದೇ ಶಾಸನದಲ್ಲಿ ಎರಡು (೧೨೬೯ ಹಾಗೂ ೧೨೭೬) ತೇದಿಗಳಿದ್ದು, ಆ ಅವಧಿಯಲ್ಲಿ ಕೇಶವ ದೇವಾಲಯ ಸಂಕೀರ್ಣದ ನಿರ್ಮಾಣ ಕಾರ್ಯವು ಪೂರ್ಣಗೊಂಡು ಪ್ರಸನ್ನ ಕೇಶವ, ಗಂಡಪೆಂಡ್ವಾರ ಗೋಪಾಲಕೃಷ್ಣ ಹಾಗೂ ವರದಜನಾರ್ದನ ದೇವರುಗಳನ್ನು ಪ್ರತಿಷ್ಠಾಪಿಸಿ, ಪ್ರಾಕಾರದಲ್ಲಿರುವ ಆರು ಬ್ರಹ್ಮಾದಿ ದೇವರು, ೧೨ ಕೇಶವಾದಿ ದೇವರು, ೧೨ ಹಂಸ ನಾರಾಯಣಾದಿ ದೇವರು, ೧೦ ಮತ್ಸ್ಯಾದಿ ದೇವರು (ದಶಾವತಾರ), ೧೨ ಸಂಕರ್ಷಣಾದಿದೇವರು, ೧೨ ಕೃಷ್ಣಾವತಾರ ದೇವರು (ಭಾಗವತ); ಕಾವೇರಿ ತೀರದ ಲಕ್ಷ್ಮೀನರಸಿಂಹ ಹಾಗೂ ಯೋಗಾನಾರಾಯಣ ದೇವರುಗಳ ಅಂಗ–ರಂಗ ವೈಭೋಗದ ಸೇವಾವಿಧಿಗಳಿಗೆಂದು ಹಾಗೂ ಬಾಹತ್ತರ ನಿಯೋಗಿಗಳ ಜೀವನೋಪಾಯಕ್ಕೆಂದು ಸೋಮನಾಥಪುರದ ಶಾಸನಸ್ಥ ಸಿದ್ಧಾಯವಾದ ೨೧೦ ಸುವರ್ಣ ಗದ್ಯಾಣಗಳನ್ನು ಸೋಮೆಯ ದಂಡನಾಯಕನ ಸೂಚನೆಯಂತೆ ಅವನ ಅಳಿಯಂದಿರಾದ ಮಲ್ಲಿದೇವ ಹಾಗೂ ಚಿಕ್ಕಕೇತಯ್ಯ ದಂಡನಾಯಕರು ೨೧ ವೃತ್ತಿಗಳನ್ನಾಗಿ ವಿಭಜಿಸಿ ವ್ಯವಸ್ಥೆಗೊಳಿಸಿದ ಅಂಶವನ್ನು ಸಾರುತ್ತದೆ. ಅಲ್ಲದೇ ಮಳವಳ್ಳಿಯ ಸಾರಂಗಪಾಣಿ ದೇವರಿಗೂ ಸುವರ್ಣಾದಾಯವನ್ನು ನೀಡಿದ ಅಂಶವನ್ನು ಹೇಳುತ್ತಾ, ಅಗ್ರಹಾರದಲ್ಲಿದ್ದ ಸರ್ವಶಾಸ್ತ್ರದ ಉಪಾಧ್ಯಾಯರ ತೀರ್ಥವೃತ್ತಿಗೆಂದು ಉಂಬಳಿ ಬಿಟ್ಟಿದ್ದನ್ನೂ ದಾಖಲಿಸಿದೆ. ಮುಮ್ಮಡಿ ನರಸಿಂಹನ ಕಾಲಕ್ಕೆ ಸೇರಿದ ೧೨೮೧ರ ಶಾಸನದಿಂದ ಪ್ರಸನ್ನ ಕೇಶವ ದೇವಾಲಯದ ಪೂಜಾವಿಧಿಗಳಿಗೆಂದು ಇನ್ನಷ್ಟು ದತ್ತಿ ನೀಡಿದ ಅಂಶ ವೇದ್ಯವಾಗುತ್ತದೆ. ಪ್ರಸನ್ನ ಕೇಶವ ದೇವಾಲಯದ ಭಿತ್ತಿಶಿಲ್ಪಗಳ ಬುಡದಲ್ಲಿರುವ ನಾಮಾಂಕಿತ ಶಾಸನಗಳಿಂದ ಮಲಿತಮ್ಮ(೫೮ ಕಡೆ)ನ ರೂವಾರಿತ್ವದಲ್ಲಿ ಬಲ್ಲೆಯ (ಆರು ಕಡೆ), ಮಸಣಿತಮ್ಮ, ಚಾಮಯ್ಯ, ಚೌಡೆಯ ಮುಂತಾದ ಶಿಲ್ಪಿಗಳು ಇಲ್ಲಿನ ಭಿತ್ತಿಶಿಲ್ಪಗಳೂ ಸೇರಿದಂತೆ, ಈ ದೇವಾಲಯವನ್ನು ಚಿತ್ತಾಕರ್ಷಕವಾಗಿ ನಿರ್ಮಿಸಿದ ಅಂಶ ವೇದ್ಯವಾಗುತ್ತದೆ. ಅದೇ ಗುಡಿಯ ಆವರಣದಲ್ಲಿರುವ ಮುಮ್ಮಡಿ ಬಲ್ಲಾಳನ ಕಾಲದ ೧೩೦೦ ರ ಶಾಸನ, ಪಂಚಲಿಂಗದೇವರು ಹಾಗೂ ಹೊಳೆಯತಡಿ ನರಸಿಂಹದೇವರುಗಳಿಗೆ ಏಳು ಊರ ವೃತ್ತಿ, ಪ್ರಸನ್ನ ಕೇಶವ, ಹೊಳೆತಡಿ ಲಕ್ಷ್ಮೀ ನರಸಿಂಹದೇವರು, ಮಳವಳ್ಳಿ ಸಾರಂಗಪಾಣಿ ಹಾಗೂ ತಲಕಾಡು ಕೀರ್ತಿನಾರಾಯಣ ದೇವರುಗಳ ವೈಷ್ಣವ ಸ್ಥಾನಗಳಿಗೆಂದು ೧೪ ಊರುಗಳನ್ನು ದತ್ತಿ ಬಿಟ್ಟಿದ್ದ ಅಂಶವನ್ನು ತಿಳಿಸುತ್ತದೆ. ಅಲ್ಲೇ ಇರುವ ೧೩೨೬ರ ಇನ್ನೊಂದು ಶಾಸನದಿಂದ, ಕೇಶವ ದೇವರ ಸೇವೆಗೆಂದು ಹಿಂದೆ ಬಿಟ್ಟಿದ್ದ ೨೧೦ ಗದ್ಯಾಣಗಳಲ್ಲಿ, ಕೆರೆ–ಕಾಲುವೆಗಳ ಕಾರ್ಯಕ್ಕೆಂದು ಕಟ್ಟುಗುತ್ತಿಗೆಯಾಗಿ ವರುಷಂಪ್ರತಿ ಆರು ಗದ್ಯಾಣಗಳನ್ನು ವೈಷ್ಣವ ಮಹಾಜನರು ದತ್ತಿಬಿಟ್ಟ ಅಂಶ ಗೊತ್ತಾಗುತ್ತದೆ. ಇದರಿಂದ ಕಾವೇರಿ ನದಿಯ ನೀರನ್ನು ಕಾಲುವೆಗಳ ಮೂಲಕ ನೀರಾವರಿಗೆ ಬಳಸಿಕೊಳ್ಳುತ್ತಿದ್ದ ಅಂಶ ವೇದ್ಯವಾಗುತ್ತಿದ್ದು, ಇತರ ಶಾಸನಗಳಲ್ಲೂ ಈ ಬಗ್ಗೆ ಉಲ್ಲೇಖವಿದೆ. ಈ ಶಾಸನಗಳಿಂದ ಸೋಮನಾಥಪುರವು ಪ್ರಮುಖ ಅಗ್ರಹಾರವಾಗಿ ಹೊಯ್ಸಳರ ರಾಜಾಶ್ರಯದಲ್ಲಿ ಸಮೃದ್ಧವಾಗಿದ್ದ ಅಂಶ ವೇದ್ಯವಾಗುತ್ತದೆ. ಆದರೆ ೧೪೯೭ರ ವೇಳೆಗೆ ಅವನತಿ ಹೊಂದಿದ್ದ ಈ ಅಗ್ರಹಾರವನ್ನು ಸಾಳುವ ನರಸಿಂಹನ ಆದೇಶದಂತೆ ನಂಜರಾಜ

ಒಡೆಯನು ಜೀರ್ಣೋದ್ಧಾರ ಮಾಡಿ ಬೇವಿನಹಳ್ಳಿಯನ್ನು ದತ್ತಿ ನೀಡಿದ ಅಂಶ ಇಲ್ಲಿನ ಶಾಸನವೊಂದರಿಂದ ಗೊತ್ತಾಗುತ್ತದೆ. ಅಲ್ಲೇ ಇರುವ ೧೫೫೦ರ ಶಾಸನದಿಂದ, ಸೋಮನಾಥಪುರವು ವಶಿಷ್ಠಾಶ್ರಮವಿದ್ದ ಪುಣ್ಯಕ್ಷೇತ್ರವಾಗಿದ್ದು, ಪಂಚಲಿಂಗದೇವರಿಗೆ ದತ್ತಿಬಿಟ್ಟ ಅಂಶ ವೇದ್ಯವಾಗುತ್ತದೆ. ನೆರೆಯ ಉಕ್ಕಲಗೆರೆಯ ೧೬೭೬ರ ಶಾಸನದಿಂದ ಕಂಠೀರವ ನರಸರಾಜರು ಸೋಮನಾಥಪುರದಲ್ಲಿ ಪಟ್ಟಾಭಿರಾಮ ದೇವರನ್ನು ಪ್ರತಿಷ್ಠಾಪಿಸಿ ಉಕ್ಕಲ್ಗೆರೆ ಗ್ರಾಮವನ್ನು ದತ್ತಿ ಬಿಟ್ಟ ಅಂಶ ಸ್ಪಷ್ಟವಾಗುತ್ತದೆ.

ಸೋಮನಾಥಪುರದ ದೇವಾಲಯಗಳಲ್ಲಿ ಪಂಚಲಿಂಗೇಶ್ವರ ಹಾಗೂ ಹೊಳೆತಡಿ ನರಸಿಂಹ ದೇವಾಲಯಗಳು ೧೨೬೮ರ ವೇಳೆಗಾಗಲೇ ನಿರ್ಮಾಣಗೊಂಡಿದ್ದು, ಪ್ರಸನ್ನ ಕೇಶವ ದೇವಾಲಯ ಸಂಕೀರ್ಣಕ್ಕಿಂತ ಸ್ವಲ್ಪ ಪ್ರಾಚೀನವಾದರೂ ಈ ಎರಡು ಗುಡಿಗಳಿಂದು ಶಿಥಿಲಾವಸ್ಥೆಯಲ್ಲಿದ್ದು ಮೂಲೆಗುಂಪಾಗಿವೆ. ಸೋಮನಾಥಪುರದ ಈಶಾನ್ಯ ಭಾಗದಲ್ಲಿ ಕೇಶವ ದೇವಾಲಯದಿಂದ ಅನತಿ ದೂರದಲ್ಲಿರುವ ಪಂಚಲಿಂಗೇಶ್ವರ ಗುಡಿಯಲ್ಲಿ ಬಿಜ್ಜಲೇಶ್ವರ, ಹೆಮ್ಮೇಶ್ವರ, ರೇವಳೇಶ್ವರ, ಸೋಮೇಶ್ವರ ಹಾಗೂ ಭೈರವೇಶ್ವರ ಲಿಂಗಗಳಿದ್ದವೆಂದು ಶಾಸನ ತಿಳಿಸುತ್ತದೆ. ಆದರೆ ಶಾಸನದಲ್ಲಿ ಹೇಳಿರುವಂತೆ ಇದು ಪಂಚಕೂಟವನ್ನು ಹೊಂದಿರದೆ, ಒಂದೇ ಸಾಲಿನಲ್ಲಿ ನಾಲ್ಕು ಗರ್ಭಗೃಹ ಹಾಗೂ ಅಂತರಾಳಗಳನ್ನು ಹೊಂದಿರುವ ಚತುಷ್ಕೂಟವಾಗಿದ್ದು, ನಾಲ್ಕಕ್ಕೂ ಸೇರಿದಂತೆ ವಿಶಾಲವಾದ ತೆರೆದ ಸಭಾಮಂಟಪವಿದೆ. ಇಲ್ಲಿ ಹೆಸರಿಸಿರುವ ಐದು ಲಿಂಗಗಳಲ್ಲಿ ಹೆಮ್ಮೆಶ್ವರ ಹಾಗೂ ರೇವಳೇಶ್ವರ ಲಿಂಗಗಳನ್ನು ದಂಡನಾಯಕನು ತನ್ನ ತಂದೆ–ತಾಯಿ ಹೆಸರಲ್ಲೂ, ಸೋಮನಾಥ ಲಿಂಗವನ್ನು ತನ್ನ ಹೆಸರಲ್ಲೂ ಪ್ರತಿಷ್ಠಾಪಿಸಿರುವುದು ಉಲ್ಲೇಖಾರ್ಹವಾಗಿದೆ. ಆದರಿಂದು ಇಲ್ಲಿ ಕೇವಲ ಪಾಣಿಪೀಠಗಳಷ್ಟೇ ಕಾಣಸಿಗುತ್ತವೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವಿಂದು ಶಿಥಿಲಾವಸ್ಥೆಯಲ್ಲಿದ್ದರೂ, ಗರ್ಭಗೃಹದ ಮೇಲಿರುವ ಆಕರ್ಷಕ ಶಿಖರ, ಹಾಗೂ ಸಭಾಮಂಟಪದ ಹೊಯ್ಸಳ ಕಂಬಗಳಿಂದಾಗಿ ಉಲ್ಲೇಖಾರ್ಹವಾಗಿದೆ. ಈ ದೇವಾಲಯದ ದಕ್ಷಿಣ ಭಾಗದಲ್ಲಿ ಸೋವಲೇಶ್ವರ ದೇವಾಲಯವಿತ್ತೆಂದು ಶಾಸನೋಲ್ಲೇಖವಿದೆಯಾದರೂ ಇಂದು ಆ ಹೆಸರಿನ ಯಾವುದೇ ದೇವಾಲಯವಿಲ್ಲಿ ಉಳಿದಿಲ್ಲ. ಈ ದೇವಾಲಯದ ಸುತ್ತ ಬೆಳೆದಿರುವ ಮುಳ್ಳುಗಂಟಿಯನ್ನು ಸ್ವಚ್ಛಪಡಿಸಿ, ಪ್ರವಾಸಿಗರ ವೀಕ್ಷಣೆಗೆ ಇದನ್ನು ಸಜ್ಜುಗೊಳಿಸುವ ಅಗತ್ಯವಿದೆ.

ಕೇಶವ ದೇವಾಲಯದ ಆಗ್ನೇಯಕ್ಕೆ ಇರುವ ಮೊಂಡಸಾಲೆಗುಡಿ (ಶಾಸನೋಕ್ತ ಹೊಳೆಯತಡಿ ನರಸಿಂಹದೇವರು)ಯು ಹೊಳೆಯ ಸಮೀಪದಲ್ಲಿದ್ದು, ಬದಿಯಲ್ಲೇ ರಾಮಸ್ವಾಮಿ ನಾಲೆಯು ಹಾದುಹೋಗಿದೆ. ಈ ಗುಡಿಯು ಗರ್ಭಗೃಹ, ತೆರೆದ ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದ್ದು, ಶಿಥಿಲಾವಸ್ಥೆಯಲ್ಲಿದ್ದರೂ ದೇವಾಲಯದ ಬಾಗಿಲುವಾಡಗಳು ಆಕರ್ಷಕವಾಗಿದ್ದು, ನವರಂಗದ ಕಂಬ–ಛತ್ತುಗಳು ನಯನಮನೋಹರವಾಗಿವೆ. ಗರ್ಭಗೃಹದಲ್ಲಿ ಹಿಂದೆ ನರಸಿಂಹನ ಮೂರ್ತಿ ಇದ್ದಿತ್ತೆಂದು



ತೋರುತ್ತದೆ. ಆದರೆ ಇಂದು ಬರಿದಾಗಿದೆ. ದೇವಾಲಯದ ಭಿತ್ತಿಯು ನಿರಾಡಂಬರವಾಗಿದ್ದರೂ, ಅಲಂಕಾರಿಕ ಅರೆಕಂಬಗಳಿವೆ. ಇದನ್ನು ದುರಸ್ತಿ ಮಾಡಿ ಸಂರಕ್ಷಿಸುವ ಮೂಲಕ ಪ್ರವಾಸಿಗರ ವೀಕ್ಷಣೆಗೆ ಅವಕಾಶ ಕಲ್ಪಿಸಬಹುದಾಗಿದೆ.

ಇಲ್ಲಿಯ ಪ್ರಸನ್ನ ಕೇಶವ ದೇವಾಲಯವು ಹೊಯ್ಸಳ ವಾಸ್ತುಶಿಲ್ಪ ಶೈಲಿಯ ಪೂರ್ಣ ವಿಕಾಸದ ಪರಾಕಾಷ್ಠೆಯನ್ನು ಬಿಂಬಿಸುವ ಸುಂದರ ಕಲಾಕೃತಿಯಾಗಿದ್ದು, ಕೇಂದ್ರ ಪುರಾತತ್ವ ಇಲಾಖೆಯಿಂದ ಸಂರಕ್ಷಿಸಲ್ಪಟ್ಟಿರುವ ರಾಷ್ಟ್ರೀಯ ಮಹತ್ವದ ಸ್ಮಾರಕವಾಗಿದೆ. ವಿಶಾಲವಾದ ಪ್ರಾಕಾರದ (೨೧೫ x ೧೭೭ ಅಡಿ) ನಡುವೆ, ಬಹು(೧೬)ಕೋನಾಕಾರದ ತಳವಿನ್ಯಾಸದ ಮುಕ್ಕಾಲು ಮೀಟರ್ ಎತ್ತರದ ಜಗತಿಯ ಮೇಲೆ ಪೂರ್ವಾಭಿಮುಖವಾಗಿ ನಿಂತಿರುವ ಇದೊಂದು ತ್ರಿಕೂಟಾಚಲವಾಗಿದೆ. ಪ್ರಾಕಾರದ ಒಳಭಾಗದುದ್ದಕ್ಕೂ ಹಿಂದೆ ಇದ್ದ ೬೪ ಕಿರುಗುಡಿಗಳಲ್ಲಿ ಪ್ರತ್ಯೇಕ ದೇವತಾ ಶಿಲ್ಪಗಳಿದ್ದು, ಮುಂದೆ ಕೈಸಾಲೆ ಮಂಟಪಗಳಿವೆ. ಎರಡು ಅಂಕಣದ ಈ ೬೪ ಕಿರುಗುಡಿಗಳಲ್ಲಿದ್ದ ದೇವತೆಗಳ ಪಟ್ಟಿಯೂ ಶಾಸನದಲ್ಲಿದೆ. ಬಹುಕೋನಾಕಾರದಲ್ಲಿರುವ ಈ ದೇವಾಲಯದ ತಳವಿನ್ಯಾಸಕ್ಕೆ ಅನುಗುಣವಾಗಿರುವ ಜಗತಿಯು, ದೇವಾಲಯದ ಭಿತ್ತಿಯನ್ನು ಅಲಂಕರಿಸಿರುವ ಶಿಲ್ಪವೈಭವವನ್ನು ವೀಕ್ಷಿಸಲು, ಕಲಾಸಿರಿಯನ್ನು ಆಸ್ವಾದಿಸಲು ವೀಕ್ಷಕರಿಗೆ ಅನುಕೂಲ ಕಲ್ಪಿಸಿದೆ. ಜಗತಿಯನ್ನು ಏರಲು ಇರುವ ಸೋಪಾನಗಳ ಇಕ್ಕೆಲದಲ್ಲಿ ಕಿರುಗುಡಿಗಳಿದ್ದು, ಜಗತಿಯನ್ನು ಆನೆಗಳು ಹೊತ್ತು ನಿಂತಿರುವಂತೆ ಶಿಲ್ಪಿಸಲಾಗಿದೆ. ಈ ದೇವಾಲಯದ ಭಿತ್ತಿಯ ಕೆಳಭಾಗವನ್ನು ಕ್ರಮವಾಗಿ ಆನೆ, ಕುದುರೆ, ಅಶ್ವರೋಹಿ, ಲತಾ–ಬಳ್ಳಿಗಳ ಅಲಂಕಾರಿಕ ಪಟ್ಟಿಕೆಗಳಿಂದಲೂ, ಮಧ್ಯಭಾಗವನ್ನು ರಾಮಾಯಣ, ಮಹಾಭಾರತ ಹಾಗೂ ಭಾಗವತಗಳಿಗೆ ಸಂಬಂಧಿಸಿದ ಕಥನಶಿಲ್ಪಗಳಿಂದಲೂ ಅಲಂಕರಿಸಲಾಗಿದೆ. ಗರ್ಭಗೃಹ ಹಾಗೂ ಅಂತರಾಳ ಭಾಗಗಳ ಹೊರಭಿತ್ತಿಯಲ್ಲಿ ಎಲ್ಲಕ್ಕೂ ಮೇಲೆ ಅಲಂಕಾರಿಕ ಕಂಬ, ಪರಿವಾರ ದೇವತಾ ಶಿಲ್ಪ ಹಾಗೂ ಶಿಖರ ಮಾದರಿಗಳನ್ನು ಕಿರು ಪ್ರಮಾಣದಲ್ಲಿ ಕೆತ್ತಲಾಗಿದ್ದು, ನಡುವೆ ಸಿಂಹಗಳನ್ನು ಬಿಡಿಸಲಾಗಿದೆ. ಅಲ್ಲದೆ ಮಕರ ಹಾಗೂ ಹಂಸಗಳ ಕೆತ್ತನೆಯುಳ್ಳ ಪಟ್ಟಿಕೆಯನ್ನು ಗರ್ಭಗೃಹ ಭಾಗದಲ್ಲಿ ಕಾಣಬಹುದಾಗಿದೆ. ಈ ಗುಡಿಯ ಗರ್ಭಗೃಹ ಭಾಗದ ಭಿತ್ತಿಯ ಮೇಲೆ ಸುಮಾರು ಅರ್ಧಮೀಟರ್ ಪ್ರಮಾಣದಲ್ಲಿ ಕೆತ್ತಿರುವ ನರಸಿಂಹ, ಲಕ್ಷ್ಮೀನರಸಿಂಹ, ನಾಟ್ಯಗಣಪ, ವರಾಹ, ವೇಣುಗೋಪಾಲ, ಈಶ್ವರ, ಇಂದ್ರ, ಹಯಗ್ರೀವ, ಸೂರ್ಯ, ಬ್ರಹ್ಮ, ವಿಷ್ಣು, ರತಿ–ಮನ್ಮಥ, ಮಹಿಷಮರ್ಧಿನಿ, ಯಮ, ವರಾಹ, ವಾಮನ, ನರಸಿಂಹ, ನಾಟ್ಯಸರಸ್ವತಿ, ನಾಟ್ಯಲಕ್ಷ್ಮಿ, ಮುಂತಾದ ೧೬೪ ವೈವಿಧ್ಯಮಯ ಶಿಲ್ಪಗಳ ಸೂಕ್ಷ್ಮ ಕುಸುರಿ ಕೆತ್ತನೆಯಿಂದಾಗಿ ಒಂದಕ್ಕಿಂತ ಮತ್ತೊಂದು ಉತ್ಕೃಷ್ಟವಾಗಿವೆ. ಇವುಗಳಲ್ಲಿ ಕೆಲವು ಶಿಲ್ಪಗಳ ಬುಡದಲ್ಲಿ ಶಿಲ್ಪಿಗಳ ಹೆಸರು, ಅಂಕಿತಗಳನ್ನೂ ನೋಡಬಹುದಾಗಿದೆ. ಎಲ್ಲಕ್ಕೂ ಮೇಲೆ ದೇವಾಲಯದ ಸುತ್ತಲೂ ಲೋವೆಕಲ್ಲಿದೆ. ತ್ರಿಕೂಟಾಚಲವಾಗಿರುವ ಇದರ ಮೂರು ಗರ್ಭಗೃಹಗಳಿಗೂ ಸಮಪ್ರಮಾಣದಿಂದ ಕೂಡಿದ ಚಿತ್ತಾಕರ್ಷಕವಾದ ಶಿಖರಗಳಿವೆ. ಶಿಖರಗಳ ಮೇಲಿನ ಕುಸುರಿ ಕೆತ್ತನೆ ವಿಸ್ಮಯಕರವಾಗಿದೆ. ಸುಖನಾಶಿಗಳಿಗೆ ಸುಂದರ ಕೀರ್ತಿಮುಖಗಳಿವೆ.

ಜಗತಿಯ ಮೆಟ್ಟಿಲುಗಳನ್ನೇರಿ ದೇವಾಲಯವನ್ನು ಆಕರ್ಷಕ ಬಾಗಿಲವಾಡದ ಮೂಲಕ ಪ್ರವೇಶಿಸುತ್ತಿದ್ದಂತೆ ಎದುರಾಗುವ ಏಳು ಅಂಕಣದ ರಂಗಮಂಟಪ ಹಾಗೂ ಒಂಭತ್ತು ಅಂಕಣದ ವಿಶಾಲವಾದ ನವರಂಗಗಳಲ್ಲಿರುವ ಕಂಬಗಳು ಚರಕಿಯಂತ್ರ ನಿರ್ಮಿತವಾಗಿವೆ. ರಂಗಮಂಟಪದಲ್ಲಿರುವ ನಕ್ಷತ್ರಾಕಾರದ, ಬಹು (೩೨)ಕೋನಾಕಾರದ ಕಂಬಗಳು, ಹೊತ್ತು ನಿಂತಿರುವ ಪ್ರಧಾನ ಭುವನೇಶ್ವರಿ (ಛತ್ತು)ಯ ಜೊತೆಗೆ ಪ್ರತಿ ಅಂಕಣದ ಛತ್ತು ಆಕರ್ಷಕ ಕೆತ್ತನೆಗಳಿಂದ ಕೂಡಿದ್ದು, ವೈವಿಧ್ಯಮಯವಾಗಿವೆ. ನವರಂಗದ ಮಧ್ಯಭಾಗದಲ್ಲಿರುವ ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರಿದ್ದು, ನಡುವಣ ಛತ್ತು ಇಳಿಬಿದ್ದ ಕಮಲದ ಮೊಗ್ಗನ್ನು ಹೊಂದಿರುವ ನಯವಾದ ಛತ್ರಿಯಂತೆ ಭಾಸವಾಗುತ್ತದೆ. ಇದೇ ರೀತಿ ಪೂರ್ವದ್ವಾರದ ಬಳಿಯ ಭುವನೇಶ್ವರಿಯೂ ವಿಶಿಷ್ಟವಾಗಿದ್ದು, ಅದರಲ್ಲಿ ಅಷ್ಟದಿಕ್ಪಾಲಕರು, ಸೇವಕರು, ನರ್ತಕರು, ಕಿರುಶಿಖರಗಳು, ಹಾಗೂ ಶೈವ–ವೈಷ್ಣವ ವಿಗ್ರಹಗಳಿದ್ದು, ಮಧ್ಯದಲ್ಲಿ ಕಮಲದ ಮೊಗ್ಗನ್ನು ಇಳಿಬಿಡಲಾಗಿದೆ. ಪ್ರಧಾನ ಗರ್ಭಗೃಹದಲ್ಲಿದ್ದ ಕೇಶವ ಶಿಲ್ಪವಿಂದು ಕಣ್ಮರೆಯಾಗಿದ್ದು, ಬದಲಿ ಮೂರ್ತಿಯನ್ನಿಡಲಾಗಿದೆ. ಪ್ರಧಾನ ಗರ್ಭಗೃಹದ ಬಲಭಾಗದ ಗರ್ಭಗೃಹದಲ್ಲಿ ಕೊಳಲನ್ನು ನುಡಿಸುತ್ತಿರುವ ವೇಣುಗೋಪಾಲನಿದ್ದರೆ, ಎಡಭಾಗದ ಗರ್ಭಗೃಹದಲ್ಲಿ ಶಂಖ, ಚಕ್ರ, ಗದೆ ಹಾಗೂ ಪದ್ಮಗಳನ್ನು ಹೊಂದಿರುವ ಚತುರ್ಭುಜಧಾರಿ ಜನಾರ್ದನನ ಶಿಲ್ಪವಿದೆ. ಸುಮಾರು ಒಂದೂವರೆ ಮೀಟರ್ ಎತ್ತರವಿರುವ ಈ ಶಿಲ್ಪಗಳು ಕಲಾತ್ಮಕವಾಗಿದ್ದು, ಪ್ರತಿಯೊಂದು ಗರ್ಭಗೃಹದ ಬಾಗಿಲವಾಡವೂ ಚಿತ್ತಾಕರ್ಷಕವಾದ ಬಹುಶಾಖಾ ಅಲಂಕಾರಿಕ ಪಟ್ಟಿಕೆಗಳನ್ನು ಹೊಂದಿದ್ದು, ಲಲಾಟದಲ್ಲಿ ಕಿರುಮೂರ್ತಿಗಳಿವೆ. ಗರ್ಭಗುಡಿಗಳ ಮುಂದಿರುವ ಅಂತರಾಳದ ಬಾಗಿಲವಾಡಗಳೂ ಅಲಂಕಾರಿಕ ಕುಸುರಿ ಕೆತ್ತನೆಗಳಿಂದ ಕೂಡಿದ್ದು, ವೀಕ್ಷಕರನ್ನು ಮೂಕವಿಸ್ಮಿತಗೊಳಿಸುತ್ತವೆ. ಈ ದೇವಾಲಯದ ಪ್ರಾಕಾರದ ಕಿರುಕೋಷ್ಟಗಳಲ್ಲಿದ್ದ ಮೂರ್ತಿಗಳೂ ಸೇರಿದಂತೆ ಸುತ್ತಾಲಯದ ಉತ್ತರ ಹಾಗೂ ಪಶ್ಚಿಮ ಭಾಗಗಳು ಶಿಥಿಲಗೊಂಡಿದ್ದು, ಅವುಗಳನ್ನು ಸುಮಾರು ೧೬ನೆಯ ಶತಮಾನದಲ್ಲಿ ದುರಸ್ತಿ ಮಾಡಲಾಗಿದ್ದು, ಅದೇ ಸಂದರ್ಭದಲ್ಲಿ ಮುಂದಣ ದೀಪಸ್ತಂಭ ಹಾಗೂ ಮಂಟಪಗಳು ನಿರ್ಮಾಣಗೊಂಡಿರುವಂತಿದೆ. ಆಂಗ್ಲ ಅಧಿಕಾರಿಗಳಿಂದಾಗಿ, ೧೯ನೆಯ ಶತಮಾನದಲ್ಲಿ ದುರಸ್ತಿಯನ್ನು ಕಂಡಿದ್ದ, ಇದನ್ನು ಸಂರಕ್ಷಿಸಲು ೧೯೨೪ರಿಂದ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ. ಗುಡಿಯ ಒಳಭಾಗಕ್ಕೆ ವಿದ್ಯುತ್ ಕಲ್ಪಿಸುವ ಮೂಲಕ, ಅಲ್ಲಿನ ಸೌಂದರ್ಯವನ್ನು ಅಸ್ವಾದಿಸಲು ಪ್ರವಾಸಿಗರಿಗೆ ಅವಕಾಶ ಕಲ್ಪಿಸಲಾಗಿದೆ. ಕಂಠೀರವ ನರಸರಾಜರು ೧೬೩೭ರಲ್ಲಿ ನಿರ್ಮಿಸಿರುವ ಪಟ್ಟಾಭಿರಾಮ ದೇವಾಲಯವು ಇಲ್ಲಿಯ ಇನ್ನೊಂದು ಪ್ರಾಚೀನ ಗುಡಿಯಾಗಿದೆ. ಉಳಿದಂತೆ ಊರಿನಲ್ಲಿ ಅನೇಕ ನವೀನ ಗುಡಿಗಳಿದ್ದು, ಪೊಲೀಸ್ ಉಪಠಾಣೆ ಬಳಿ ಸುಮಾರು ೧೭ನೆಯ ಶತಮಾನದ ವೀರಗಲ್ಲೊಂದಿದೆ.

**ಸೋಸಲೆ (೭,೦೬೪)** : ತಾಲೂಕು ಕೇಂದ್ರ ತಿ.ನರಸೀಪುರದಿಂದ ನಾಲ್ಕು ಕಿ.ಮೀ. ಅಂತರದಲ್ಲಿ ಕಾವೇರಿ ಎಡದಂಡೆಯ ಮೇಲಿರುವ ಹೋಬಳಿ ಕೇಂದ್ರ. ನೆರೆಯ



ಬೆನಕನಹಳ್ಳಿ ಬಳಿ ಹೊಳೆಯಂಚಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ಪತ್ತೆಯಾಗಿವೆ. ಹಿಂದೆ ಬಡಗೆರೆ–೩೦೦ ನಾಡಿನಲ್ಲಿದ್ದ ಇದು, ಗಂಗರಷ್ಟು ಪುರಾತನ ನೆಲೆಯಾಗಿದ್ದು, ಸುಮಾರು ೮–೯ನೆಯ ಶತಮಾನಕ್ಕೆ ಸೇರಿದ ಗಂಗ ಶಾಸನವಿಲ್ಲಿದೆ. ವಿಕ್ರಮಾದಿತ್ಯ ಅರಸನು ನಾಡನ್ನು ಆಳುತ್ತಿದ್ದಾಗ ಸುಗ್ಗಿಯಲ್ಲಿ ಒಂದು ಪೊನ್ನನ್ನು ದಾನ ಬಿಟ್ಟಿದ್ದನ್ನು ಇದು ದಾಖಲಿಸುತ್ತದೆ. ಮಧ್ವಾಚಾರ್ಯರ ಶಿಷ್ಯಪರಂಪರೆಗೆ ಸೇರಿದ ವ್ಯಾಸತೀರ್ಥರಿಂದ ಸ್ಥಾಪನೆಗೊಂಡ ವ್ಯಾಸರಾಯರ ಮಠವಿಲ್ಲಿದೆ. ವ್ಯಾಸರಾಜಮಠಕ್ಕೆ ದತ್ತಿ ನೀಡಿದ ಅಂಶವನ್ನು ದಾಖಲಿಸುವ ವಿವಿಧ ರಾಜಮನೆತನಕ್ಕೆ ಸೇರಿದ ೧೪ ತಾಮ್ರ ಶಾಸನಗಳು ದೊರೆತಿವೆ. ಇವು ಸಂಸ್ಕೃತ, ಕನ್ನಡ, ತೆಲುಗು ಹಾಗೂ ತಮಿಳು ಭಾಷೆಗಳಲ್ಲಿವೆ. ಕೃಷ್ಣದೇವರಾಯ ಯಲಹಂಕನಾಡ ಇಮ್ಮಡಿ ಕೆಂಪೇಗೌಡ, ವಿಜಯರಘುನಾಥ, ತಿರುಮಲನಾಯಕ, ಶ್ರೀರಂಗರಾಯ, ಮಧುರೆಪಾಂತ್ರ ಚೊಕ್ಕನಾಥ ಕೃಷ್ಣರಾಜ ಒಡೆಯ, ದಿವಾನ ಪೂರ್ಣಯ್ಯ ಮುಂತಾದವರು ದತ್ತಿಬಿಟ್ಟ ಅಂಶ ವೇದ್ಯವಾಗುತ್ತದೆ.

ಇಲ್ಲಿಯ ವ್ಯಾಸರಾಜಮಠವನ್ನು ೧೯೨೪ರ ನದಿ ಪ್ರವಾಹದ ನಂತರ, ಮೂರು ಕಿ.ಮೀ. ಅಂತರದ ವ್ಯಾಸರಾಜಪುರಕ್ಕೆ ಸ್ಥಳಾಂತರಿಸಲಾಗಿದೆ. ನೆರೆಯ ತಿರುಮಕೂಡಲಿನಲ್ಲೂ ಇದರ ಶಾಖಾಮಠವಿದೆ ಸೋಸಲೆಯಲ್ಲಿ ಹೊನ್ನಾದೇವಿ, ವೀರಭದ್ರ, ಕೊಳಲು ಗೋಪಾಲಕೃಷ್ಣ, ಕೋಟೆಗಣಪತಿ, ಚಂಡಿಕೇಶ್ವರ ಮುಂತಾದ ದೇವಾಲಯಗಳಿವೆ. ಇವುಗಳಲ್ಲಿ ಹೊನ್ನಾದೇವಿ ಗುಡಿಯು ಬಹುಶಃ ಗಂಗರ ಕಾಲದ್ದಾಗಿದ್ದು, ಪ್ರಧಾನ ದೇವತೆ ವೈಷ್ಣವಿಯೊಂದಿಗೆ, ಸಪ್ತಮಾತೃಕಾ ಶಿಲ್ಪಗಳೂ ಗರ್ಭಗುಡಿಯಲ್ಲಿವೆ. ಇದಕ್ಕಿರುವ ಎರಡು ನವರಂಗಗಳಲ್ಲಿ ಒಳಗಿನದರಲ್ಲಿ ವೃತ್ತಾಕಾರದ ಕಂಬಗಳಿದ್ದು, ಭುವನೇಶ್ವರಿ ಇದ್ದರೆ, ಹೊರಗಿನ ನವರಂಗದ ಛತ್ತಿನಲ್ಲಿರುವ ಭುವನೇಶ್ವರಿಯೂ ಅಲಂಕಾರಯುಕ್ತವಾಗಿದೆ. ಈ ಗುಡಿಗಿರುವ ಮುಖಮಂಟಪದ ಛತ್ತಲ್ಲಿ ಇಳಿಬಿಟ್ಟ ಕಮಲ ಕೆತ್ತನೆ ಇದೆ. ಮುಖಮಂಟಪದ ಕಪೋತ ಭಾಗದ ಗಾರೆಯ ಕೋಷ್ಟಕಗಳಲ್ಲಿ ಮೈಸೂರು ಶೈಲಿಯ ಚಿತ್ತಾಕರ್ಷಕ ಗಾರೆಶಿಲ್ಪಗಳಿವೆ. ಸನಿಹದಲ್ಲೇ ಇರುವ ವೀರಭದ್ರನ ಗುಡಿಯು ಹೊಯ್ಸಳ ಶೈಲಿಯಲ್ಲಿದ್ದು, ಗರ್ಭಗೃಹ ಹಾಗೂ ಅರ್ಧಮಂಟಪಗಳನ್ನು ಹೊಂದಿದ್ದು, ನಂತರದ ಸೇರ್ಪಡೆಯಾಗಿರಬಹುದಾದ ನವರಂಗಕ್ಕೆ ದ್ವಾರಪಾಲಕ ಶಿಲ್ಪಗಳಿವೆ. ಗುಡಿಯ ಇಕ್ಕೆಲದಲ್ಲಿರುವ ಗರ್ಭಗೃಹ ಒಂದರಲ್ಲಿ ಅರ್ಕೇಶ್ವರ ಲಿಂಗ ಹಾಗೂ ವಿಜಯನಗರ ಕಾಲದ ಭೈರವ ಶಿಲ್ಪಗಳಿದ್ದರೆ, ಇನ್ನೊಂದರಲ್ಲಿ ವೈದ್ಯೇಶ್ವರ ಲಿಂಗವಿದೆ. ಇಲ್ಲಿ ಕೊಳಲು ಗೋಪಾಲಕೃಷ್ಣ ದೇವಾಲಯವಿರುವ ಸ್ಥಳವನ್ನು ಕೃಷ್ಣರಾಜ ಅಗ್ರಹಾರವೆಂದು ಸ್ಥಳೀಯವಾಗಿ ಕರೆಯಲಾಗುತ್ತದೆ. ಗರ್ಭಗೃಹ, ಅಂತರಾಳ ಹಾಗೂ ವಿಶಾಲವಾದ ನವರಂಗಗಳನ್ನು ಹೊಂದಿರುವ ಈ ಗುಡಿಯು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ರಚನೆಯಾಗಿದ್ದು, ಗರ್ಭಗೃಹದಲ್ಲಿ ಶ್ರೀನಿವಾಸನ ಶಿಲ್ಪವಿದೆ. ಮಠಬೀದಿಯಲ್ಲಿರುವ ವ್ಯಾಸರಾಜಮಠವು ಸಾಧಾರಣ ಕಟ್ಟಡವಾಗಿದ್ದು, ಹಿಂದೆ ಮಠದಲ್ಲಿದ್ದ ಉತ್ತಮ ವರ್ಣಚಿತ್ರಗಳಿಂದು ಕಣ್ಮರೆಯಾಗಿವೆ. ಮಠದಲ್ಲಿ ವೈದೇಶ್ವರ ತೀರ್ಥರಿಂದ ವಿದ್ಯಾರತ್ನಾಕರ ತೀರ್ಥರವರೆಗಿನ

ಎಂಟು ಯತಿಗಳ ವೃಂದಾವನವಿದ್ದು, ಜೊತೆಗೆ ರಾಘವೇಂದ್ರರ ಮೃತ್ತಿಕಾ ವೃಂದಾವನವೂ ಇದೆ. ಮಠಕ್ಕೆ ಹೋಗುವ ದಾರಿಯಲ್ಲಿರುವ ಹಳೇಮಸೀದಿಯು ಟಿಪ್ಪುವಿನ ಕಾಲದ್ದಾಗಿದ್ದು, ಆಕರ್ಷಕವಾಗಿದೆ. ಊರಾಚೆ ತಲಕಾಡು ರಸ್ತೆಯಲ್ಲಿ ವೀರಶೈವಯತಿ ಷಡಕ್ಷರ ಶಿವಯೋಗಿಗಳ ಗದ್ದುಗೆ ಇದ್ದು, ತೋಪಿನಮಠ ಎಂದೇ ಪ್ರಸಿದ್ಧವಾಗಿದೆ. ಅಮಾವಾಸ್ಯೆ ಹುಣ್ಣಿಮೆಗಳಲ್ಲಿ ವಿಶೇಷ ಸಮಾರಾಧನೆ ಅಲ್ಲಿ ನಡೆಯುತ್ತದೆ. ಸಿದ್ಧಾಂತ ಶಿಖಾಮಣಿ, ಶಿವಾಧಿತ್ಯ ಶಿಖಾಮಣಿ ಮುಂತಾದ ಆರು ಸಂಸ್ಕೃತ ಗ್ರಂಥ, ಎರಡು ಟೀಕಾಗ್ರಂಥ ಹಾಗೂ ಶಾರೀರಿಕ ಪ್ರಕಾಶಿಕೆ ಅಂತಃಕರಣ ಪ್ರಕಾಶಿಕೆ ಮುಂತಾದ ಆರು ಕನ್ನಡ ಗ್ರಂಥಗಳನ್ನು ರಚಿಸಿರುವ ವೀರಶೈವ ಕವಿ ರೇವಣಾಚಾರ್ಯ ಆರಾಧ್ಯರು ಈ ಗ್ರಾಮದವರು.

**ಹೆಮ್ಮಿಗೆ (೩,೮೮೪):** ತಾಲೂಕು ಕೇಂದ್ರದಿಂದ ೧೨ ಕಿ.ಮೀ. ಪೂರ್ವಕ್ಕೆ ಕಾವೇರಿ ನದಿಯ ಬಲದಂಡೆಯ ಮೇಲಿರುವ ಚಾರಿತ್ರಿಕ ಮಹತ್ವದ ಸ್ಥಳ. ಇದು ಹಿಂದೆ ಮಧ್ಯ ಹಳೆಯ ಶಿಲಾಯುಗ ಹಾಗೂ ನೂತನ ಶಿಲಾಯುಗ ಸಂಸ್ಕೃತಿಯ ಜನರ ವಸತಿ ನೆಲೆಯಾಗಿತ್ತು. ಆ ಸಂಸ್ಕೃತಿಯ ಅವಶೇಷಗಳನ್ನು ಇಲ್ಲಿ ಪುರಾತತ್ವಜ್ಞರು ಬಹಳ ಹಿಂದೆಯೇ ಪತ್ತೆ ಹಚ್ಚಿದ್ದಾರೆ. ಈ ಗ್ರಾಮದ ಸರಹದ್ದಿನಲ್ಲಿ ಕಾವೇರಿ ನದಿಗೆ ನಿರ್ಮಿತವಾಗಿರುವ ಮಾಧವಮಂತ್ರಿ ಆಣೆ ಗಮನಾರ್ಹವಾಗಿದ್ದು, ಆಚೆ ದಡದಲ್ಲಿ ಮುಡುಕುತೊರೆ ಬೆಟ್ಟವಿದೆ. ಹೆಮ್ಮಿಗೆಯಿಂದ ಈವರೆಗೆ ಸುಮಾರು ಎಂಟರಿಂದ ೧೮ನೆಯ ಶತಮಾನಕ್ಕೆ ಸೇರಿದ ಎಂಟು ಶಿಲಾಶಾಸನ ಹಾಗೂ ತಾಮ್ರಶಾಸನಗಳು ವರದಿಯಾಗಿವೆ. ಸುಮಾರು ೮–೯ನೆಯ ಶತಮಾನದ ಗಂಗ ಶಾಸನವೊಂದರಲ್ಲಿ ಇದು 'ಪೆಮಾಗೆ' ಎಂದು ಉಲ್ಲೇಖಿತಗೊಂಡಿದೆ. ಕೃಷ್ಣದೇವರಾಯನ ಕಾಲಕ್ಕೆ ಸೇರಿದ ೧೫೨೬ರ ಶಾಸನ, ೧೫೩೦ ಹಾಗೂ ೧೬೨೭ರ ಇನ್ನೆರಡು ಶಾಸನದಲ್ಲಿ ಗ್ರಾಮದ ಹೆಸರು 'ಹೆಮ್ಮುಗೆ' ಎಂದೇ ದಾಖಲಿಸಲ್ಪಟ್ಟಿದೆ. ಬಹು ಹಿಂದಿನಿಂದಲೂ ಹೆಮ್ಮಿಗೆಯಿಂದ ಮುಡುಕುತೊರೆ ತಲಕಾಡುಗಳಿಗೆ ಹೊಳೆದಾಟಲು ಬಿದಿರಿನ ಮೊಗೆ (ಬುಟ್ಟಿ) ತೆಪ್ಪಗಳನ್ನು ಬಳಸುತ್ತಿದ್ದು, ಇದು ಹೊಳೆದಾಟಲು ಇದ್ದ ಕಡವು ಸ್ಥಳವಾಗಿದ್ದರಿಂದ ಆ ಹೆಸರು ಬಂದಿರುವಂತೆ ತೋರುತ್ತದೆ. ಹೆಮ್ಮಿಗೆಯಲ್ಲಿನ ಶಿಲಾಯುಗ ಸಂಸ್ಕೃತಿಯ ನಿವೇಶನಗಳನ್ನು ೧೯೬೪–೬೫ರ ಸಾಲಿನಲ್ಲಿ ಹನುಮಂತರಾವ್ ಹಾಗೂ ಎಸ್. ನಾಗರಾಜುರವರು ಜಂಟಿಯಾಗಿ ಉತ್ಖನನಕ್ಕೊಳಪಡಿಸಿ ಹಲವಾರು ಮಹತ್ವದ ಅಂಶಗಳನ್ನು ಬೆಳಕಿಗೆ ತಂದಿದ್ದಾರೆ. ಇಲ್ಲಿ ಮಧ್ಯಹಳೆಶಿಲಾಯುಗ ಸಂಸ್ಕೃತಿಯ ಶಿಲಾ ಉಪಕರಣಗಳು ನದಿಯ ಬಲದಂಡೆಯ ಮೇಲೆ ಲಭಿಸಿದೆ. ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ಅವಶೇಷಗಳು, ನೂತನ ಶಿಲಾಯುಗ ಸಂಸ್ಕೃತಿಯ ಮಡಕೆಯ ಚೂರುಗಳು ಹಾಗೂ ಶಿಲಾತಾಮ್ರಯುಗ ಸಂಸ್ಕೃತಿಯ ಕುರುಹುಗಳಷ್ಟೇ ಅಲ್ಲದೇ ಇತಿಹಾಸ ಆರಂಭಕಾಲದ ಮಡಕೆಯ ತುಣುಕುಗಳು ಲಭಿಸಿದ್ದು, ಈ ನೆಲೆಯು ನಿರಂತರವಾಗಿ ಮಾನವರ ವಸತಿ ನೆಲೆಯಾಗಿದ್ದ ಅಂಶ ಇದರಿಂದ ವೇದ್ಯವಾಗುತ್ತದೆ. ಈ ಪ್ರದೇಶದಲ್ಲಿ ಬೂದುಮಣ್ಣು ಯಥೇಚ್ಛವಾಗಿ ಲಭಿಸುತ್ತಿದ್ದು, ಉಲ್ಲೇಖಾರ್ಹವಾಗಿದೆ. ಊರಲ್ಲಿರುವ ವರದರಾಜಸ್ವಾಮಿ, ಸೋಮೇಶ್ವರ, ರಾವಳೇಶ್ವರ



ಮುಂತಾದ ದೇವಾಲಯಗಳು ಶಿಥಿಲಾವಸ್ಥೆಯಲ್ಲಿವೆ. ಎತ್ತರದ ಸ್ಥಳದಲ್ಲಿರುವ ವರದರಾಜ ಗುಡಿಯ ಉಲ್ಲೇಖ ಹೆಮ್ಮುಗೆಯ ೧೫೩೦ರ ಶಾಸನವೊಂದರಲ್ಲಿ ಕಂಡುಬರುತ್ತಿದ್ದು, ವೀರದೇವಣ್ಣ ಒಡೆಯನು ಅಲ್ಲಾಳನಾಥನಿಗೆ ದಾನ ಬಿಟ್ಟ ವಿಷಯವಿದೆ. ಇಲ್ಲಿಯ ಸೋಮೇಶ್ವರ ಗುಡಿಯು ಶಿಥಿಲಾವಸ್ಥೆಯಲ್ಲಿದ್ದು, ಅಲ್ಲಿರುವ ಸೂರ್ಯಬಿಂಬವು ಗಂಗರ ಕಾಲದ ಶಿಲ್ಪಲಕ್ಷಣವನ್ನು ಹೊಂದಿದೆ. ಹೊಳೆ ದಂಡೆಯಲ್ಲಿರುವ ರಾವಣೇ(ಳೇ)ಶ್ವರ ಶಿಲ್ಪವು ದಶರುಂಡವನ್ನುಳ್ಳ ರಾವಣದ್ದಾಗಿದ್ದು, ಈ ಗುಡಿಯ ಪರಿಸರದಲ್ಲೇ ನಾಲ್ಕಾರು ವೀರಗಲ್ಲುಗಳಿವೆ. ಹಳೆಹೆಮ್ಮಿಗೆ ಬಳಿ ಗಜಲಕ್ಷ್ಮಿ, ರಾವಳೇಶ್ವರ ಶಿಲ್ಪಗಳ ಜೊತೆಗೆ ವೀರಗಲ್ಲುಗಳೂ ಇವೆ. ಈಶ್ವರಗುಡಿ ಬಳಿ ಕೂಡ ವೀರಗಲ್ಲಿದೆ. ಅಲ್ಲದೆ ಊರಕೆರೆ ಬಳಿ ಈಶ್ವರಗುಡಿಯೊಂದಿದೆ, ಇಲ್ಲಿಗೆ ಅನತಿದೂರದಲ್ಲಿ ಗೋಚರಿಸುವ ಮಾಧವಮಂತ್ರಿ ಅಣೆಕಟ್ಟನ್ನು ಸುವಾರು ೧೩೬೭ರಲ್ಲಿ ತಲಕಾಡನ್ನಾಳಿದ ವಿಜಯನಗರದ ಮಾಧವಮಂತ್ರಿಯು ಕಾವೇರಿಗೆ ನಿರ್ಮಿಸಿದ್ದಾನೆ. ಅದು ಇಂದಿಗೂ ಕಾರ್ಯ ನಿರ್ವಹಿಸುತ್ತಿದ್ದು, ಸುಮಾರು ೩೫೧೬ ಅಡಿ ಉದ್ದವಿರುವ ಈ ಅಣೆಕಟ್ಟೆಯ ಮಾಧವಮಂತ್ರಿ ನಾಲೆಯು ಸುಮಾರು ೨೯ ಕಿ.ಮೀ. ಸಾಗುತ್ತಿದ್ದು, ೫೫೦ ಎಕರೆ ಹೆಕ್ಟೇರ್ ಜಮೀನಿಗೆ ನೀರುಣಿಸುತ್ತಿದೆ. ಈ ಅಣೆಯ ನಿರ್ಮಾಣದಿಂದಾಗಿ ಮರಳಿನ ಕಣಗಳು ಗಾಳಿಯಲ್ಲಿ ತೇಲಿಬಂದು ತಲಕಾಡು ಪರಿಸರದಲ್ಲಿ ಮರಳುಗುಡ್ಡೆಯು ನಿರ್ಮಾಣಗೊಳ್ಳಲು ಕಾರಣವಾಯಿತೆಂದು ಹೇಳಲಾಗುತ್ತದೆ. ಇತ್ತೀಚೆಗೆ (೨೦೦೨) ಮಾಧವಮಂತ್ರಿ ಅಣೆಕಟ್ಟೆ ಪಕ್ಕದಲ್ಲೇ ಇನ್ನೊಂದು ಅಣೆ ನಿರ್ಮಿಸಿಕೊಂಡಿರುವ ಭರೂಚ ವಿದ್ಯುತ್ ನಿಗಮ ಎಂಬ ಖಾಸಗಿ ಕಂಪೆನಿಯೊಂದು ವಿದ್ಯುತ್ ಉತ್ಪಾದನೆಯಲ್ಲಿ ತೊಡಗಿದೆ. ಹೆಮ್ಮಿಗೆಯಿಂದ ಮುಡುಕುತೊರೆಗೆ ಹೊಳೆ ದಾಟಿ ಹೋಗಲು ಖಾಸಗಿ ಹರಿಗೋಲು ಸೇವೆ ಲಭ್ಯವಿದೆ. ಮುಡುಕುತೊರೆ–ತಲಕಾಡು ಕಾವೇರಿ ಜಲಧಾಮ ಪ್ರವಾಸಿ ಮಂದಿರವೊಂದು ಇಲ್ಲಿ ಇತ್ತೀಚೆಗೆ ಕಾರ್ಯನಿರ್ವಹಿಸುತ್ತಿದೆ.